ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಶುಕ್ರವಾರ, ದಿನಾಂಕ ೧೬ನೇ ಮಾರ್ಚ್ ೧೯೯೦, ಫಾಲ್ಗುಣ ೨೫, ಶಕ ೧೯೧೧

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಮಧ್ಯಾಹ್ನ ೨-೦೦ ಗಂಟೆಗೆ ಸಮಾವೇಶಗೊಂಡಿತು.

(ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದ್ದರು)

೧೯೯೦-೯೧ ನೇ ಸಾಲಿನ ಆಯವ್ಯಯ ಪತ್ರದ ಮಂಡನೆ,

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ ಇವತ್ತಿನ ನಡವಳಿಕೆಗಳ ಬಗ್ಗೆ ನನ್ನದೊಂದು ಕ್ರಿಯಾಲೋಪ ಇದೆ.

ಅಧ್ಯಕ್ಷರು.—ಇನ್ನೂ ಸಭೆಯ ನಡವಳಿಕೆಗಳೇ ಶುರುವಾಗಿಲ್ಲವಲ್ಲ. ಸಭೆಯ ನಡವಳಿಕೆಗಳು ಶುರುವಾದ ಮೇಲೆ ಕ್ರಿಯಾಲೋಪ.

ಶ್ರೀ ವಸಂತ ವಿ. ಸಾಲಿಯಾನ.—ಈ ನಾಟಕ ಸಾಕು, ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು.—ದಯಮಾಡಿ ಎಲ್ಲರೂ ಕುಳಿತುಕೊಳ್ಳಿ ನಾನು ನಿಂತಿದ್ದೇನೆ. ಈ ಸದನದ ಮಾನ್ಯ ಸದಸ್ಯರಾದಂತಹ ಶ್ರೀ ಕೆ. ಎಚ್. ಪಾಟೀಲ್‌ರವರಿಗೆ ೬೫ ವರ್ಷದ ಜನ್ಮ ದಿನ ಹಾಗೆಯೇ ಶ್ರೀ. ಆರ್. ವಿ. ದೇಶಪಾಂಡೆಯವರ ೪೩ ನೇ ವರ್ಷದ ಜನ್ಮ ದಿನ ಮಾನ್ಯ ಸದಸ್ಯರುಗಳ ಜನ್ಮದಿನದಂದು ಈ ಸದನದ ಎಲ್ಲಾ ಸದಸ್ಯರ ಪರವಾಗಿ ನಾನು ಅವರಿಗೆ ಅನಂತ ಶುಭಾಶಯಗಳನ್ನು ಕೋರಿ, ಈ ಸವಿ ದಿನದಂದು ಮಾನ್ಯ ಸದಸ್ಯರುಗಳಿಗೆ ಹೆಚ್ಚಿನ ಸುಖ ಸಂತೋಷ ಹಾಗೂ ಆಯುರಾರೋಗ್ಯ ಮತ್ತು ಅವರು ಹೆಚ್ಚು ಹೆಚ್ಚು ಜನತೆಯ ಸೇವೆಯನ್ನು ಮಾಡಲೆಂದು ಹಾರೈಸುತ್ತೇನೆ.

ಶ್ರೀ ವಾಟಾಳ್‌ನಾಗರಾಜ್.—ಅವರ ವಯಸ್ಸು ತೀರ್ಮಾನವಾಗಿದೆ. ಇದೊಂದು ಹೊಸ ಸಂಪ್ರದಾಯ. ಈ ಸಂಪ್ರದಾಯವನ್ನು ಈ ವರ್ಷದಿಂದ ಪಾಲಿಸುತ್ತಿದ್ದಾರೆ.

(ಗೊಂದಲ)

† ಶ್ರೀ ಎಂ. ರಾಜಶೇಖರಮೂರ್ತಿ (ಹಣಕಾಸು ಮತ್ತು ಸಾಂಖ್ಯಿಕ ಹಣಕಾಸು ಮತ್ತು ಸಾಂಖಿಕ ಸಚಿವರು) —ಮಾನ್ಯ ಅಧ್ಯಕ್ಷರೇ ನಾನು ಈಗ ೧೯೯೦-೯೧ರ ಬಜೆಟ್ ಅಂದಾಜುಗಳನ್ನು ಮಂಡಿಸಲಿದ್ದೇನೆ.

೨. ಇದು ನಿಜಕ್ಕೂ ಒಂದು ಪರ್ವಕಾಲ. ''ಗ್ಲಾಸ್‌ನಾಸ್ಟ್'' ಮತ್ತು ''ಪೆರಿಸ್ಟ್ರಾಯಿಕ''ಗಳ ಹಿನ್ನೆಲೆಯಲ್ಲಿ ವಿಶ್ವದ ಹಲವಾರು ಪ್ರದೇಶಗಳಲ್ಲಿ ಅಲ್ಲಿಯ ಜನಾಭಿಪ್ರಾಯ ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಗಳನ್ನು ಒಮ್ಮಿಂದೊಮ್ಮೆಗೆ ಬದಲಾಯಿಸುತ್ತಿದೆ. ಈ ಪರಿವರ್ತನೆಯ ಬಿರುಗಾಳಿಗೆ ಸಿಕ್ಕ ಅನೇಕ ರಾಷ್ಟ್ರಗಳ ಸ್ವರೂಪವು ಗುರುತಿಸಲಾಗದಷ್ಟು ಬದಲಾವಣೆಯಾಗುತ್ತಿದೆ. ನಾವು ಈ

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಘಟನೆಗಳಿಗೆ ತೀರ ಹತ್ತಿರವಿರುವ ಕಾರಣ, ಅವುಗಳ ಮಹತ್ವವು ಇನ್ನೂ ಪೂರ್ಣವಾಗಿ ಅರ್ಥವಾಗುತ್ತಿಲ್ಲ. ಆದರೆ ಈಗ ಅಲ್ಲಿ ನಡೆಯುತ್ತಿರುವ ಘಟನೆಗಳು ರಾಜಕೀಯ ವಿಪ್ಲವವಲ್ಲದೆ ಮತ್ತೇನೂ ಅಲ್ಲ. ಪ್ರೊಫೆಸರ್ ಜಾನ್ ಕೆನತ್ ಗಾಲ್‌ಬ್ರೈತ್ ಅವರ ಮಾತಿನಲ್ಲಿ ಹೇಳುವುದಾದರೆ, ''ದ್ವಿತೀಯ ಮಹಾ ಯುದ್ಧದ ತರುವಾಯ, ಆರ್ಥಿಕ ಹಾಗೂ ರಾಜಕೀಯ ರಂಗದಲ್ಲಿ ಅಗಾಧ ಪರಿವರ್ತನೆಯನ್ನು ಕಳೆದ ಕೆಲವು ತಿಂಗಳುಗಳಲ್ಲಿ ನಾವು ಕಂಡಿದ್ದೇವೆ. ಇದು ಯಾರೂ ಮುಂಗಾಣದಿದ್ದ ಬದಲಾವಣೆ. ಈ ಬೃಹತ್ ಪರಿವರ್ತನೆ ಯಾರ ಕಲ್ಪನೆಗೂ ನಿಲುಕದ್ದು'' ಇಪ್ಪತ್ತನೆಯ ಶತಮಾನದ ಈ ಕೊನೆಯ ದಶಕದಲ್ಲಿ ಬಹುಶಃ ಹೊಸದೊಂದು ಯುಗದ ನಾಂದಿಯನ್ನು ನಾವು ಕಾಣುತ್ತಿದ್ದೇವೋ ಏನೋ,

೩. ಹಾಗೆಯೇ ನಮ್ಮ ರಾಷ್ಟ್ರದಲ್ಲೂ ಬೇರೊಂದು ಬಗೆಯ ಬದಲಾವಣೆಗಳಾಗಿವೆ. ಕೇಂದ್ರ ಹಾಗೂ ಬಹುತೇಕ ರಾಜ್ಯಗಳಲ್ಲಿ ಸರ್ಕಾರಗಳು ಬದಲಾಗಿವೆ. ಜನತಾ ಪಕ್ಷ ಮತ್ತು ಜನತಾ ದಳದ ಕಳೆದ ಆರು ವರ್ಷಗಳ ಆಳ್ವಿಕೆಯ, ಕೊನೆಗೊಂಡು ಕರ್ನಾಟಕದಲ್ಲೂ ರಾಜಕೀಯ ಬದಲಾವಣೆಯಾಗಿದೆ. ಅಭೂತಪೂರ್ವ ಹಾಗೂ ಭಾರಿ ಬಹುಮತವನ್ನು ಪಡೆದು ಕಾಂಗ್ರೆಸ್ ಪಕ್ಷವು ಮತ್ತೆ ಅಧಿಕಾರಕ್ಕೆ ಬಂದಿದೆ. ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯನೀತಿಗಳಲ್ಲಿ ಮತ್ತು ಕಾರ್ಯಕ್ರಮಗಳಲ್ಲಿ ವಿಶ್ವಾಸ ವಿರಿಸಿ ನಮ್ಮನ್ನು ಮರಳಿ ಅಧಿಕಾರಕ್ಕೆ ತಂದ ಕರ್ನಾಟಕದ ಜನತೆಗೆ ನಾನು ಅಭಿನಂದನೆಗಳನ್ನು ಸಲ್ಲಿಸಬೇಕು. ಜನತೆ ನಮ್ಮಲ್ಲಿರಿಸಿದ ವಿಶ್ವಾಸಕ್ಕೆ ಪಾತ್ರರಾಗುವಂಥ ರೀತಿಯಲ್ಲಿ ಸರ್ವ ಪ್ರಯತ್ನಗಳನ್ನು ಮಾಡುತ್ತೇವೆಂಬ ಆಶ್ವಾಸನೆಯನ್ನು ನಾನು ಈ ಸಂದರ್ಭದಲ್ಲಿ ಅವರಿಗೆ ನೀಡುತ್ತೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ ನನ್ನ ಕ್ರಿಯಾಲೋಪವೇನೆಂದರೆ ರಾಜ್ಯಪಾಲರ ಭಾಷಣಕ್ಕೆ ವಂದನಾನಿರ್ಣಯ ಈ ಸಭೆಯಲ್ಲಿ ಇತ್ಯರ್ಥವಾದ ನಂತರ ಮಾನ್ಯ ಹಣಕಾಸಿನ ಸಚಿವರು ಆಯವ್ಯಯ ಪಟ್ಟಿಯನ್ನು ಮಂಡಿಸಬಹುದು. ಆದರೆ ರಾಜ್ಯಪಾಲರ ಭಾಷಣಕ್ಕೆ ಈ ಸಭೆಯಲ್ಲಿ ವಂದನಾನಿರ್ಣಯ ಇತ್ಯರ್ಥವಾಗದೇ, ನಿರ್ಣಯವಾಗದೆ ಮಾನ್ಯ ಹಣಕಾಸಿನ ಸಚಿವರು ಬಜೆಟ್ ಮಂಡನೆ ಮಾಡುವುದು ಸರಿಯಲ್ಲ. ಇದನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇದು ಸತ್‌ಸಂಪ್ರದಾಯ ಕೂಡ ಅಲ್ಲ. ನಾವು ಸತ್‌ಸಂಪ್ರದಾಯ ಮೀರಿ ಬೇರೆ ದಾರಿಗೆ ಹೋಗುತ್ತಿದ್ದೇವೆ. ಈ ಸದನದ ಗೌರವವನ್ನು ತಾವು ಎತ್ತಿ ಹಿಡಿಯಬೇಕೆಂದು ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ತಾವು ನನ್ನ ಕ್ರಿಯಾಲೋಪದ ಬಗ್ಗೆ ಗಮನಹರಿಸಬೇಕು. ಕರ್ನಾಟಕ ರಾಜ್ಯ ಶಾಸನ ಸಭೆಯ ಇತಿಹಾಸದಲ್ಲೇ ಈ ರೀತಿ ನಡೆದಿಲ್ಲ. ....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ ನನ್ನ ಕ್ರಿಯಾಲೋಪದ ಬಗ್ಗೆ ಇಷ್ಟೊಂದು ಲಘುವಾಗಿ ಕಾಣಬಾರದು. ನಾನು ಎತ್ತಿದ ಕ್ರಿಯಾಲೋಪ ಸರಿಯೇ ಅಥವಾ ಸರಿ ಇಲ್ಲವೇ ದಯಮಾಡಿ. ಹೇಳಿ.

ಅಧ್ಯಕ್ಷರು.—ನಾನು ಈಗ ಸಭೆಯ ಗಮನವನ್ನು ಸೆಳೆಯುತ್ತಿದ್ದೇನೆ. ನಿಮ್ಮ ಎಲ್ಲಾ ಕ್ರಿಯಾಲೋಪಗಳನ್ನು ಬಜೆಟ್ ಮಂಡನೆ ಆದ ಮೇಲೆ ಪರಿಶೀಲನೆ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ ಆಯವ್ಯಯ ಪತ್ರದ ಮಂಡನೆ ಸರಿ ಇಲ್ಲವೆಂದು ನಾವು ಹೇಳುತ್ತಿದ್ದೇವೆ.

ಅಧ್ಯಕ್ಷರು.—ನಿಮಗೆ ಬಜೆಟ್ ಬೇಡವೆಂದು..........

ಶ್ರೀ ವಾಟಾಳ್ ನಾಗರಾಜ್.—ಬಜೆಟ್ ಬೇಕು. ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ ವಾದ ಮೇಲೆ ಬಜೆಟ್ ಮಂಡನೆ ಆಗಬೇಕು,

(ಪ್ರೊ ಎಂ. ಡಿ. ನಂಜುಂಡಸ್ವಾಮಿಯವರು ಬೇರೆ ಸ್ಥಾನದಿಂದ ಮಾತನಾಡುತ್ತಿದ್ದರು)

ಅಧ್ಯಕ್ಷರು.—ಮಾನ್ಯ ನಂಜುಂಡಸ್ವಾಮಿಯವರೇ ತಾವು ತಮ್ಮ ಸ್ಥಾನಕ್ಕೆ ಹೋಗಿ ಮಾತನಾಡಿ.

ಶ್ರೀ ಎಂ. ಡಿ. ನಂಜುಂಡಸ್ವಾಮಿ.—ಮಾನ್ಯ ಅಧ್ಯಕ್ಷರೇ ಮೊದಲು ಸರ್ಕಾರ ಇದೆಯೇ ಎಂಬುದನ್ನು ಸಾಬೀತು ಮಾಡಬೇಕು.

ಅಧ್ಯಕ್ಷರು.—ತಾವು ಮೊದಲು ತಮ್ಮ ಸ್ಥಾನಕ್ಕೆ ಹೋಗಿ.

ಶ್ರೀ ಎಂ. ರಾಜಶೇಖರ ಮೂರ್ತಿ.—ಆಯಿತು.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ವಾಟಾಳ್‌ನಾಗರಾಜ್‌ರವರು ಒಂದು ವಿಚಾರವನ್ನು ಎತ್ತಿದ್ದಾರೆ. ಅದರ ಬಗ್ಗೆ ನಾನು ವಿವರಣೆ ಕೊಡತಕ್ಕಂಥಾದ್ದು ನನ್ನ ಕರ್ತವ್ಯವೆಂದು ಭಾವಿಸುತ್ತೇನೆ. ನಿನ್ನೆ ಸದನದ ಬಿಜಿನೆಸ್ ಅಡ್ವೈಜರಿ ಕಮಿಟಿಯನ್ನು ನಾನು ಕರೆದಿದ್ದೆ. ಆ ಮೀಟಿಂಗ್‌ನಲ್ಲಿ ನಾವೆಲ್ಲ ಸರ್ವಾನುಮತದಿಂದ ಒಂದು ತೀರ್ಮಾನವನ್ನು ಮಾಡಿದ್ದೇವೆ. ಬಜೆಟ್ ಈ ದಿವಸ ಮಂಡನೆ ಆಗಬೇಕು. ತಂದನಂತರ ಅಪ್ರೋಪ್ರಿಯೇಷನ್ ಬಿಲ್ ಈ ತಿಂಗಳ ಕೊನೆಯಲ್ಲಿ ಈ ಸಭೆ ಪಾಸ್ ಮಾಡಬೇಕು. ಇದು ಆಗಲೇಬೇಕಾಗಿರುವುದರಿಂದ ಬಜೆಟ್ ಚರ್ಚೆಯನ್ನು ಮೊದಲು ಕೈಗೆತ್ತಿಕೊಂಡು ತಂದನಂತರ ರಾಜ್ಯಪಾಲರ ಭಾಷಣಕ್ಕೆ ವಂದನಾನಿರ್ಣಯವನ್ನು ಆಮೇಲೆ ಚರ್ಚೆಗೆ ಕೈಗೆತ್ತಿಕೊಳ್ಳಬೇಕೆನ್ನುವ ತೀರ್ಮಾನ ಬಿಜಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಒಪ್ಪಿಕೊಂಡಿದ್ದಾರೆ. ಆದ್ದರಿಂದ ಈ ದಿವಸ ಬಜೆಟ್ ಮಂಡನೆ ಮಾಡುತ್ತಿರುವುದು ಬಿಜಿನೆಸ್ ಅಡ್ವೈಜರಿ ಕಮಿಟಿಯು ರೆಕಮೆಂಡೇಶನ್ಸ್‌ನ್ನು ನಿಮಗೆಲ್ಲಾ ಸುತ್ತೋಲೆಯ ಮೂಲಕ ತಿಳಿಸಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ತಾವು ನಮಗೆ ಈ ಬಗ್ಗೆ ಬೆಳಕು ಚೆಲ್ಲಬೇಕಾಗಿತ್ತು. ಮೊದಲು ರಾಜ್ಯಪಾಲರ ಭಾಷಣಕ್ಕೆ ವಂದನಾನಿರ್ಣಯ ಸಲ್ಲಿಸದಿದ್ದರೆ ಅದು ರಾಜ್ಯಪಾಲರಿಗೆ ಅಗೌರವ ತೋರಿಸಿದಂತಾಗುವುದಿಲ್ಲವೇ ?

ಶ್ರೀ ಡಿ. ಬಿ. ಚಂದ್ರೇಗೌಡ.—ನಾವು ನಿಮ್ಮ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಒಪ್ಪಿಗೆ ಕೊಟ್ಟಿದ್ದೇವೆ. ಅಷ್ಟೆ. ನಮ್ಮ ಅಭಿಪ್ರಾಯದಲ್ಲಿ ಸಹಜವಾಗಿ ರಾಜ್ಯಪಾಲರ ಭಾಷಣಕ್ಕೆ ವಂದನಾನಿರ್ಣಯ ಮೊದಲ ಕೆಲಸವಾಗಬೇಕು. ಆದರೆ ನಿಮ್ಮ ಪರಿಸ್ಥಿತಿ ಸರಿಯಾಗಿಲ್ಲವೆಂದು ಇದಕ್ಕೆ ಒಪ್ಪಿಕೊಂಡಿದ್ದೇವೆ. ಸತ್ಸಂಪ್ರದಾಯಗಳನ್ನು ತಾವು ಪಾಲನೆ ಮಾಡಬೇಕಾಗಿತ್ತು,

ಅಧ್ಯಕ್ಷರು.—ಇದು ಇಂದಿನ ಮೊದಲನೆಯ ನಿರ್ಧಾರವಲ್ಲ. ಈ ಹಿಂದೆಯೂ ಸಹ ಇದೇ ಶಾಸನಸಭೆಯಲ್ಲಿ ನಾನು ಸದಸ್ಯನಾಗಿದ್ದಾಗ, ನಾನು ಮಂತ್ರಿಯಾಗಿದ್ದ ಎಂದು ಕಾಣುತ್ತದೆ, ಆಗ ಇದೇ ರೀತಿಯಾದ ಒಂದು ವ್ಯವಸ್ಥೆ ಆಗಿತ್ತು. ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ ಮೊದಲು ಆಗಬೇಕು. ಆದರೆ ನಾವು ಇಲ್ಲಿ ಸಂದರ್ಭಗಳಿಗೆ ಶಿಶುವಾಗಿ ಈ ಮಾರ್ಪಾಡು ಮಾಡಬೇಕಾಯಿತು. ಇಂತಹ ಪರಿಸ್ಥಿತಿ ಇವತ್ತು ಉದ್ಭವವಾಗಿದ್ದೇನೋ ಅಲ್ಲ. ಇದರಿಂದ ದೊಡ್ಡ ಬದಲಾವಣೆ ಏನೂ ಆಗಿಲ್ಲ. ಅಥವಾ ರಾಜ್ಯಪಾಲರಿಗೆ ಅಗೌರವ ತೋರಿಸತಕ್ಕಂಥ ಅಥವಾ ಅವರಿಗೆ ಅವಮರ್ಯಾದೆ ತೋರಿಸತಕ್ಕಂಥ ಕೆಲಸ ಯಾವ ರೀತಿಯಲ್ಲೂ ಕಂಡು ಬಂದಿಲ್ಲವೆಂದೂ ನನ್ನ ಅಭಿಪ್ರಾಯ.

† ಶ್ರೀ ಎಂ. ಡಿ. ನಂಜುಂಡಸ್ವಾಮಿ.—ನಾನು ಎತ್ತಿರತಕ್ಕಂಥ ಕ್ರಿಯಾಲೋಪ ವಾಸ್ತವವಾಗಿ ಸಂವಿಧಾನಕ್ಕೆ ಸಂಬಂಧಪಟ್ಟಿದುದ್ದು. ಯಾರೇ ಆಗಲಿ ಆಯವ್ಯಯ ಪತ್ರವನ್ನು ಮಂಡನೆ ಮಾಡಬೇಕಾದರೆ ಪೂರ್ವಭಾವಿಯಾಗಿ ಒಂದು ಸರ್ಕಾರವಿರಬೇಕು. ಆದರೆ ಇವರು ಶಾಸನಸಭೆಯ ಸಂಪ್ರದಾಯವನ್ನು ಹರಣ ಮಾಡಿ ಕಾನೂನು ಬದಲಾವಣೆ ಮಾಡಿರತಕ್ಕಂಥ ಈ ಸಚಿವ ಸಮುದಾಯ, ಇದು ಸಚಿವ ಸಮುದಾಯವಲ್ಲದೆ ಸರ್ಕಾರವೆಂದು ಕರೆಯುವುದಕ್ಕಾಗುವುದಿಲ್ಲ. ಇದನ್ನು ಸರ್ಕಾರವೆಂದು ಯಾರು ಹೇಳುತ್ತಾರೆ ? ಈ ಸಚಿವ ಸಮುದಾಯ ಉಚ್ಚ ನ್ಯಾಯಾಲಯದ ಮುಂದೆ ಎರಡು ಸಾರಿ ಮುಚ್ಚಳಿಕೆ ಬರೆದುಕೊಟ್ಟಿದೆ. ಸಿವಿಲ್ ಪ್ರೊಸೀಜರ್ ಕೋಡ್ ಸೆಕ್ಷನ್ ೬೦ ಮತ್ತು ೬೧ರ ಪ್ರಕಾರ ಆ ಮುಚ್ಚಳಿಕೆಯನ್ನು ಉಲ್ಲಂಘನೆ ಮಾಡಿ ನ್ಯಾಯಾಂಗದ ನಿಂದನೆ ಮಾಡಿರುವಂತಹ ಸಚಿವ ಸಮುದಾಯವನ್ನು ಸರ್ಕಾರವೆಂದು ಕರೆಯುವುದಕ್ಕೆ ಆಗುತ್ತದೆಯೋ ? ಸರ್ಕಾರವಿದೆಯೋ ಎನ್ನುವುದು ಮೊದಲು ಸ್ಪಷ್ಟವಾಗಬೇಕು. ಶಾಸನ ಸಭೆಯ ಕಾನೂನುಗಳನ್ನು ಹರಣ ಮಾಡಿ ನ್ಯಾಯಾಂಗ ನಿಂದನೆ ಮಾಡಿರುವಂತಹ ಸಚಿವ ಸಮುದಾಯವನ್ನು I can only call it a Parliamentary Excuctive and not a Government. It has lost all the attributes of a Government. They have got to give a clarification.

ಶ್ರೀ ಗೋಪಾಲ ಮುಕುಂದ ಕಾನಡೆ.—ಆಯಿತು.

ಪ್ರೊ. ಎಂ. ಡಿ. ನಂಜುಂಡಸ್ವಾಮಿ. —ಏನು ಆಯಿತು ?

ಶ್ರೀ ಕೆ. ಎಸ್, ಈಶ್ವರಪ್ಪ.—ಮಾನ್ಯ ಅಧ್ಯಕ್ಷರೇ ವಿರೋಧಪಕ್ಷದವರು ಏನು ಮಾತನಾಡಿದರೂ ಆಡಳಿತ ಪಕ್ಷದವರು ವಿರೋಧ ಮಾಡುತ್ತಾರೆ. ಇದು ಸರಿಯಲ್ಲ. ತಮ್ಮ ಮುಖಾಂತರ ಅವರಿಗೆ ಸರಿಯಾದ ಉತ್ತರ ನೀವೇ ಕೊಡಬೇಕು.

(ಗೊಂದಲ)

ಪ್ರೊ. ಎಂ. ಡಿ, ನಂಜುಂಡಸ್ವಾಮಿ.—ಮಾನ್ಯ ಅಧ್ಯಕ್ಷರೇ ನಾನು ಮತ್ತು ಬಾಬಾಗೌಡ ಪಾಟೀಲ್‌ರವರು ತಮ್ಮ ಮೊರೆ ಹೊಕ್ಕಿದ್ದು ಏತಕ್ಕೆಂದರೆ ನ್ಯಾಯಾಂಗ ನಿಂದನೆ ಮಾಡಿರತಕ್ಕಂಥ ಇವರ ಬಳಿ ಹೋದರೆ ನಮಗೆ ನ್ಯಾಯ ಸಿಕ್ಕುವುದಿಲ್ಲ. ನ್ಯಾಯಾಂಗ ನಿಂದನೆ ಮಾಡಿದವರ ವಿರುದ್ಧ ಮತ್ತೆ ನ್ಯಾಯಾಲಯಕ್ಕೆ ಹೋಗುವುದಕ್ಕೆ ಆಗುವುದಿಲ್ಲ. ಈ ಕಾರಣದಿಂದ ನಾವು ತಮ್ಮ ಮೊರೆ ಹೊಕ್ಕಿದ್ದೇವೆ. ತಮ್ಮ ತೀರ್ಮಾನ ನ್ಯಾಯಾಲಯ ತೀರ್ಮಾನಕ್ಕೆ ಸರಿಸಮಾನ ತಮಗೆ ಇಚ್ಛೆ ಬಂದಂತಹ ತೀರ್ಮಾನ ವನ್ನು ತಾವು ಕೊಡಬಹುದು. ನನ್ನ ಅಭಿಪ್ರಾಯದಲ್ಲಿ ಇದು ಸಚಿವ ಸಮುದಾಯ, ಯಾವುದೇ ಕಾನೂನಿನ ವಿಶ್ಲೇಷಣೆ ಅಡಿಯಲ್ಲಿ ಇದನ್ನು ಸರ್ಕಾರವೆಂದು ಕರೆಯುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯರು ಎತ್ತಿರತಕ್ಕಂಥ ಕ್ರಿಯಾಲೋಪದಲ್ಲಿ ಎರಡು ಪ್ರಶ್ನೆಗಳು ಇವೆ. ಒಂದು ರಾಜ್ಯಾಂಗದ ಚೌಕಟ್ಟು, ಮತ್ತೊಂದು ಸರ್ಕಾರ ಯಾವುದೋ ಒಂದು ಕೇಸ್‌ನಲ್ಲಿ ಉಚ್ಚ ನ್ಯಾಯಾಲಯದಲ್ಲಿ ಯಾವುದೋ ಒಂದು ಕಮಿಟ್‌ಮೆಂಟ್ ಅಥವಾ ಹೇಳಿಕೆ ಕೊಟ್ಟಿರುವುದು. ಆ ಹೇಳಿಕೆಯ ಉಲ್ಲಂಘನೆ ನಡೆದಿದ್ದರೆ ಅದಕ್ಕೆ ರೆಮಿಡಿ ಉಚ್ಚ ನ್ಯಾಯಾಲಯದಲ್ಲಿಯೇ ಸಿಗಬೇಕು. ಈ ಸದನದಲ್ಲಿ ಸಿಕ್ಕುವುದಿಲ್ಲ. ಎರಡನೆಯದಾಗಿ ಮಾನ್ಯ ಸದಸ್ಯರಾದ ನಂಜುಂಡಸ್ವಾಮಿಯವರು ಇದು ಸಚಿವ ಸಮುದಾಯವೇ ಹೊರತು ಸರ್ಕಾರವಲ್ಲವೆಂದು ಹೇಳಿದರು. ಈ ಸದನ ಇದನ್ನು ಸರ್ಕಾರವೆಂದು ಗುರುತಿಸಿದೆ ಸರ್ಕಾರವೆಂದು ಪರಿಗಣಿಸಿದೆ, ಸರ್ಕಾರವೆಂದು ನಿರ್ಧಾರ ಮಾಡಿದೆ. ಜನತಂತ್ರ ವ್ಯವಸ್ಥೆಯ ಇದೊಂದು ಅವಿಭಾಜ್ಯ ಅಂಗ, ಮಾನ್ಯ ಹಣಕಾಸಿನ ಸಚಿವರು ತಮ್ಮ ಭಾಷಣವನ್ನು ಮುಂದುವರಿಸಬಹುದು.

ಶ್ರೀ ಎಂ. ರಾಜಶೇಖರಮೂರ್ತಿ.—೪. ನಮ್ಮ ಯೋಜನಾ ಇತಿಹಾಸದ ಒಂದು ವಿಶಿಷ್ಟ ಘಟ್ಟದಲ್ಲಿ ನಾನು ಈ ಬಜೆಟ್ಟನ್ನು ಮಂಡಿಸುತ್ತಿದ್ದೇನೆ. ಏಳನೇ ಪಂಚವಾರ್ಷಿಕ ಯೋಜನೆಯು ಇದೀಗ ಕೊನೆಗೊಳ್ಳುತ್ತಾ ಬಂದಿದ್ದು ಎಂಟನೇ ಪಂಚವಾರ್ಷಿಕ ಯೋಜನೆಯು ಇನ್ನೇನು ಆರಂಭವಾಗಲಿದೆ. ಏಳನೇ ಯೋಜನೆಯುದ್ದಕ್ಕೂ ಸಂಪನ್ಮೂಲಗಳ ಕೊರತೆ ನಮ್ಮ ರಾಜ್ಯವನ್ನು ಕಾಡುತ್ತಿತ್ತು. ರಾಜ್ಯದ ಮುಂದಿದ್ದ ಬೇಡಿಕೆಗಳಿಗೆ ಹೋಲಿಸಲಾಗಿ ಸಂಪನ್ಮೂಲಗಳ ಕೊರತೆ ಬಹಳವಾಗಿ ಬೆಳೆಯುತ್ತಾ ಹೋಯಿತು ಇನ್ನಾದರೂ ಈ ಪ್ರವೃತ್ತಿಯನ್ನು ಬದಲಾಯಿಸಿ ಜನಸಮುದಾಯದ ಸರ್ವಾಂಗೀಣ ಅಭಿವೃದ್ಧಿಗೆ ರಾಜ್ಯದ ಸಂಪನ್ಮೂಲಗಳನ್ನು ರೂಢಿಸಬೇಕಾಗಿದೆ.

೫. ೧೯೮೯ರ ಡಿಸೆಂಬರ್ ೨೨ರಂದು ವಿಧಾನಮಂಡಲದಲ್ಲಿ ನಾನು ಈ ವಿಷಯವನ್ನು ಕುರಿತು ಒಂದು ಹೇಳಿಕೆ ನೀಡಿ ರಾಜ್ಯವು ಎದುರಿಸುತ್ತಿರುವ ಹಣಕಾಸು ಬಿಕ್ಕಟ್ಟಿನ ಬಗ್ಗೆ ಸನ್ಮಾನ್ಯ ಸದಸ್ಯರಿಗೆ ಈಗಾಗಲೇ ಮನವರಿಕೆ ಮಾಡಿಕೊಟ್ಟಿದ್ದೇನೆ. ಆ ಹೇಳಿಕೆಯಲ್ಲಿ ನಾನು ೧೯೮೯–೯೦ರ ಪ್ರಾರಂಭ ಶಿಲ್ಕು (–) ೧೦.೪೬ ಕೋಟಿ ರೂಪಾಯಿಗಳೆಂದು ತಿಳಿಸಿದ್ದೆ. ಆದರೆ ಅಂತಿಮ ಲೆಕ್ಕಗಳ ಪ್ರಕಾರ ಅದು (–) ೧೩.೫೪ ಕೋಟಿ ರೂಪಾಯಿಗಳು. ೧೯೮೯–೯೦ನೆಯ ಬಜೆಟ್ ಅಂದಾಜಿನಲ್ಲಿ ೧೭೬.೩೦ ಕೋಟಿ ರೂಪಾಯಿಗಳಷ್ಟು ಪೂರೈಸಲಾಗದ ಕೊರತೆಯನ್ನು ತೋರಿಸಲಾಗಿತ್ತು. ಈ ಬಗ್ಗೆ ಮುಂದಾದರೂ ಸಂಪನ್ಮೂಲ ಸಂಗ್ರಹಿಸುವ ಯಾವ ಸೂಚನೆಯನ್ನೂ ಅದರಲ್ಲಿ ನೀಡಿರಲಿಲ್ಲ. ಸಂದಾಯವಾಗದ ಬಿಲ್ಲುಗಳು ಮತ್ತು ಭಾರಿ ಪ್ರಮಾಣದ ಸಾರ್ವಜನಿಕ ಠೇವಣಿಗಳು ಈ ಸಮಸ್ಯೆಯನ್ನು ಮತ್ತಷ್ಟು ಉಲ್ಬಣಗೊಳಿಸಿದುವು. ಬಜೆಟ್‌ನಲ್ಲಿ ಸೇರಿರದ ವಿವಿಧ ಸಹಾಯಧನ ರೂಪದ ಹೊಣೆಗಾರಿಕೆಗಳು ಈ ಸಮಸ್ಯೆಯನ್ನು ಇನ್ನಷ್ಟು ಹೆಚ್ಚಿಸಿದುವು.

೬. ಮೂಲಭೂತ ಸೌಲಭ್ಯಗಳ ನಿರ್ಮಾಣ ಆರ್ಥಿಕ ಅಭಿವೃದ್ಧಿಗೆ ಅತ್ಯಾವಶ್ಯಕ. ಅದು ರಾಜ್ಯದ ಅಭಿವೃದ್ಧಿಯ ದಿಕ್ಸೂಚಿಯೂ ಹೌದು. ಮೂಲಭೂತ ಸೌಲಭ್ಯಗಳು ಹೆಚ್ಚಿದಂತೆ, ಆರ್ಥಿಕ ಪ್ರಗತಿ ತ್ವರಿತಗೊಳ್ಳುತ್ತದೆ. ಈ ಸೌಲಭ್ಯಗಳ ಕೊರತೆಯುಂಟಾದರೆ ಆರ್ಥಿಕ ಪ್ರಗತಿಯು ಇಳಿಮುಖವಾಗುತ್ತದೆ. ಕರ್ನಾಟಕದಲ್ಲಿ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಯ ಸೂಚ್ಯಾಂಕವು ಅಖಿಲ ಭಾರತ ಸರಾಸರಿ, ೧೦೦ಕ್ಕೆ ಹೋಲಿಸಿದರೆ ೧೯೭೬–೭೭ರಲ್ಲಿ ೧೦೫ ಆಗಿತ್ತು. ಮುಂದಿನ ದಶಕದಲ್ಲಿ ಅದೇನೂ ಮೇಲಕ್ಕೆ ಏರಲಿಲ್ಲ. ಬದಲಾಗಿ ೧೯೮೭–೮೮ರಲ್ಲಿ ಅದು ೯೮ಕ್ಕೆ ಇಳಿಯಿತು. ೧೯೮೬–೮೭ರಲ್ಲಿ ೨೦ ಅಂಶಗಳ ಕಾರ್ಯಕ್ರಮದ ಅನುಷ್ಠಾನದಲ್ಲಿ ರಾಜ್ಯವು ಮೊದಲನೆಯ ಸ್ಥಾನವನ್ನು ಗಳಿಸಿತ್ತು. ಆದರೆ, ೧೯೮೯ರ ಡಿಸೆಂಬರ್ ಹೊತ್ತಿಗೆ ರಾಜ್ಯವು ಎಂಟನೆಯ ಸ್ಥಾನಕ್ಕೆ ಇಳಿಯಿತು. ಕರ್ನಾಟಕ ರಾಜ್ಯಕ್ಕೆ ಹಿಂದೆ ಗಳಿಸಿದ್ದ ಹೆಮ್ಮೆಯ ಸ್ಥಾನವನ್ನೇ ಪುನಃ ಗಳಿಸಿಕೊಡಲು ಈಗಿನ ಸರ್ಕಾರವು ದೃಢ ನಿರ್ಧಾರ ಕೈಗೊಂಡಿದೆ. ಆದರೆ ಇದೇನೂ ಸುಲಭದ ಕಾರ್ಯವಲ್ಲ. ಇದನ್ನು ಸಾಧಿಸಲು ಆರ್ಥಿಕ ನಿರ್ವಹಣೆಯಲ್ಲಿ ಹೆಚ್ಚು ದಕ್ಷತೆ ಬೇಕು. ಆಡಳಿತ ಕೌಶಲ ಮತ್ತು ಸಾಮರ್ಥ್ಯವನ್ನು ಮತ್ತಷ್ಟು ಹೆಚ್ಚಿಸಬೇಕಾಗುತ್ತದೆ. ಜನಕಲ್ಯಾಣಕ್ಕೇ ಮುಡಿಪಾದಂಥ ನಿರ್ದೇಶನವನ್ನು ಆಡಳಿತಕ್ಕೆ ನೀಡಬೇಕಾಗುತ್ತದೆ. ಜನಸಮುದಾಯದ ಪ್ರತಿಯೊಬ್ಬರಿಗೂ ಅಭಿವೃದ್ಧಿಯ ಫಲವು ದೊರಕುವಂತೆ ಇನ್ನೂ

ಸಂಪದ್ಭರಿತ ಸಮಾಜವನ್ನು ಸಮಾನತೆಯ ನೆಲಗಟ್ಟಿನ ಮೇಲೆ ನಿರ್ಮಾಣ ಮಾಡಲು ನಾವು ಕಂಕಣ ಬದ್ಧರಾಗಿದ್ದೇವೆ.

ಏಳನೇ ಪಂಚವಾರ್ಷಿಕ ಯೋಜನೆ :

೭. ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ಮೂಲತಃ ಉದ್ದೇಶಿಸಿದ ಒಟ್ಟು ವೆಚ್ಚವು ೩.೫೭೫ ಕೋಟಿ ರೂಪಾಯಿಗಳು ಎಂಬುದು ಸದಸ್ಯರೆಲ್ಲರಿಗೂ ತಿಳಿದ ವಿಷಯ. ಅನಂತರ ಯೋಜನಾ ವೆಚ್ಚವನ್ನು ವಾರ್ಷಿಕವಾಗಿ ನಿಗದಿಪಡಿಸಿದಾಗ ಒಟ್ಟು ಅನುಮೋದಿತ ವೆಚ್ಚ ೪೭೬ ಕೋಟಿ ರೂಪಾಯಿಗಳಷ್ಟಾಯಿತು. ಸಾಕಷ್ಟು ಸಂಪನ್ಮೂಲಗಳು ದೊರೆಯದೆ ಇದ್ದ ಕಾರಣ ಕಳೆದ ಎರಡು ವರ್ಷಗಳಲ್ಲಿ ಯೋಜನಾ ಗಾತ್ರವನ್ನು ಮೊಟಕುಗೊಳಿಸಲಾಯಿತು. ಸಂಪನ್ಮೂಲದ ಇದೇ ರೀತಿಯ ಕೊರತೆಯ ಕಾರಣದಿಂದ ಪ್ರಸಕ್ತ ವರ್ಷದ ಯೋಜನಾ ಗಾತ್ರವನ್ನು ೧,೦೪೦ ಕೋಟಿ ರೂಪಾಯಿಂಗಳಿಂದ ೮೭೦ ಕೋಟಿ ರೂಪಾಯಿಗಳಿಗೆ ತಗ್ಗಿಸುವುದು ಅನಿವಾರ್ಯವಾಯಿತು. ಈ ಎಲ್ಲ ಕಡಿತಗಳ ತರುವಾಯ ಏಳನೆಯ ಯೋಜನೆಯ ಪರಿಷ್ಕೃತ ವೆಚ್ಚವು ೩,೮೫೫.೪೫ ಕೋಟಿ ರೂಪಾಯಿಗಳಷ್ಟಾಗಿದೆ. ಇದಕ್ಕೆ ಪ್ರತಿಯಾಗಿ ಒಟ್ಟು ವೆಚ್ಚ ೩,೯೭೦.೦೦ ಕೋಟಿ ರೂಪಾಯಿಗಳಷ್ಟಾಗಬಹುದೆಂದು ನಿರೀಕ್ಷಿಸಲಾಗಿದೆ.

೮. ಯೋಜನೆಯ ಪೂರ್ವಭಾಗದಲ್ಲಿ ಸಂಭವಿಸಿದ ಸತತ ಕ್ಷಾಮದಿಂದಾಗಿ ಕೃಷಿ ಉತ್ಪಾದನೆ ಹಾಗೂ ವಿದ್ಯುಚ್ಛಕ್ತಿ ಉತ್ಪಾದನೆಗಳು ಕುಂಠಿತವಾದವು. ವಿದ್ಯುತ್ ಕೊರತೆಯಿಂದಾಗಿ ಕೈಗಾರಿಕಾ ಬೆಳವಣಿಗೆಯೂ ತೊಂದರೆಗೀಡಾಯಿತು. ತತ್ಪರಿಣಾಮವಾಗಿ ಆರ್ಥಿಕ ಬೆಳವಣಿಗೆಯೂ ನಿರೀಕ್ಷೆಗಿಂತ ಕಡಿಮೆಯಾಗಿದೆ. ಪ್ರಮುಖ ಕ್ಷೇತ್ರಗಳಲ್ಲಿ ಉಂಟಾದ ಕೆಲವು ಕೊರತೆಗಳನ್ನು ಇಲ್ಲಿ ಉಲ್ಲೇಖಿಸಬಹುದು. ಯೋಜನೆಯ ಅವಧಿಯಲ್ಲಿ ಆಹಾರ ಧಾನ್ಯಗಳ ವಾರ್ಷಿಕ ಉತ್ಪಾದನೆಯ ಗುರಿ ೧೦೦ ಲಕ್ಷ ಟನ್. ಆದರೆ ಈ ಅವಧಿಯ ಯಾವುದೇ ವರ್ಷದಲ್ಲಿಯು ಉತ್ಪಾದನೆ ೭೪ ಲಕ್ಷ ಟನ್ ಮೀರದೆ ಇದ್ದುದರಿಂದ ಅದು ಹೆಚ್ಚು ಕಡಿಮೆ ಸ್ಥಗಿತಗೊಂಡಿತೆಂದೇ ಹೇಳಬೇಕು. ಇದೇ ಅವಧಿಯಲ್ಲಿ ವಿದ್ಯುತ್ ಉತ್ಪಾದನೆಯ ಹೆಚ್ಚಳದ ಗುರಿ ೫೮೧ ಮೆಗಾವ್ಯಾಟ್‌ಗಳಾದರೆ, ಸಾಧನೆ ೫೪೦.೭೫ ಮೆಗಾವ್ಯಾಟ್ ಮಾತ್ರ. ೪.೭೨ ಲಕ್ಷ ಹೆಕ್ಟೇರು ಭೂಮಿಗೆ ನೀರಾವರಿ ಸೌಲಭ್ಯ ಒದಗಿಸುವ ಗುರಿಯಲ್ಲಿ ಸುಮಾರು ಒಂದು ಲಕ್ಷ ಹೆಕ್ಟೇರುಗಳ ಕೊರತೆಯಾಗುವ ಸಂಭವವಿದೆ.

ಒಂಬತ್ತನೇ ಹಣಕಾಸು ಆಯೋಗ :

೯. ಒಂಬತ್ತನೇ ಹಣಕಾಸು ಆಯೋಗದ ಎರಡನೆಯ ವರದಿಯನ್ನು ೧೯೯೦ರ ಮಾರ್ಚ್ ೧೨ರಂದು ಸಂಸತ್ತಿನಲ್ಲಿ ಮಂಡಿಸಲಾಯಿತು. ಭಾರತ ಸರ್ಕಾರವು ಆಯೋಗದ ಶಿಫಾರಸ್ಸುಗಳನ್ನು ಒಪ್ಪಿಕೊಂಡಿದೆ. ವರದಿಯು ಇದೀಗ ಬಂದಿರುವುದರಿಂದ ನಮ್ಮ ರಾಜ್ಯದ ಸಂಪನ್ಮೂಲಗಳ ಮೇಲೆ ಆಗುವ ಪರಿಣಾಮಗಳನ್ನು ವಿವರವಾಗಿ ವಿಶ್ಲೇಷಿಸಲು ರಾಜ್ಯ ಸರ್ಕಾರಕ್ಕೆ ಕೆಲವು ಕಾಲ ಬೇಕಾಗುತ್ತದೆ. ಕೇಂದ್ರ ಅಬಕಾರಿ ಸುಂಕದಲ್ಲಿ ಹಂಚಿಕೆ ಮಾಡಬಹುದಾದ ಮೊತ್ತದಲ್ಲಿ ಕರ್ನಾಟಕದ ಪಾಲನ್ನು ಕಡಿಮೆ ಮಾಡಿರುವುದು ವಿಶೇಷವಾಗಿ ಗಮನಿಸಬೇಕಾದ ಅಂಶ. ಒಂಬತ್ತನೇ ಹಣಕಾಸು ಆಯೋಗದ ಶಿಫಾರಸ್ಸುಗಳನ್ನು ಸ್ಥೂಲವಾಗಿ ನೋಡಿದಾಗ ಏಳನೇ ಹಣಕಾಸು ಆಯೋಗವು ನೀಡಿದ್ದ ಶೇಕಡ ೪.೮೭ಕ್ಕಿಂತಲೂ ಎಂಟನೇ ಹಣಕಾಸು ಆಯೋಗವು ನೀಡಿದ್ದ ಶೇಕಡ ೪.೩೬ಕ್ಕಿಂತಲೂ, ಒಂಬತ್ತನೇ ಹಣಕಾಸು ಆಯೋಗದ ಮೊದಲ ವರದಿಯಲ್ಲಿ ನೀಡಿದ್ದ ಶೇಕಡ ೪.೨೭ಕ್ಕಿಂತಲೂ ಕಡಿಮೆ ಪ್ರಮಾಣದಲ್ಲಿ ನಮ್ಮ ಪಾಲು ದೊರಕಬಹುದೆಂದು ಕಾಣುತ್ತದೆ. ವರದಿಯನ್ನು ವಿವರವಾಗಿ ಪರಿಶೀಲಿಸಿ ನಿಜಸ್ಥಿತಿಯನ್ನು ಮಾನ್ಯ ಸದಸ್ಯರುಗಳ ಗಮನಕ್ಕೆ ತರುತ್ತೇನೆ.

ಎಂಟನೇ ಪಂಚವಾರ್ಷಿಕ ಯೋಜನೆ :

೧೦. ೧೯೯೦-೯೧ನೆಯ ವರ್ಷದಲ್ಲಿ ಕೇಂದ್ರ ಸರ್ಕಾರದ ಯೋಜನಾ ವೆಚ್ಚವು ೧೯೮೯-೯೦ರಲ್ಲಿಯ ೩೪,೪೪೦ ಕೋಟಿ ರೂಪಾಯಿ ವೆಚ್ಚಕ್ಕೆ ಪ್ರತಿಯಾಗಿ ೩೯,೩೨೦ ಕೋಟಿ ರೂಪಾಯಿಗಳಷ್ಟಾಗಬಹುದೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಅಂದರೆ ಇದು ಶೇಕಡ ೧೪ರಷ್ಟು ಹೆಚ್ಚಳ. ಕೇಂದ್ರ ಯೋಜನೆಯಲ್ಲಿ ಗ್ರಾಮೀಣ ಅಭಿವೃದ್ಧಿಗೆ ಯೋಜನಾ ಸಂಪನ್ಮೂಲಗಳ ಶೇಕಡ ೫೦ರಷ್ಟನ್ನು ಕಾದಿರಿಸಿದ್ದು, ಗ್ರಾಮೀಣ ಅಭಿವೃದ್ಧಿಗೆ ಪ್ರಾಮುಖ್ಯತೆಯನ್ನು ನೀಡಿರುವಂತೆ ಕಂಡುಬರುತ್ತದೆ. ಹೀಗಿದ್ದರೂ ೮ನೇ ಯೋಜನೆಯ ಸಂಪೂರ್ಣ ಚಿತ್ರವಿನ್ನೂ ಹೊರಬಂದಿಲ್ಲವೆಂಬುದು ಮಾನ್ಯ ಸದಸ್ಯರೆಲ್ಲರಿಗೂ ತಿಳಿದ ವಿಷಯವಾಗಿದೆ. ಮುಂದಿನ ಕೆಲವು ವಾರಗಳಲ್ಲಿ ಇದು ಸ್ಪಷ್ಟವಾಗಬಹುದು. ಎಂಟನೇ ಯೋಜನೆಗೆ ಸಂಬಂಧಿಸಿದಂತೆ ನಿಖರವಾದ ವಿವರಗಳು ದೊರೆಯದ ಕಾರಣ ೧೯೯೦-೯೧ರ ವಾರ್ಷಿಕ ಯೋಜನೆಗಷ್ಟೇ

ಸೀಮಿತಗೊಳಿಸಿ ನಾವು ನಮ್ಮ ಯೋಜನಾ ಕಾರ್ಯಾಚರಣೆಗಳನ್ನು ಕೈಗೊಳ್ಳಬೇಕಾಗಿದೆ. ತರುವಾಯ ದಲ್ಲಿ ಈ ವಾರ್ಷಿಕ ಯೋಜನೆಯನ್ನು ಎಂಟನೇ ಯೋಜನೆಯೊಳಗೆ ಅಳವಡಿಸಿಕೊಳ್ಳಲಾಗುವುದು.

೧೧. ಎಂಟನೇ ಯೋಜನೆಯ ರೂಪರೇಷೆ ಇನ್ನೂ ಕೆಲಕಾಲದವರೆಗೆ ಸ್ಪಷ್ಟವಾಗುವುದಿಲ್ಲ ವಾದರೂ ಯಾವ ಅಂಶಗಳು ಹೆಚ್ಚು ಪ್ರಧಾನ ಎಂಬುದನ್ನು ಊಹಿಸಬಹುದು. ಗ್ರಾಮೀಣ ಅಭಿವೃದ್ಧಿ ಮತ್ತು ಸಂಬಂಧಪಟ್ಟ ಕ್ಷೇತ್ರಗಳಿಗೆ ಹೆಚ್ಚಿನ ಗಮನ ಕೊಡಲಾಗುವುದು. ನೀರಾವರಿ ಮತ್ತು ವಿದ್ಯುಚ್ಛಕ್ತಿ ಇವೆರಡೂ ನಮ್ಮ ಅಭಿವೃದ್ಧಿ ಸಾಧನೆಯ ಎರಡು ಮುಖ್ಯ ಅಂಗಗಳಾಗಿ ಮುಂದು ವರಿಯುತ್ತವೆ. ಚಾಲ್ತಿಯಿರುವ ಯೋಜನೆಗಳನ್ನು ಪೂರ್ಣಗೊಳಿಸಲು ಮಹತ್ವ ನೀಡಲಾಗುವುದು. ಇದರಿಂದಾಗಿ ಈ ಹಿಂದಿನ ಬಂಡವಾಳ ಹೂಡಿಕೆಗಳ ಪ್ರಯೋಜನವನ್ನು ವಿಳಂಬವಿಲ್ಲದೆ ಪಡೆದುಕೊಳ್ಳ ಬಹುದು. ಗ್ರಾಮೀಣ ಪ್ರದೇಶದಲ್ಲಿ ಸಾಮಾಜಿಕ ಮೂಲಭೂತ ಸೌಲಭ್ಯಗಳ ಸುಧಾರಣೆಗೆ ನಮ್ಮ ಆದ್ಯತಾ ಪಟ್ಟಿಯಲ್ಲಿ ಅಗ್ರಸ್ಥಾನ. ಪ್ರಾಥಮಿಕ ಶಿಕ್ಷಣ. ಗ್ರಾಮೀಣ ಆರೋಗ್ಯ ಸೌಲಭ್ಯಗಳು ಮತ್ತು ನೈರ್ಮಲ್ಯ ವ್ಯವಸ್ಥೆಗಳನ್ನು ಸುಧಾರಿಸಲು ವಿಶೇಷ ಪ್ರಯತ್ನಗಳನ್ನು ಮಾಡಲಾಗುವುದು. ಹಾಗೆಯೇ ನಗರ ವಸತಿ, ನಗರ ನೀರು ಪೂರೈಕೆ ಹಾಗೂ ನಗರ ಪರಿಸರ ಸುಧಾರಣೆಗೆ ವಿಶೇಷ ಮಹತ್ವ ನೀಡಲಾಗುವುದು.

೧೨. ಯೋಜನಾ ಗುರಿಗಳು, ಬೆಳವಣಿಗೆ ಗತಿ, ತಲಾವಾರು ವರಮಾನ, ಆಂತರಿಕ ಉತ್ಪಾದನೆ ಮುಂತಾದ ಯೋಜನಾ ಶಬ್ದ ಜಾಲದಲ್ಲಿ ನಾವು ಯಾವುದಕ್ಕೆ ಹೆಚ್ಚು ಮಹತ್ವ ನೀಡಬೇಕೋ ಅದನ್ನೇ ಮರೆಯುವ ಸಾಧ್ಯತೆ ಇದೆ. ಯಾರಿಗಾಗಿ ಈ ಯೋಜನೆಯನ್ನು ಉದ್ದೇಶಿಸಲಾಗಿದೆಯೋ, ಆ ವ್ಯಕ್ತಿಗಿಂತ ಹೆಚ್ಚಾಗಿ ಅಂಕಿ ಅಂಶಗಳೇ ಪ್ರಧಾನವಾಗುತ್ತವೆ, ಈ ಹಿಂದೆ ಏನೇ ನಡೆದಿರಲಿ ಶ್ರೀಸಾಮಾನ್ಯನೇ ಯೋಜನೆಯ ಕೇಂದ್ರ ಬಿಂದುವಾಗಬೇಕೆಂಬುದು ಈ ಸರ್ಕಾರದ ಉದ್ದೇಶ. ಇಡೀ ಯೋಜನಾ ಕಾರ್ಯಾಚರಣೆ ಮತ್ತು ಅಭಿವೃದ್ಧಿ ಪ್ರಯತ್ನಗಳನ್ನು ಶ್ರೀಸಾಮಾನ್ಯನನ್ನು ಗಮನದಲ್ಲಿರಿಸಿ ಕೊಂಡೇ ರೂಪಿಸಬೇಕು. ಈ ದಿಸೆಯಲ್ಲಿ ನಮ್ಮ ಎಲ್ಲಾ ಪ್ರಯತ್ನಗಳು ಸಾಮಾಜಿಕ ನ್ಯಾಯದಿಂದ ಕೂಡಿದ ಆರ್ಥಿಕ ಬೆಳವಣಿಗೆಯ ಧ್ಯೇಯಕ್ಕೆ ಸಾಧಕ ಹಾಗೂ ಪೂರಕವಾಗಬೇಕು. ಆದರೆ ಈ ಧ್ಯೇಯ ಸಾಧನೆಯು, ಬೆಲೆಗಳು ಆದಷ್ಟು ಮಟ್ಟಿಗೆ ಸ್ಥಿರವಾಗಿರುವಂಥ ಒಂದು ಪರಿಸ್ಥಿತಿಯಲ್ಲಿ ಮಾತ್ರ ಸಾಧ್ಯ. ಇಂಥ ಪರಿಸ್ಥಿತಿಯು ಭಾರತ ಸರ್ಕಾರದ ಕಾರ್ಯನೀತಿಗಳ ಮತ್ತು ಕಾರ್ಯಕ್ರಮಗಳನ್ನೇ ಹೆಚ್ಚಾಗಿ ಅವಲಂಬಿಸಿರುತ್ತದೆ.

೧೩. ಮಿತಿ ಮೀರಿದ ಜನಸಂಖ್ಯೆಯಿಂದಾಗಿ ಕೃಷಿ, ಕೈಗಾರಿಕೆ. ಸಾರಿಗೆ ಅಥವಾ ಸಮಾಜ ಸೇವೆ ಮೊದಲಾದ ಎಲ್ಲ ಕ್ಷೇತ್ರಗಳಲ್ಲಿಯೂ ಬೇಡಿಕೆಯ ಭಾರ ಅಧಿಕವಾಗಿದೆ. ಪಟ್ಟಣ ಮತ್ತು ನಗರ ಪ್ರದೇಶಗಳಿಗೆ ಹೆಚ್ಚು ಜನರು ವಲಸೆ ಹೋಗುತ್ತಿರುವ ಕಾರಣ ನಗರ / ಗ್ರಾಮೀಣ ಕ್ಷೇತ್ರದಲ್ಲಿ ತೀವ್ರ ಬದಲಾವಣೆ ಉಂಟಾಗುತ್ತಿದೆ. ಇದಕ್ಕೆ ಬೆಂಗಳೂರು ನಗರವೇ ಉತ್ತಮ ನಿದರ್ಶನ. ಗ್ರಾಮೀಣ ಪ್ರದೇಶಗಳಿಗೆ ವಿಶೇಷ ಗಮನ ನೀಡುವುದರ ಜೊತೆಗೆ ಪಟ್ಟಣ ಮತ್ತು ನಗರಗಳ ಪರಿಸರ ಹದಗೆಡ ದಂತೆ ನೋಡಿಕೊಳ್ಳುವುದು ಅತ್ಯಗತ್ಯ.

೧೪. ನಾನು ಈಗಾಗಲೇ ಹೇಳಿರುವಂತೆ ಏಳನೇ ಪಂಚವಾರ್ಷಿಕ ಯೋಜನೆಯ ಸಾಧನೆಯಲ್ಲಿ ಕೊರತೆಯಾಗಿದೆ. ಹೆಚ್ಚಿನ ಬೆಳವಣಿಗೆಯನ್ನು ಸಾಧಿಸುವಂತೆ ಹಾಗೂ ಹಿಂದಿದ್ದ ಉತ್ತಮ ಸ್ಥಿತಿಯನ್ನು ಮರಳಿ ಪಡೆದುಕೊಳ್ಳುವಂತೆ, ನಮ್ಮ ಆರ್ಥಿಕ ಪ್ರಗತಿಯನ್ನು ತ್ವರಿತಗೊಳಿಸಲು ಇದು ಸೂಕ್ತ ಕಾಲ. ಈ ದೃಷ್ಟಿಯಿಂದ ರಾಜ್ಯದ ಮುಂದಿನ ವರ್ಷದ ಯೋಜನಾ ಗಾತ್ರವನ್ನು, ಯೋಜನಾ ಆಯೋಗವು ಅನುಮೋದಿಸಿದಂತೆ, ೧,೧೨೦ ಕೋಟಿ ರೂಪಾಯಿಗಳಿಗೆ ನಿಗದಿಪಡಿಸಿದೆ. ಎಂದರೆ, ಈ ವರ್ಷದ ಪರಿಷ್ಕೃತ ವೆಚ್ಚವಾದ ೮೭೦ ಕೋಟಿ ರೂಪಾಯಿಗಳಿಗಿಂತ ಇದು ೨೫೦ ಕೋಟಿ ರೂಪಾಯಿಗಳಷ್ಟು ಹೆಚ್ಚು. ಈ ೧,೧೨೦ ಕೋಟಿ ರೂಪಾಯಿ ಯೋಜನಾ ವೆಚ್ಚದಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿಗಾಗಿ, ೪೦ ಕೋಟಿ ರೂಪಾಯಿಗಳನ್ನು ವಿಶೇಷವಾಗಿ ಒದಗಿಸಲಾಗಿದೆ ಎಂಬುದನ್ನು ಮಾನ್ಯ ಸದಸ್ಯರು ದಯವಿಟ್ಟು ಗಮನಿಸಬೇಕು. ರಾಜ್ಯದ ಜನರ ಅತ್ಯಗತ್ಯ ಅವಶ್ಯಕತೆ ಗಳನ್ನು ಪೂರೈಸಲು ನಾನು ಶಾಲಾ ಕಟ್ಟಡಗಳು, ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚಿನ ಆಸ್ಪತ್ರೆ ವಾರ್ಡುಗಳು. ಶೌಚಾಲಯಗಳು, ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆ ಹಾಗೂ ಕನ್ನಡಕ್ಕೆ ಪ್ರೋತ್ಸಾಹ ಮತ್ತು ಗಡಿ ಪ್ರದೇಶಗಳ ಅಭಿವೃದ್ಧಿ ಇತ್ಯಾದಿಗಳಿಗೆ ಇನ್ನೂ ೨೫ ಕೋಟಿ ರೂಪಾಯಿಗಳನ್ನು ಹೆಚ್ಚಾಗಿ ಒದಗಿಸಿದ್ದೇನೆ. ಆದ್ದರಿಂದ ೧೯೯೦-೯೧ರ ಯೋಜನಾ ವೆಚ್ಚವು ೧,೧೪೫ ಕೋಟಿ ರೂಪಾಯಿ ಗಳಷ್ಟಾಗುವುದು.

೧೫. ಒಟ್ಟು ಯೋಜನಾ ವೆಚ್ಚದ ೧,೧೪೫ ಕೋಟಿ ರೂಪಾಯಿಗಳ ವಲಯವಾರು ಹಂಚಿಕೆಗಳು ಈ ಮುಂದಿನಂತಿವೆ :

ವಲಯ	ಕೋಟಿ ರೂ.ಗಳಲ್ಲಿ	ಒಟ್ಟು ಶೇಕಡಾವಾರು
೧	೨	೩
ಕೃಷಿ ಮತ್ತು ಸಂಬಂಧಪಟ್ಟ ಕಾರ್ಯಗಳು	೯೭.೬೦	೮.೫೨
ಗ್ರಾಮೀಣಾಭಿವೃದ್ಧಿ	೮೫.೯೯	೭.೫೧
ವಿಶೇಷ ಪ್ರದೇಶ ಕಾರ್ಯಕ್ರಮಗಳು (ಹೈದರಾಬಾದ್-ಕರ್ನಾಟಕ ಹಾಗೂ ಗಡಿ ಪ್ರದೇಶಗಳ ಅಭಿವೃದ್ಧಿ)	೪೫.೦೦	೩.೯೩
ನೀರಾವರಿ ಮತ್ತು ಪ್ರವಾಹ ನಿಯಂತ್ರಣ	೨೧೨.೩೩	೧೮.೫೪
ವಿದ್ಯುಚ್ಛಕ್ತಿ	೨೭೬.೦೦	೨೪.೧೧
ಉದ್ಯಮ ಮತ್ತು ಖನಿಜಗಳು	೭೬.೪೪	೬.೬೮
ಸಾರಿಗೆ	೫೯.೬೦	೫.೨೧
ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ	೧.೧೫	೦.೧೦
ಸಾಮಾನ್ಯ ಆರ್ಥಿಕ ಸೇವೆಗಳು	೫.೭೪	೦.೫೦
ಸಾಮಾಜಿಕ ಸೇವೆಗಳು	೨೬೬.೭೯	೨೩.೩೦
ಇದರಲ್ಲಿ—ಶಿಕ್ಷಣ	೭೨.೫೫	೬.೩೩
— ಆರೋಗ್ಯ	೪೧.೫೨	೩.೬೨
— ನೀರು ಸರಬರಾಜು, ಗೃಹ ನಿರ್ಮಾಣ ಮತ್ತು ನಗರಾಭಿವೃದ್ಧಿ	೯೪.೮೯	೮.೨೯
— ವಾರ್ತಾ ಮತ್ತು ಪ್ರಚಾರ	೨.೨೫	೦.೨೦
— ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರ ಹಿಂದುಳಿದ ವರ್ಗಗಳ ಕಲ್ಯಾಣ	೨೧.೪೯	೧.೮೮
— ಕಾರ್ಮಿಕ ಮತ್ತು ಕಾರ್ಮಿಕ ಕಲ್ಯಾಣ	೮.೬೯	೦.೭೬
— ಸಮಾಜ ಕಲ್ಯಾಣ ಮತ್ತು ಪೌಷ್ಠಿಕ ಆಹಾರ	೨೪.೫೧	೨.೧೪
— ಇತರೆ ಸಾಮಾಜಿಕ ಸೇವೆಗಳು	೦.೮೯	೦.೦೮
ಸಾಮಾನ್ಯ ಸೇವೆಗಳು	೧೮.೩೬	೧.೬೦
	೧,೧೪೫.೦೦	೧೦೦

೧೬. ಜಿಲ್ಲಾ ವಲಯ ವೆಚ್ಚವು ೩೦೦.೨೯ ಕೋಟಿ ರೂಪಾಯಿ. ನೀರಾವರಿ ಮತ್ತು ವಿದ್ಯುಚ್ಛಕ್ತಿಗೆ ೪೮೮.೩೩ ಕೋಟಿ ರೂಪಾಯಿ ನಿಗದಿಗೊಳಿಸಲಾಗಿದೆ. ೮೫.೧೧ ಕೋಟಿ ರೂಪಾಯಿ ಮೊತ್ತವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕಾಗಿ ಮೀಸಲಿರಿಸಲಾಗಿದೆ.

ರಾಜ್ಯದ ಆರ್ಥಿಕ ನೀತಿ :

೧೭. ಯಾವುದೇ ರಾಜ್ಯ ತನ್ನದೇ ಆದಂಥ ಆರ್ಥಿಕ ನೀತಿಯನ್ನು ಹೊಂದಿರಬಹುದೇ ಎಂಬ ಪ್ರಶ್ನೆಯನ್ನು ನೀವು ಕೇಳಬಹುದು. ನಮ್ಮ ಒಕ್ಕೂಟ ವ್ಯವಸ್ಥೆಯಲ್ಲಿ, ರಾಜ್ಯವು ಸೀಮಿತ ತೆರಿಗೆ ಮೂಲಗಳಿಂದಾಗಿ ಮತ್ತು ಹಣಕಾಸು ಸಾಧನೋಪಾಯಗಳು (monetary controls) ಹಾಗೂ ವಿಶೇಷವಾಗಿ ವಿತ್ತೀಯ ನಿಯಂತ್ರಣಗಳು (fiscal controls) ಇಲ್ಲದೇ ಇರುವ ಕಾರಣದಿಂದಾಗಿ ನಿರ್ಬಂಧಿತವಾಗಿದೆ. ಆದಾಗ್ಯೂ, ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುವ ಹಾಗೂ ಅದನ್ನು ಖರ್ಚು ಮಾಡುವ ವಿಧಾನಗಳನ್ನು ರೂಪಿಸುವುದು ತುಂಬಾ ಉಪಯುಕ್ತ. ಸಾಂಪ್ರದಾಯಿಕ ಸಿದ್ಧಾಂತದ ಪ್ರಕಾರ, ರಾಜ್ಯವು ಯಾವುದೇ ರಾಜಸ್ವ ಕೊರತೆಯನ್ನು ಹೊಂದಿರಬಾರದು. ಅಷ್ಟೇ ಅಲ್ಲದೆ ಬಂಡವಾಳ ಹೂಡಿಕೆಗೆ ಬೇಕಾದಷ್ಟು ಹೆಚ್ಚುವರಿ ಸಂಪನ್ಮೂಲಗಳನ್ನೂ ಸೃಷ್ಟಿಸಿಕೊಳ್ಳಬೇಕು. ಇತ್ತೀಚೆಗೆ ಕೇಂದ್ರ ಹಾಗೂ ರಾಜ್ಯಗಳೆರಡಕ್ಕೂ ಈ ಆದರ್ಶವನ್ನು ಸಾಧಿಸುವುದು ಕಷ್ಟವಾಗಿದೆ. ಹಣಕಾಸು ಆಯೋಗವೂ ಸಹ ಪದೇ ಪದೇ ಉಂಟಾಗುತ್ತಿರುವ ಈ ಪ್ರಕ್ರಿಯೆಯನ್ನು ಗುರುತಿಸಿದೆ. ಕರ್ನಾಟಕದಲ್ಲಿ ನಾವೂ ರಾಜಸ್ವ ಕೊರತೆಯಿಂದ ತಪ್ಪಿಸಿಕೊಳ್ಳಲು ಕೆಲವು ವರ್ಷಗಳಲ್ಲಿ ಸಾಧ್ಯವಾಗಿಲ್ಲ. ಇಂಥ ಕೊರತೆಗಳ ಪುನರಾವರ್ತನೆಯಾಗದಂತೆ ನಾವು ಪ್ರಯತ್ನಿಸಬೇಕು.

೧೮. ಮೇಲೆ ಹೇಳಿದಂಥ ಗುರಿಗಳನ್ನು ಸಾಧಿಸಬೇಕಾದರೆ ಹೆಚ್ಚಿನ ರಾಜಸ್ವ ಸಂಗ್ರಹಣೆ ಮಾಡುವುದರ ಜೊತೆಗೆ ನಿವಾರಿಸಬಹುದಾದ ಹಾಗೂ ನಿರರ್ಥಕ ಯೋಜನೇತರ ವೆಚ್ಚ ಇನ್ನೂ ಬೆಳೆಯದಂತೆ ತಡೆ ಹಾಕಬೇಕು. ಸಾಧ್ಯವಾದರೆ ಅದನ್ನು ಮತ್ತಷ್ಟು ಕಡಿಮೆ ಮಾಡಬೇಕು. ಯೋಜನಾ ವೆಚ್ಚವೆಲ್ಲಾ ಬಂಡವಾಳ ಹೂಡಿಕೆಯಾಗಿ ಪರಿಣಮಿಸುತ್ತದೆ ಎಂದು ಭಾವಿಸುವುದು ಸರಿಯಲ್ಲ. ಯೋಜನೆಯಲ್ಲಿ ರಾಜಸ್ವದಿಂದ ವಹಿಸಿದ ವೆಚ್ಚದ ಅಂಶವೂ ಇದೆ ಮತ್ತು ಅದು ವಿಸ್ತಾರಗೊಳ್ಳುವ ಪ್ರವೃತ್ತಿಯನ್ನು ಹೊಂದಿದೆ ಎಂಬುದನ್ನು ಸರಿಯಾಗಿ ಗುರುತಿಸಿದಂತಿಲ್ಲ. ರಾಜಸ್ವದಿಂದ ವಹಿಸುವ ಈ ಯೋಜನೆಯ ವೆಚ್ಚವನ್ನು ನಿಯಂತ್ರಿಸುವುದು ಅಪೇಕ್ಷಣೀಯ.

೧೯. ರಾಜ್ಯವು ಅನೇಕ ಯೋಜನೆಗಳನ್ನು ಕೈಗೊಳ್ಳುತ್ತದೆ. ಕೆಲವಕ್ಕೆ ತನ್ನದೇ ಆದ ಸಂಪನ್ಮೂಲಗಳನ್ನು ಬಳಸಿಕೊಂಡರೆ ಮತ್ತೆ ಕೆಲವು ಯೋಜನೆಗಳಿಗೆ ವಿಶ್ವ ಬ್ಯಾಂಕ್, ಬ್ರಿಟನ್ನಿನ ಓ.ಡಿ.ಎ., ಜಪಾನಿನ ಓ.ಇ.ಸಿ.ಎಫ್. ಮುಂತಾದ ವಿದೇಶೀ ಸಂಸ್ಥೆಗಳ ಆರ್ಥಿಕ ನೆರವನ್ನು ಭಾಗಶಃ ಅಥವಾ ಪೂರ್ಣವಾಗಿ ಪಡೆದುಕೊಳ್ಳುತ್ತದೆ. ವಿದೇಶಿ ಆರ್ಥಿಕ ನೆರವಿನ ಯೋಜನೆಗಳ ಸಂಬಂಧದಲ್ಲಿ, ಯೋಜನೆಗಳನ್ನು ಕಾರ್ಯಗತಗೊಳಿಸುವಾಗ ರಾಜ್ಯದ ಸಾಲ ಮರುಪಾವತಿಯ ಹೊಣೆಗಾರಿಕೆಯನ್ನು ನಿರ್ವಹಿಸಲು ಸಾಕಾಗುವಷ್ಟು ಆದಾಯವು ಅವುಗಳಿಂದ ಬರುತ್ತದೆಯೋ ಎಂಬುದನ್ನು ನೋಡಬೇಕು. ಹೀಗೆ ಆರ್ಥಿಕ ಸಾಮರ್ಥ್ಯವುಳ್ಳ ಯೋಜನೆಗಳನ್ನು ಮಾತ್ರವೇ ಕೈಗೊಳ್ಳಬೇಕು. ಯೋಜನೆಗಳಿಂದ ಬರುವ ಆದಾಯವು ತೀರ ಗೌಣವಾಗಿದ್ದರೆ ಅವುಗಳಿಗೆ ನಮ್ಮ ಆದ್ಯತಾ ಪಟ್ಟಿಯಲ್ಲಿ ಕೆಳಗಿನ ಸ್ಥಾನ. ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಈ ಹಿಂದೆ, ವಿದೇಶಿ ನೆರವು ದೊರೆಯುತ್ತದೆ ಎಂದರೆ ಸಾಕು ಯಾವುದೇ ಯೋಜನೆಯನ್ನಾಗಲೀ ಅದಕ್ಕೆಷ್ಟು ಖರ್ಚಾಗುತ್ತದೆ ಮತ್ತು ಆ ಯೋಜನೆಯಿಂದ ಲಭಿಸುವ ಪ್ರಯೋಜನಗಳೇನು ಎಂಬುದರ ಬಗ್ಗೆ ವಿಶ್ಲೇಷಿಸದೆ ಕೈಗೆತ್ತಿಕೊಳ್ಳುವ ಪ್ರವೃತ್ತಿ ಇತ್ತು. ಸ್ಥಳೀಯ ಸಂಪನ್ಮೂಲಗಳಿಂದ ಹಣ ಪೂರೈಸಲಾಗುವ ಯೋಜನೆಗಳ ವಿಷಯದಲ್ಲೂ ಇದೇ ರೀತಿಯ ಪರಿಗಣನೆ ಸೂಕ್ತವಾದುದು.

೨೦. ಅರ್ಥಾತ್ ನಮ್ಮ ಆರ್ಥಿಕ ನೀತಿಯು ರಾಜಸ್ವ ಕೊರತೆ ಇಲ್ಲದಂತೆ ಮಾಡುವುದು ಮತ್ತು ಅನಗತ್ಯ ಯೋಜನೆಗಳು ಹಾಗೂ ಯೋಜನೇತರ ವೆಚ್ಚಗಳನ್ನು ಸ್ಥಿಮಿತದಲ್ಲಿರಿಸುವ ಗುರಿಯನ್ನು ಹೊಂದಿರಬೇಕು. ತನ್ಮೂಲಕ ಬಂಡವಾಳ ಹೂಡಿಕೆಯನ್ನು ಹೆಚ್ಚಿಸಬೇಕು ಹಾಗೂ ತಗಲುವ ವೆಚ್ಚಗಳು ಮತ್ತು ಲಭ್ಯವಾಗುವ ಪ್ರಯೋಜನಗಳೆರಡನ್ನು ತೂಗಿ ನೋಡಿ ವಿದೇಶೀ ಹಾಗೂ ಸ್ಥಳೀಯ ಸಾಲಗಳನ್ನು ಎತ್ತಬೇಕು. ಈ ಗುರಿ ಸಾಧಿಸುವಂತೆ ನಾವು ನಮ್ಮ ಕಾರ್ಯನೀತಿಗಳು ಹಾಗೂ ಯೋಜನೆಗಳನ್ನು ಪುನರ್ ರೂಪಿಸಿಕೊಳ್ಳುತ್ತೇವೆ.

ರಾಜ್ಯ ಹಣಕಾಸು ಸ್ಥಿತಿ ಪರಿಶೀಲನೆಗೆ ಆಯೋಗ :

೨೧. ದಿನಾಂಕ ೨೨-೧೨-೧೯೮೯ರಂದು ನಾನು ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಕುರಿತು ಹೇಳಿಕೆ ನೀಡಿದಾಗ, ೧೯೮೩-೮೪ರಿಂದ ೧೯೮೮-೮೯ರ ಅವಧಿಯಲ್ಲಿ ಯೋಜನೇತರ ವೆಚ್ಚಗಳಲ್ಲಿನ ತೀವ್ರ ಹೆಚ್ಚಳವು ರಾಜ್ಯದ ಸಂಪನ್ಮೂಲಗಳನ್ನು ಬಹುವಾಗಿ ಬಳಸಿಕೊಂಡಿತು ಎಂದು ಸೂಚಿಸಿದ್ದು ಮಾನ್ಯ ಸದಸ್ಯರುಗಳಿಗೆ ನೆನಪಿರಬಹುದು. ಯೋಜನೇತರ ವೆಚ್ಚ, ೧೯೮೩-೮೪ರಲ್ಲಿ ೯೪೮.೮೩ ಕೋಟಿ

ರೂಪಾಯಿ ಇದ್ದದ್ದು ೧೯೮೯–೯೦ರ ಅವಧಿಯಲ್ಲಿ ೨,೬೪೪.೪೪ ಕೋಟಿ ರೂಪಾಯಿಗಳಷ್ಟು ಅಂದರೆ ಸುಮಾರು ಮೂರು ಪಟ್ಟು ಹೆಚ್ಚಿತು, ಮೇಲೆ ಹೇಳಿದ ಅವಧಿಯಲ್ಲಿ ಹೆಚ್ಚಿನ ಸಂಪನ್ಮೂಲಗಳ ಸಂಗ್ರಹಣೆಯೂ ಸೇರಿದಂತೆ ತೆರಿಗೆ ಮತ್ತು ತೆರಿಗೆಯೇತರ ಆದಾಯವು ೧,೨೬೪.೪೦ ಕೋಟಿ ರೂಪಾಯಿಗಳಿಂದ ೨,೮೭೯.೦೫ ಕೋಟಿ ರೂಪಾಯಿಗಳಿಗೆ ಅಂದರೆ ೧,೬೧೪.೬೫ ಕೋಟಿ ರೂಪಾಯಿಗಳಷ್ಟು ಹೆಚ್ಚಿತು. ರಾಜ್ಯದಲ್ಲಿ ಯೋಜನೇತರ ವೆಚ್ಚದ ಬೆಳವಣಿಗೆಯು ತೆರಿಗೆ ಮತ್ತು ತೆರಿಗೆಯೇತರ ಆದಾಯಗಳೆರಡನ್ನೂ ಮೀರಿದೆಯೆಂಬುದನ್ನು ಕಾಣಬಹುದು. ಯೋಜನೇತರ ವೆಚ್ಚದ ಹೆಚ್ಚಳವು ಯೋಜನಾ ವೆಚ್ಚ ಮತ್ತು ಯೋಜನಾ ಗಾತ್ರದ ಮೇಲೆ ಎಂಥ ನೇರ ಪರಿಣಾಮ ಬೀರಿತೆಂದರೆ ಸಂಪನ್ಮೂಲಗಳ ತೀವ್ರ ಕೊರತೆಯಿಂದಾಗಿಯೇ ಏಳನೇ ಯೋಜನಾ ಅವಧಿಯ ಕೊನೆಯ ಮೂರು ವರ್ಷಗಳಲ್ಲಿ ನಿರಂತರವಾಗಿ, ಯೋಜನಾ ಗಾತ್ರವನ್ನು ಮೊಟಕುಗೊಳಿಸಬೇಕಾಯಿತು. ಆದ್ದರಿಂದ, ಜನಕಲ್ಯಾಣಕ್ಕೆ ನೇರವಾಗಿ ಸಂಬಂಧಿಸಿದ ಯೋಜನಾ ವೆಚ್ಚವು ಏರಬೇಕಾದರೆ ಯೋಜನೇತರ ವೆಚ್ಚ ಅಗಾಧವಾಗಿ ಬೆಳೆಯದಂತೆ ತಡೆಗಟ್ಟುವುದು ಅತ್ಯಾವಶ್ಯ. ಹಾಗಿದ್ದರೂ, ಯೋಜನೇತರ ವೆಚ್ಚಗಳನ್ನು ಮಾತ್ರವೇ ಗಮನಿಸುವುದು ವಸ್ತುಸ್ಥಿತಿಯ ಕೇವಲ ಒಂದು ಅಂಶವನ್ನು ಮಾತ್ರ ನೋಡಿದಂತಾಗುತ್ತದೆ. ಏಕೆಂದರೆ, ಯೋಜನಾ ಮತ್ತು ಯೋಜನೇತರ ವೆಚ್ಚಗಳು ಪರಸ್ಪರ ಸಂಬಂಧವನ್ನು ಹೊಂದಿರುತ್ತವೆ. ಅಷ್ಟೇ ಅಲ್ಲ, ರಾಜ್ಯದ ಹಣಕಾಸು ಪರಿಸ್ಥಿತಿ ಕುರಿತು ಅರ್ಥಪೂರ್ಣ ವಿಶ್ಲೇಷಣೆ ಮಾಡಬೇಕಾದರೆ, ಜಮೆ ಹಾಗೂ ಖರ್ಚುಗಳೆರಡನ್ನೂ ಒಟ್ಟುಗೂಡಿ ಪರಿಗಣಿಸಬೇಕು. ಆದ ಕಾರಣ ನಾನು ರಾಜ್ಯದ ಹಣಕಾಸು ಪರಿಸ್ಥಿತಿಯನ್ನು ಪರಿಶೀಲಿಸಿ ಸರ್ಕಾರಕ್ಕೆ ಸೂಕ್ತ ಸಲಹೆ ನೀಡಲು ಒಂದು ಉನ್ನತಾಧಿಕಾರ ಆಯೋಗವನ್ನು ನೇಮಕ ಮಾಡಲು ಉದ್ದೇಶಿಸಿದ್ದೇನೆ. ಸದರಿ ಆಯೋಗದ ಕಾರ್ಯವ್ಯಾಪ್ತಿ ಹಾಗೂ ಪರಿಶೀಲನಾಂಶಗಳನ್ನು ತರುವಾಯದಲ್ಲಿ ವಿಶದಪಡಿಸಲಾಗುವುದು.

ಯೋಜನೆಗಳಿಗೆ ಆರ್ಥಿಕ ನೆರವು ನೀಡಲು ವಿದೇಶಿ ಮೂಲಗಳಿಂದ ಸಾಲ :

೨೨. ರಾಜ್ಯದ ಹಣಕಾಸು ಪರಿಸ್ಥಿತಿ ತೃಪ್ತಿಕರವಾಗಿಲ್ಲ ಎಂಬುದು ಸರ್ವವಿಧಿತ. ಇದರಿಂದಾಗಿ ಅನುಷ್ಠಾನಕ್ಕಾಗಿ ಕೈಗೆತ್ತಿಕೊಂಡ ವಿವಿಧ ಯೋಜನೆಗಳಿಗೆ ಸಾಕಷ್ಟು ಹಣ ಒದಗಿಸುವ ರಾಜ್ಯದ ಸಾಮರ್ಥ್ಯಕ್ಕೆ ಧಕ್ಕೆ ಒದಗಿದೆ. ಹೀಗಾಗಿ ಇಂಥ ಹಲವಾರು ಯೋಜನೆಗಳು ವರ್ಷದಿಂದ ವರ್ಷಕ್ಕೆ ಕುಂಟುತ್ತಾ ಸಾಗಿವೆ. ಕರ್ನಾಟಕ ಕೃಷಿ ಮುಖ್ಯವಾಗಿ ಮಳೆಯನ್ನು ಆಧರಿಸಿದೆ. ರಾಜ್ಯದಲ್ಲಿ ೧೪೧ ಲಕ್ಷ ಹೆಕ್ಟೇರುಗಳಷ್ಟು ಒಟ್ಟು ಸಾಗುವಳಿ ಯೋಗ್ಯ ಪ್ರದೇಶವಿದ್ದು, ೫೫ ಲಕ್ಷ ಹೆಕ್ಟೇರುಗಳಷ್ಟು ಪ್ರದೇಶವನ್ನು ನೀರಾವರಿ ವ್ಯಾಪ್ತಿಗೆ ತರಬಹುದಾಗಿದೆ. ಇದುವರೆಗೂ ೨೯.೭೫ ಲಕ್ಷ ಹೆಕ್ಟೇರು ಪ್ರದೇಶವನ್ನು ಮಾತ್ರ ನೀರಾವರಿ ವ್ಯಾಪ್ತಿಗೆ ತರಲಾಗಿದೆ. ಇದರಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳ ವ್ಯಾಪ್ತಿಗೆ ೧೩.೩೧ ಲಕ್ಷ ಹೆಕ್ಟೇರು, ಸಣ್ಣ ನೀರಾವರಿ ಯೋಜನೆಗಳ ವ್ಯಾಪ್ತಿಗೆ ೮.೯೧ ಲಕ್ಷ ಹೆಕ್ಟೇರು ಮತ್ತು ಅಂತರ್ಜಲ ನೀರಾವರಿ ಮೂಲಕ ೭.೫೩ ಲಕ್ಷ ಹೆಕ್ಟೇರು ಪ್ರದೇಶವು ಒಳಗೊಂಡಿದೆ.

೨೩. ರಾಜ್ಯವು ಕೃಷ್ಣಾ ಮತ್ತು ಕಾವೇರಿ ಕಣಿವೆಗಳಲ್ಲಿ ಹಲವು ಯೋಜನೆಗಳನ್ನು ಕೈಗೊಂಡಿದೆ. ಕೃಷ್ಣಾ ಕಣಿವೆ ಯೋಜನೆಗಳನ್ನು ಪೂರ್ಣಗೊಳಿಸಲು ಮೂರು ಸಾವಿರ ಕೋಟಿ ರೂಪಾಯಿಗಳು ಮತ್ತು ಕಾವೇರಿ ಕಣಿವೆ ಯೋಜನೆಗಳನ್ನು ಪೂರ್ಣಗೊಳಿಸಲು ಏಳು ನೂರ ಅರವತ್ತು ಕೋಟಿ ರೂಪಾಯಿಗಳ ಹಣ ಅಗತ್ಯವಿದೆ. ಈಗ ಬಜೆಟ್‌ನಲ್ಲಿ ಒದಗಿಸಲಾಗುತ್ತಿರುವ ಅನುದಾನದ ಪ್ರಮಾಣದ ಮೇರೆಗೆ, ಕೃಷ್ಣಾ ಕಣಿವೆಯ ಯೋಜನೆಗಳನ್ನು ಪೂರ್ಣಗೊಳಿಸಲು ಎರಡು ದಶಕಕ್ಕಿಂತಲೂ ಹೆಚ್ಚು ಕಾಲ ಹಿಡಿಯುವುದು. ಕೃಷ್ಣಾ ಕಣಿವೆ ಯೋಜನೆಗಳನ್ನು ಕ್ರಿ. ಶ. ೨೦೦೦ಕ್ಕೂ ಮುಂಚಿತವಾಗಿ ಪೂರ್ಣಗೊಳಿಸಬೇಕಾಗಿರುವುದರಿಂದ ಆ ಯೋಜನೆಗಳು ತುರ್ತಾಗಿ ಕಾರ್ಯಗತವಾಗಬೇಕಾಗಿವೆ. ತೊಡಗಿಸಬೇಕಾದ ಬಂಡವಾಳದ ಗಾತ್ರ ಮತ್ತು ನಮ್ಮ ಲಭ್ಯವಿರುವ ಸಂಪನ್ಮೂಲಗಳು ಇವೆರಡನ್ನೂ ಗಮನಿಸಿ ನೋಡಿದಾಗ ಇಷ್ಟೊಂದು ಹಣವನ್ನು ರಾಜ್ಯವೇ ಸಂಗ್ರಹಿಸುವುದು ಸಾಧ್ಯವಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಕಾವೇರಿ ಕಣಿವೆ ಯೋಜನೆಗಳನ್ನು ಯೋಜನೆಯಿಂದ ಹೊರತಾಗಿ ಪರಿಗಣಿಸಿರುವುದರಿಂದ ಅವುಗಳಿಗೆ ಸಾಕಷ್ಟು ಹಣ ಒದಗಿಸಲು ಸಾಧ್ಯವಾಗಿಲ್ಲ. ಮುಂದಿನ ಐದು ವರ್ಷಗಳಲ್ಲಿ ಪೂರ್ಣಗೊಳ್ಳಲಿರುವ ಚಾಲ್ತಿ ವಿದ್ಯುಚ್ಛಕ್ತಿ ಯೋಜನೆಗಳಿಗೆ ೯೫೫ ಕೋಟಿ ರೂಪಾಯಿಗಳು ಬೇಕಾಗಬಹುದು. ಈ ಬಂಡವಾಳ ಹೂಡಿಕೆಯಿಂದ ೧೨,೫೦೦ ದಶಲಕ್ಷ ಯೂನಿಟ್‌ಗಳ ಈಗಿರುವ ಸಾಮರ್ಥ್ಯಕ್ಕಿಂತ ಹೆಚ್ಚಿಗೆಯಾಗಿ ೪,೩೮೫ ದಶಲಕ್ಷ ಯೂನಿಟ್‌ಗಳಷ್ಟನ್ನು ಉತ್ಪಾದಿಸಬಹುದೆಂದು ನಿರೀಕ್ಷಿಸಲಾಗಿದೆ. ಭಾರತ ಸರ್ಕಾರವು ನಡೆಸಿದ ವಿದ್ಯುಚ್ಛಕ್ತಿ ಸಮೀಕ್ಷೆಯಿಂದ, ೧೯೯೫ರ ವೇಳೆಗೆ ರಾಜ್ಯದಲ್ಲಿ ವಿದ್ಯುತ್ ಬೇಡಿಕೆಯು ೨೬,೮೦೦ ದಶಲಕ್ಷ ಯೂನಿಟ್‌ಗಳಷ್ಟು ಆಗಬಹುದೆಂದು ತಿಳಿದು ಬಂದಿದೆ. ಈ

ಗುರಿಯನ್ನು ತಲುಪಲು ಇನ್ನೂ ೨,೫೦೦ ಕೋಟಿ ರೂಪಾಯಿಗಳ ಅಗತ್ಯವಿದೆ. ಈ ಎಲ್ಲಾ ಯೋಜನೆಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಹಣ ಒದಗಿಸಲು ರಾಜ್ಯಕ್ಕೆ ಸಾಧ್ಯವಾಗದಿರುವುದರಿಂದ ವಿದೇಶಿ ಮೂಲಗಳಿಂದ ಸಾಲ ಪಡೆಯುವುದಕ್ಕೆ ಅನುಮತಿ ನೀಡುವಂತೆ ಭಾರತ ಸರ್ಕಾರವನ್ನು ನಾವು ಕೋರಿದ್ದೇವೆ. ಈ ಯೋಜನೆಗಳಲ್ಲಿ ಬಂಡವಾಳ ಹೂಡಲು ಇಚ್ಛೆಯುಳ್ಳ ವಿದೇಶಿ ಸಂಸ್ಥೆಗಳಿವೆ. ಪ್ರಚಲಿತ ಅಧಿಕೃತ ಮೂಲಗಳಿಂದಲೇ ರಾಜ್ಯಕ್ಕೆ ಹಣವನ್ನು ವರ್ಗಾಯಿಸಬಹುದೆಂದು ನಾವು ಭಾರತ ಸರ್ಕಾರಕ್ಕೆ ತಿಳಿಸಿರುತ್ತೇವೆ. ನಮ್ಮ ಮನವಿಯನ್ನು ಭಾರತ ಸರ್ಕಾರ ಒಪ್ಪಿದರೆ ಹಲವಾರು ವರ್ಷಗಳಿಂದ ಕುಂಟುತ್ತಾ ಸಾಗಿರುವ ಹಲವು ಯೋಜನೆಗಳನ್ನು ಪೂರ್ಣಗೊಳಿಸಲು ಸಾಧ್ಯವಾಗುವುದಲ್ಲದೆ, ರಾಜ್ಯದ ಅಭಿವೃದ್ಧಿಗೆ ಬಹಳಷ್ಟು ಉತ್ತೇಜನ ದೊರಕುತ್ತದೆ. ಮುಂದಿನ ಅವಶ್ಯ ಕ್ರಮಗಳನ್ನು ಕೈಗೊಳ್ಳಲು ನಮಗೆ ಅನುಕೂಲ ಮಾಡಿಕೊಡುವಂತೆ ನಮ್ಮ ಈ ಪ್ರಸ್ತಾವವನ್ನು ತತ್ವಶಃ ಒಪ್ಪಿಕೊಳ್ಳಬೇಕೆಂದು ನಾನು ಭಾರತ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದೇನೆ. ಭಾರತ ಸರ್ಕಾರದ ಈ ಒಪ್ಪಿಗೆ ದೊರೆತ ಮೇಲೆ ಬೇಕಾದ ಕಾರ್ಯ ವಿಧಾನಗಳನ್ನು ರೂಪಿಸಲಾಗುವುದು. ಈ ಯೋಜನೆಗಳಿಗೆ ಹಣ ಒದಗಿಸಲು ಮತ್ತು ಅಂಥ ವಿದೇಶಿ ಸುಲಭ ಸಾಲಗಳನ್ನು ಯೋಜನೆಯಿಂದ ಹೊರತಾದ ಸಾಲವೆಂದು ಪರಿಗಣಿಸುವಂತೆ ನಾನು ಭಾರತ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಸರ್ಕಾರಿ ನೌಕರರ ಉಪಲಬ್ಧಿಗಳ ಏರಿಕೆ—ಕೇಂದ್ರದ ಪಾತ್ರ :

೨೪. ಸರ್ಕಾರಿ ಉದ್ಯೋಗಿಗಳ ಉಪಲಬ್ಧಿಗಳ ಏರಿಕೆಯ ಕಾರಣದಿಂದ ರಾಜ್ಯ ಸರ್ಕಾರಗಳ ಯೋಜನೇತರ ವೆಚ್ಚದ ಗಾತ್ರ ಹೆಚ್ಚಿ ಅನೇಕ ರಾಜ್ಯಗಳು ಹಣಕಾಸಿನ ಮುಗ್ಗಟ್ಟನ್ನು ಎದುರಿಸುತ್ತಿವೆ. ಅನೇಕ ಬಾರಿ ಕೇಂದ್ರ ಸರ್ಕಾರವು ತನ್ನ ಉದ್ಯೋಗಿಗಳ ವೇತನ ಮತ್ತು ಭತ್ಯೆಗಳನ್ನು ತಾನೇ ಹೆಚ್ಚಿಸಿ, ಇಂಥ ಏರಿಕೆಗೆ ಅವಕಾಶ ಕಲ್ಪಿಸುತ್ತದೆ. ಹೀಗೆ ಮಾಡಿದ ಕೂಡಲೇ ರಾಜ್ಯಗಳಲ್ಲಿನ ನೌಕರರು ಹೆಚ್ಚಿನ ವೇತನ ಮತ್ತು ಭತ್ಯೆಗಳನ್ನು ನೀಡಬೇಕೆಂದು ಒತ್ತಾಯಿಸತೊಡಗುತ್ತಾರೆ, ಈ ಕುರಿತಂತೆ ಕೇಂದ್ರ ಹಾಗೂ ರಾಜ್ಯಗಳು ಪರಸ್ಪರ ಯಾವುದೇ ಸಮಾಲೋಚನೆ ನಡೆಸದೇ ಇರುವ ಕಾರಣ, ರಾಜ್ಯಗಳು ಇಕ್ಕಟ್ಟಿನಲ್ಲಿ ಸಿಲುಕಿ ಸಂಕಷ್ಟಕ್ಕೀಡಾಗುತ್ತವೆ. ಈ ಕಾರಣದಿಂದಾಗಿ ಉಳಿಯುವ ಸಂಪನ್ಮೂಲಗಳು ಸೀಮಿತವಾಗಿದ್ದು ಅವುಗಳ ಕೊರತೆಯಿಂದ ಯೋಜನಾ ಹಂಚಿಕೆಗಳು ಏರುಪೇರಾಗುತ್ತವೆ. ಅನೇಕ ವಲಯಗಳಿಗೆ ನ್ಯಾಯವಾಗಿ ಸಲ್ಲತಕ್ಕ ಪಾಲು ದೊರೆಯುವುದಿಲ್ಲ. ಆದ ಕಾರಣ ರಾಜ್ಯಗಳ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಏರುಪೇರಾಗದಂತೆ ಮಾಡಲು ಈ ಕುರಿತು ಹೆಚ್ಚು ವಿವೇಚನಾಶೀಲ ಧೋರಣೆಯ ಹಾಗೂ ಮರುಚಿಂತನೆಯ ಅಗತ್ಯವಿದೆ.

ಕೈಗಾರಿಕಾ ನೀತಿ :

೨೫. ಉತ್ತಮ ಮೂಲಭೂತ ಸೌಲಭ್ಯಗಳನ್ನು ಹೊಂದಿರುವ ಅಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸಿ ಕೈಗಾರಿಕಾ ಪರಿಸರವನ್ನು ಬಲಪಡಿಸಲು ಮತ್ತು ಪ್ರೋತ್ಸಾಹಿಸಲು ರಾಜ್ಯದ ಕೈಗಾರಿಕಾ ನೀತಿಯನ್ನು ಪುನರ್ ರೂಪಿಸಲಾಗುವುದು. ಎಲೆಕ್ಟ್ರಾನಿಕ್ ಮತ್ತು ಉನ್ನತ ತಂತ್ರಜ್ಞಾನದ ಕೈಗಾರಿಕೆಗಳಿಗೆ ಹಾಗೂ ರಫ್ತು ಸಾಮರ್ಥ್ಯವುಳ್ಳ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡಲಾಗುವುದು.

ಮಂಗಳೂರು ತೈಲ ಶುದ್ಧೀಕರಣ ಕಾರ್ಖಾನೆ :

೨೬. ಮಂಗಳೂರು ತೈಲ ಶುದ್ಧೀಕರಣ ಮತ್ತು ಪೆಟ್ರೋ ಕೆಮಿಕಲ್ಸ್ ಕಾರ್ಖಾನೆಗೆ ಭಾರತ ಸರ್ಕಾರವು ಒಪ್ಪಿಗೆ ನೀಡುತ್ತಿರುವುದರಲ್ಲಿ ಆಗುತ್ತಿರುವ ವಿಳಂಬದ ಬಗ್ಗೆ ನಮ್ಮ ಸರ್ಕಾರಕ್ಕೆ ಕಳವಳ ಉಂಟಾಗಿದೆ. ಈ ಯೋಜನೆಗಾಗಿ ಸಾಕಷ್ಟು ಮೂಲಭೂತ ಸೌಲಭ್ಯಗಳನ್ನು ಸೃಜಿಸಲು ಕ್ರಮ ತೆಗೆದುಕೊಳ್ಳಲಾಗಿದೆ. [illegible],೭೩೨ ಎಕರೆಯಷ್ಟು ಭೂಮಿಯನ್ನು ಈಗಾಗಲೇ ಸ್ವಾಧೀನಪಡಿಸಿಕೊಳ್ಳಲಾಗಿದೆ ಹಾಗೆಯೇ ಈ ಯೋಜನೆಗೆ ನೀರು ಪೂರೈಕೆ ಸಲುವಾಗಿ ನೇತ್ರಾವತಿ ಅಡ್ಡಗಟ್ಟು ಕಾಮಗಾರಿಯನ್ನು ಕರ್ನಾಟಕ ಪವರ್ ಕಾರ್ಪೊರೇಷನ್ ಪ್ರಾರಂಭಿಸಲಿದೆ. ಸರ್ಕಾರವು, ಭಾರತ ಸರ್ಕಾರದ ಉನ್ನತ ಮಟ್ಟದಲ್ಲಿ ಈ ವಿಷಯವನ್ನು ಚರ್ಚಿಸಿದ್ದು ಶೀಘ್ರ ತೀರ್ಮಾನದ ಭರವಸೆ ದೊರೆತಿದೆ.

ಗ್ಯಾಸ್ ಟರ್ಮಿನಲ್ ಪ್ರಾಜೆಕ್ಟ್ :

೨೭. ಗ್ಯಾಸ್ ಟರ್ಮಿನಲ್ ಪ್ರಾಜೆಕ್ಟಿಗೆ ಬೇಗನೆ ಒಪ್ಪಿಗೆ ನೀಡಬೇಕೆಂದು ರಾಜ್ಯ ಸರ್ಕಾರವು ಭಾರತ ಸರ್ಕಾರವನ್ನು ಕೋರಿದೆ. ಭಾರತದ ಗ್ಯಾಸ್ ಅಥಾರಿಟಿ ಲಿಮಿಟೆಡ್, ಫ್ರೆಂಚ್ ತಜ್ಞರ ಸಹಯೋಗದೊಂದಿಗೆ ಕಾರ್ಯ ಸಾಧ್ಯತೆ ವರದಿಯನ್ನು ಸಿದ್ಧಪಡಿಸುತ್ತಿದೆ ಎಂದು ನಮಗೆ ತಿಳಿದು ಬಂದಿದೆ. ಕುದುರೆಮುಖ ಕಬ್ಬಿಣಅದಿರು ಕಂಪನಿಯು ಈ ಅನಿಲವನ್ನು ಸ್ಪಾಂಜ್ ಐರನ್ ಹಾಗೂ ೧೦೦೦ ಮೆ. ವಾ. ಅನಿಲ ಆಧಾರಿತ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲು ಬಳಸಿಕೊಳ್ಳಲಿದೆ.

ಅನಿಲ ಜಾಲ (ಗ್ಯಾಸ್ ಗ್ರಿಡ್) ;

೨೮. ರಾಜ್ಯದಲ್ಲಿ, ತೀವ್ರತರವಾದ ಮತ್ತು ಗುರುತರವಾದ ವಿದ್ಯುಚ್ಛಕ್ತಿ ಅಭಾವದ ಪರಿಸ್ಥಿತಿ ಇರುವುದು ಮಾನ್ಯ ಸದಸ್ಯರಿಗೆ ತಿಳಿದೇ ಇದೆ. ವಿದ್ಯುಚ್ಛಕ್ತಿ ವಲಯಕ್ಕೆ ಗರಿಷ್ಠ ಪ್ರಮಾಣದಲ್ಲಿ ಸಂಪನ್ಮೂಲಗಳನ್ನು ಒದಗಿಸುವುದು ನಮ್ಮ ಉದ್ದೇಶ. ಆದರೂ ಕೊರತೆ ಮುಂದುವರಿಯುವ ಸಾಧ್ಯತೆ ಇದ್ದೇ ಇದೆ. ಈ ಸಂದರ್ಭದಲ್ಲಿ, ದಕ್ಷಿಣದ ರಾಜ್ಯಗಳಲ್ಲಿ ಅನಿಲ ಜಾಲವೊಂದನ್ನು ಸ್ಥಾಪಿಸಬೇಕೆಂದು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಬಲವಾಗಿ ಒತ್ತಾಯಿಸುತ್ತದೆ.

ರಾಜ್ಯ ಸಾರ್ವಜನಿಕ ವಲಯದ ಉದ್ಯಮಗಳು :

೨೯. ರಾಜ್ಯದಲ್ಲಿ ಅನೇಕ ಸಾರ್ವಜನಿಕ ಉದ್ಯಮಗಳು ಇದ್ದು, ಅವುಗಳಲ್ಲಿ ಕೆಲವು ಸ್ವಾತಂತ್ರ್ಯ ಪೂರ್ವದಲ್ಲಿ ಸ್ಥಾಪಿತವಾದವು. ನಮ್ಮ ದೇಶದಲ್ಲಿ ಸಾರ್ವಜನಿಕ ಉದ್ಯಮಗಳ ಸ್ಥಾನ ಮತ್ತು ಪಾತ್ರವನ್ನು ಕುರಿತಂತೆ ಬಹಳಷ್ಟು ಚರ್ಚೆ ನಡೆದಿದೆ. ಯೋಜನಾ ಪ್ರಾರಂಭದಲ್ಲಿ ಸಾರ್ವಜನಿಕ ಉದ್ದಿಮೆಗಳು ದೇಶದ ಕೈಗಾರಿಕಾ ವ್ಯವಸ್ಥೆಯಲ್ಲಿ ಏಕಮೇವಾದ್ವಿತೀಯ ಸ್ಥಾನವನ್ನು ಹೊಂದಿರಬೇಕು ಮತ್ತು ಎಲ್ಲಾ ಪ್ರಮುಖ ಕೈಗಾರಿಕಾ ವಲಯಗಳ ಮೇಲೆ ಸ್ವಾಮ್ಯವನ್ನು ಹೊಂದಿರಬೇಕು ಎಂಬ ಅಭಿಪ್ರಾಯವಿತ್ತು. ಈಗಲೂ ಸಹ ಈ ದೃಷ್ಟಿಕೋನವೇ ಸರಿ ಎಂದು ವಾದಿಸುವ ವ್ಯಕ್ತಿಗಳಿದ್ದರೂ, ಹೆಚ್ಚಿನ ಉದಾರ ನೀತಿಯ ಕಡೆ ಒಲವು ನಿಧಾನಗತಿಯಿಂದ ಸಾಗುತ್ತಿದೆ. ಇದೇ ಬಗೆಯ ಒಲವು ವಿಶ್ವಾದ್ಯಂತ ಈಗ ಪ್ರಚಲಿತ. ಇಂದು ವಿಶ್ವವು ಎರಡು ಪ್ರಬಲ ಸಿದ್ಧಾಂತಗಳ ಪ್ರಭಾವ ವಲಯದಲ್ಲಿ ಉಳಿದಿಲ್ಲ. ಕಮ್ಯುನಿಸಮ್ ಆಗಲಿ, ಕ್ಯಾಪಿಟಲಿಸಮ್ ಆಗಲಿ ಇಂದು ಯಾವುದೇ ಪರಿವರ್ತನೆಗೊಳಗಾಗದೆ ತಮ್ಮ ಮೂಲ ಸ್ವರೂಪದಲ್ಲೇ ಉಳಿದಿರುವುದಿಲ್ಲ. ವಾಸ್ತವವಾಗಿ ಕಮ್ಯುನಿಸ್ಟ್ ತಾತ್ವಿಕ ಚಿಂತಕರಿಗಾಗಲೀ ಬಂಡವಾಳ ಶಾಹಿ ಅರ್ಥ ವ್ಯವಸ್ಥೆ ಅಥವಾ ಮುಕ್ತ ವಾಣಿಜ್ಯ ವ್ಯವಸ್ಥೆಯಲ್ಲಿ ನಂಬಿಕೆ ಇಟ್ಟವರಿಗಾಗಲೀ ಒಂದು ಸರಳ ವ್ಯವಸ್ಥೆಯ ಆಯ್ಕೆಯ ಅವಕಾಶ ಉಳಿದಿಲ್ಲ. ಕಲ್ಯಾಣ ರಾಜ್ಯದ ಉದಯದಿಂದಾಗಿ ಸಾಂಪ್ರದಾಯಿಕ ವ್ಯವಸ್ಥೆಯ ದುರ್ಬರತೆ ಮತ್ತು ಕ್ರೂರತೆ ಕಡಿಮೆಯಾಯಿತು. ಅದೇ ರೀತಿ ಕೆನೀಸಿಯನ್ ಕ್ರಾಂತಿಯಿಂದಾಗಿ ನಿರುದ್ಯೋಗ ಮತ್ತು ವಾಣಿಜ್ಯ ವರ್ತುಲಗಳ ಸಂಕಷ್ಟವೂ ತಗ್ಗಿತ್ತು. ಪೂರ್ವ ಯುರೋಪಿನ ಕಮ್ಯೂನಿಸ್ಟ್ ರಾಜ್ಯಗಳಲ್ಲಿನ ಇತ್ತೀಚಿನ ಬದಲಾವಣೆಗಳು, ಅಲ್ಲಿಯ ಸಮಾಜಗಳು ಭವಿಷ್ಯದಲ್ಲಿ ಇನ್ನಷ್ಟು ಉದಾರ ನೀತಿಯನ್ನು ಅನುಸರಿಸುವ ಹಾಗೆ ಕಾಣುತ್ತದೆ. ಈ ಎರಡೂ ಪದ್ಧತಿಗಳು ಒಂದು ಮತ್ತೊಂದರ ಕಡೆ ಸಾಗಿಬರುತ್ತಿವೆ ಎಂದರೆ ತಪ್ಪಾಗಲಾರದು.

೩೦. ಇಂಥ ಒಂದು ಪರಿಸ್ಥಿತಿಯಲ್ಲಿ, ಸಾರ್ವಜನಿಕ ವಲಯ ಉದ್ಯಮಗಳ ಭವಿಷ್ಯದ ಬಗ್ಗೆ ನಮ್ಮ ದೃಷ್ಟಿಕೋನವು ಕೇವಲ ತಾತ್ವಿಕ ಸೂತ್ರಗಳಿಗೇ ಅಂಟಿಕೊಂಡಿರದೆ, ವ್ಯವಹಾರ ವಿಚಕ್ಷಣೆ ಮತ್ತು ವಾಸ್ತವಿಕತೆಯನ್ನು ಆಧರಿಸಿರಬೇಕು.

೩೧. ಈ ಸಾರ್ವಜನಿಕ ವಲಯ ಉದ್ಯಮಗಳ ಸ್ಥಾಪನೆಯ ಹಿಂದಿನ ಧ್ಯೇಯೋದ್ದೇಶಗಳು ಈಡೇರಿವೆಯೇ ಎಂಬುದನ್ನು ನಾವು ಪರಿಶೀಲಿಸಬೇಕಾಗಿದೆ. ಹಾಗಾಗಿಲ್ಲದಿದ್ದಲ್ಲಿ, ಅದಕ್ಕೆ ಆಗತ್ಯ ಕಾರಣಗಳನ್ನು ಹುಡುಕಬೇಕು. ರಾಜ್ಯದಲ್ಲಿನ ಸಾರ್ವಜನಿಕ ಉದ್ಯಮಗಳಲ್ಲಿ ೪,೧೨೭ ಕೋಟಿ ರೂಪಾಯಿಗಳ ಒಟ್ಟು ಬಂಡವಾಳವನ್ನು ಹೂಡಿದ್ದು ೧೯೮೯ರ ಮಾರ್ಚ್ ೩೧ರ ಹೊತ್ತಿಗೆ ೭೨೦ ಕೋಟಿ ರೂಪಾಯಿಗಳಷ್ಟು ಒಟ್ಟು ನಷ್ಟ ಉಂಟಾಗಿದೆ. ಹೆಚ್ಚು ಹೆಚ್ಚು ಸಾರ್ವಜನಿಕ ಉದ್ಯಮಗಳು ತಮ್ಮ ನಷ್ಟವನ್ನು ಭರಿಸುವುದಕ್ಕೆ ಸರ್ಕಾರದಿಂದ ಬಜೆಟ್ ನೆರವನ್ನು ಕೋರುತ್ತಿವೆ. ಇದರಿಂದಾಗಿ ಲಭ್ಯ ಸಂಪನ್ಮೂಲಗಳ ಮೇಲೆ ಮತ್ತಷ್ಟು ಹೊರೆಯುಂಟಾಗುತ್ತದೆ. ಆದ್ದರಿಂದ ನಾನು, ಸಾರ್ವಜನಿಕ ಉದ್ಯಮಗಳ ನಿಷ್ಠುರವಾದ ಮೌಲ್ಯಮಾಪನವನ್ನು ಮಾಡಲು ಉದ್ದೇಶಿಸುತ್ತೇನೆ. ಸಾರ್ವಜನಿಕ ಉದ್ಯಮಗಳು ದಕ್ಷವಾಗಿ, ಲಾಭದಾಯಕವಾಗಿ ಕಾರ್ಯ ನಿರ್ವಹಿಸಬೇಕೆಂದು ಸರ್ಕಾರವು ನಿರೀಕ್ಷಿಸುತ್ತದೆ.

ಈ ಉದ್ಯಮಗಳಿಗೆ, ಅಗತ್ಯವಾದಂಥ, ಸ್ವಾಯತ್ತತೆ ಮತ್ತು ಸ್ವಾತಂತ್ರ್ಯವನ್ನು ಸರ್ಕಾರವು ನೀಡುತ್ತದೆ ಹಾಗೆಯೇ ಲಾಭ ನಷ್ಟಗಳಿಗೆ ಅವರದೇ ಜವಾಬ್ದಾರಿ. ಸರ್ಕಾರವು, ಸಮರ್ಥ ಹಾಗೂ ದಕ್ಷ ವ್ಯಕ್ತಿಗಳು ಈ ಉದ್ಯಮಗಳ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳುತ್ತದೆ. ಅಗತ್ಯವಾದಲ್ಲಿ ಹೊರಗಿನವರನ್ನು ನೇಮಿಸಲು ಹಿಂಜರಿಯುವುದಿಲ್ಲ. ಈ ರೀತಿ ಉತ್ತಮವಾಗಿ ಕೆಲಸ ಮಾಡುವ ಅಥವಾ ಕಾರ್ಯ ಪ್ರವೃತ್ತಿಯುಳ್ಳ ಘಟಕಗಳಿಗೆ ಮಾತ್ರವೇ ಸರ್ಕಾರ ಬೆಂಬಲ ನೀಡುತ್ತದೆ. ಆದರೆ, ನಿರಂತರವಾಗಿ ನಷ್ಟ ಅನುಭವಿಸುತ್ತಿರುವ ಮತ್ತು ಅಂಥ ನಷ್ಟದ ಪರಿವೆಯೇ ಇಲ್ಲದಂತೆ ಕಾರ್ಯನಿರ್ವಹಿಸುತ್ತಿರುವಂಥ ಘಟಕಗಳ ಸಂಬಂಧದಲ್ಲಿ ನಾವು ಪರ್ಯಾಯ ಕಾರ್ಯನೀತಿಗಳನ್ನು ಯೋಚಿಸಬೇಕಾಗುತ್ತದೆ. ತೀರ ಹದಗೆಟ್ಟ ಕೆಲವು ಸಂದರ್ಭಗಳಲ್ಲಿ ಖಾಸಗಿಯವರಿಗೆ ವಹಿಸಿಕೊಡಬೇಕಾಗಿಯೂ ಬರಬಹುದು. ಈ ವಿಷಯಗಳನ್ನು ಕುರಿತಂತೆ ಮಾನ್ಯ ಸದಸ್ಯರ ಉಪಯುಕ್ತ ಸಲಹೆಗಳನ್ನು ನಾನು ಸ್ವಾಗತಿಸುತ್ತೇನೆ.

೩೨. ಈ ಸಂದರ್ಭದಲ್ಲಿ, ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ನಿಯಮಿತವನ್ನು ಭಾರತದ ಉಕ್ಕು ಪ್ರಾಧಿಕಾರವು ವಹಿಸಿಕೊಳ್ಳಲು ಅನುಮತಿ ನೀಡಿದಂಥ ಭಾರತದ ಮಾಜಿ ಪ್ರಧಾನ ಮಂತ್ರಿ ಶ್ರೀ ರಾಜೀವ್ ಗಾಂಧಿಯವರಿಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಭಾರತದ ಉಕ್ಕು ಪ್ರಾಧಿಕಾರ ನಿಯಮಿತವು ಈಗಾಗಲೇ ಕಂಪನಿಯಲ್ಲಿ ಗಣನೀಯವಾಗಿ ಬಂಡವಾಳವನ್ನು ಹೂಡಿದೆ ಹಾಗೂ ಬಹಳ ಕಾಲ ಸಂಕಷ್ಟದಲ್ಲಿದ್ದ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ನಿಯಮಿತವು ಈಗ ಚೇತರಿಸಿಕೊಳ್ಳುತ್ತಿದೆ ಎಂದು ತಿಳಿಸಲು ನನಗೆ ಸಂತೋಷವಾಗುತ್ತಿದೆ.

ಉದ್ಯೋಗಾವಕಾಶ ಸೃಷ್ಟಿ :

೩೩. ನಿರುದ್ಯೋಗವು ಜನತೆಯ ಪ್ರಥಮ ವೈರಿಯೆಂದು ರಾಜ್ಯ ಸರ್ಕಾರವು ಪರಿಗಣಿಸುತ್ತದೆ. ಇತ್ತೀಚಿನ ದಶಕಗಳಲ್ಲಿ ಜನಸಂಖ್ಯೆಯ ಅಪರಿಮಿತ ಬೆಳವಣಿಗೆ ಮತ್ತು ಅವರೆಲ್ಲರಿಗೂ ಸಾಕಷ್ಟು ಉದ್ಯೋಗಾವಕಾಶವನ್ನು ಒದಗಿಸುವಲ್ಲಿ ನಮ್ಮ ಅರ್ಥ ವ್ಯವಸ್ಥೆ ಅಸಮರ್ಥವಾಗಿರುವುದರಿಂದ ಈ ಸಮಸ್ಯೆ ಗುರುತರವಾಗಿದೆ. ನಗರ ಪ್ರದೇಶಗಳಲ್ಲಿ ಹಾಗೂ ಗ್ರಾಮೀಣ ಪ್ರದೇಶಗಳೆರಡರಲ್ಲೂ ಈ ಸಮಸ್ಯೆ ತೀವ್ರವಾಗಿದೆ, ೧೯೯೦ರ ಡಿಸೆಂಬರ್ ೩೧ ರಂದು ರಾಜ್ಯದಲ್ಲಿನ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಾಯಿಸಲ್ಪಟ್ಟ ನಿರುದ್ಯೋಗಿಗಳ ಸಂಖ್ಯೆಯ ೧೨, ೩೩, ೪೯೭. ಇದರಲ್ಲಿ ೨, ೨೮, ೯೪೩ ಮಂದಿ ಮಹಿಳಾ ನಿರುದ್ಯೋಗಿಗಳು. ಎಸ್. ಎಸ್. ಎಲ್. ಸಿ. ಅಥವಾ ಹೆಚ್ಚಿನ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ನಿರುದ್ಯೋಗಿಗಳ ಸಂಖ್ಯೆಯು ೬, ೮೫, ೨೯೭. ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆಯು ಸುಮಾರು ೧, ೯೩, ೪೭೭ ಹಾಗೂ ಅವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆಯು ೧೮,೦೩೩. ಸರ್ಕಾರಿ ದಾಖಲೆಗಳ ಪ್ರಕಾರ ಅಂಕಿ ಅಂಶ ಇಷ್ಟಾದರೆ ವಾಸ್ತವಿಕ ಪರಿಸ್ಥಿತಿಯು ಇನ್ನೂ ವಿಷಮವಾಗಿರುವುದೆಂದೂ ನಂಬಲಡ್ಡಿಯಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ, ನಿರುದ್ಯೋಗದೊಂದಿಗೆ, ಅನೇಕರಿಗೆ ಪೂರ್ಣಾವಧಿ ಕೆಲಸಗಳಿಲ್ಲ. ಈ ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ಹೆಚ್ಚಿನ ಆದ್ಯತೆ ನೀಡುವುದು ಈ ಸರ್ಕಾರದ ಉದ್ದೇಶವಾಗಿದೆ. ಉದ್ಯೋಗಾವಕಾಶಗಳನ್ನು ಗರಿಷ್ಠ ಪ್ರಮಾಣದಲ್ಲಿ ಸೃಷ್ಟಿಸುವ ರೀತಿಯಲ್ಲಿ ಯೋಜನಾ ಆದ್ಯತೆಗಳು ಮತ್ತು ಬಂಡವಾಳ ಹೂಡಿಕೆಗಳನ್ನು ವಿನ್ಯಾಸಗೊಳಿಸಲಾಗಿದೆ. ಈ ಸಂಬಂಧದಲ್ಲಿ, ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗಾವಕಾಶಗಳನ್ನು ಒದಗಿಸಲು ರೂಪಿತವಾದ ಜವಾಹರ್ ರೋಜ್‌ಗಾರ್ ಯೋಜನೆಯನ್ನು ತುಂಬು ಹುರುಪಿನಿಂದ ಜಾರಿಗೊಳಿಸುತ್ತೇವೆ. ಈ ಯೋಜನೆಯನ್ನು ಜಾರಿಗೊಳಿಸಿದಾಗ, ೧೯೯೦-೯೧ನೇ ವರ್ಷದಲ್ಲಿ ಸುಮಾರು ೮೫೩ ಲಕ್ಷ ಕೆಲಸದ ದಿವಸಗಳನ್ನು ಸೃಷ್ಟಿಸಲು ಸಾಧ್ಯ ಎಂದು ನಿರೀಕ್ಷಿಸಲಾಗಿದೆ.

೩೪. ಈವರೆಗೂ, ಕೈಗಾರಿಕೆಗಳಿಗೆ ಎಲ್ಲಾ ಉತ್ತೇಜನಗಳು ಮತ್ತು ರಿಯಾಯಿತಿಗಳನ್ನು ಕೊಡುವಾಗ ಎಷ್ಟು ಉದ್ಯೋಗಾವಕಾಶಗಳನ್ನು ಸೃಷ್ಟಿಸಲಾಗಿದೆ ಎಂಬುದನ್ನು ಗಮನಿಸದೆ ಬಂಡವಾಳ ಹೂಡಿಕೆಯ ಆಧಾರದ ಮೇಲೆ ಅದನ್ನು ನೀಡಲಾಗುತ್ತಿತ್ತು. ಇಂದಿನ ತಂತ್ರಜ್ಞಾನ ಬಂಡವಾಳ ಆಧಾರಿತವಾದುದರಿಂದ ಹೆಚ್ಚುವರಿ ಉದ್ಯೋಗಾವಕಾಶಗಳನ್ನು ಒದಗಿಸಲು ಬೇಕಾದ ಬಂಡವಾಳ ಹೂಡಿಕೆ ಏರುತ್ತಲೇ ಇದೆ. ಸರ್ಕಾರವು ಬಂಡವಾಳ ಹೂಡಿಕೆಗೆ ಮಾತ್ರವಲ್ಲದೆ ಎಷ್ಟು ಉದ್ಯೋಗಾವಕಾಶಗಳನ್ನು ಸೃಷ್ಟಿಸಲಾಗುತ್ತಿದೆ ಎಂಬುದಕ್ಕೂ ಗಮನ ನೀಡಿ, ಉತ್ತೇಜಕಗಳನ್ನು ನೀಡುವಂಥ ಒಂದು ವ್ಯವಸ್ಥೆಯನ್ನು ಜಾರಿಗೆ ತರಲಿದೆ. ಈ ಕಾರ್ಯ ಯೋಜನೆಯ ವಿವರಗಳನ್ನು ಮುಂದೆ ತಿಳಿಸಲಾಗುವುದು.

ಗೃಹ ನಿರ್ಮಾಣ :

೩೫. ಗೃಹ ನಿರ್ಮಾಣ ಕಾರ್ಯವು ಹೆಚ್ಚಿನ ಉದ್ಯೋಗಾವಕಾಶಗಳನ್ನು ಒದಗಿಸಬಲ್ಲದು. ಹಣಕಾಸು ಸಂಸ್ಥೆಗಳ ನೆರವು ಪಡೆದು ವಿವಿಧ ಗೃಹ ನಿರ್ಮಾಣ ಯೋಜನೆಗಳನ್ವಯ ಹೆಚ್ಚಿನ ಪ್ರಮಾಣದಲ್ಲಿ ಗೃಹ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ. ಕರ್ನಾಟಕ ಗೃಹ ನಿರ್ಮಾಣ ಮಂಡಳಿಯು ೧೯೯೦-೯೧ರ ಸಾಲಿನಲ್ಲಿ ರಾಜ್ಯದಲ್ಲಿ ೧೨,೦೦೦ ಮನೆಗಳನ್ನು ಕಟ್ಟುವ ಯೋಜನೆಯನ್ನು ಕೈಗೊಂಡಿದೆ. ಮುಂಬರುವ ವರ್ಷದಲ್ಲಿ ಹೊಸ ಗೃಹ ನಿರ್ಮಾಣ ಯೋಜನೆಯೊಂದನ್ನು ಕೈಗೊಳ್ಳಲಾಗುವುದು. ಈ ಉದ್ದೇಶಕ್ಕಾಗಿ ೩೬೧ ಲಕ್ಷ ರೂಪಾಯಿ ಮೊತ್ತವನ್ನು ಮೀಸಲಿಡಲಾಗಿದೆ. ಭಾಗ್ಯ ಮಂದಿರ ಯೋಜನೆಯಡಿಯಲ್ಲಿ ೬೫೦೦ ವ್ಯಕ್ತಿಗಳು ಪ್ರಯೋಜನ ಪಡೆಯುತ್ತಾರೆ.

ರೆವಿನ್ಯೂ ಭೂಮಿಯಲ್ಲಿ ಅನಧಿಕೃತ ಕಟ್ಟಡ ನಿರ್ಮಾಣ ;

೩೬. ನಗರ ಪ್ರದೇಶಗಳ ಯೋಜಿತ ಅಭಿವೃದ್ಧಿ ಮತ್ತು ರೆವಿನ್ಯೂ ಭೂಮಿಗಳಲ್ಲಿ ಅನಧಿಕೃತ ಕಟ್ಟಡ ನಿರ್ಮಾಣ ಇವೆರಡೂ ಅಸಂಗತ, ಆದರೂ ನಗರ ಪ್ರದೇಶಗಳಲ್ಲಿ ಅದರಲ್ಲೂ ಮುಖ್ಯವಾಗಿ ದೊಡ್ಡ ನಗರಗಳು ಮತ್ತು ಪಟ್ಟಣಗಳಲ್ಲಿ ಅನಧಿಕೃತವಾಗಿ ಕಟ್ಟಡ ನಿರ್ಮಾಣ ನಡೆಯುತ್ತಲೇ ಇದೆ. ಹಲವಾರು ಭೂ ಶಾಸನಗಳನ್ನು ಉಲ್ಲಂಘಿಸಿ ಅನಧಿಕೃತವಾಗಿ ಕಟ್ಟಡಗಳ ನಿರ್ಮಾಣ ಆಗುತ್ತಿರುವುದೇನೋ ನಿಜ. ಒಂದು ಕಡೆ, ರಾಜ್ಯ ಸರ್ಕಾರಕ್ಕೆ ಮತ್ತು ಸ್ಥಳೀಯ ಮಂಡಲಿಗಳಿಗೆ ಗಣನೀಯವಾಗಿ ನಷ್ಟವಾದರೆ ಇನ್ನೊಂದೆಡೆ, ಈ ಅನಧಿಕೃತ ಕಟ್ಟಡಗಳ ನಿವಾಸಿಗಳು ಮೂಲಭೂತ ನಾಗರೀಕ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಅನಧಿಕೃತವಾಗಿ ನಿರ್ಮಿಸಲಾಗಿರುವ ಈ ಕಟ್ಟಡಗಳನ್ನು ಸಕ್ರಮಗೊಳಿಸುವ ವಿಷಯ ಸರ್ಕಾರದ ಗಮನದಲ್ಲಿದೆ. ಈ ಸರಕಾರವು ಸಹಾನುಭೂತಿಯಿಂದ ಎಲ್ಲಾ ಅಂಶಗಳನ್ನೂ ಪರಿಶೀಲಿಸಿ ಈ ವಿಷಯದಲ್ಲಿ ಸೂಕ್ತ ತೀರ್ಮಾನವನ್ನು ತೆಗೆದುಕೊಳ್ಳಲಿದೆ.

ನಗರಪ್ರದೇಶದ ಖಾಲಿ ಜಮೀನುಗಳ ಮೇಲೆ ತೆರಿಗೆ ವಿಧಿಸುವುದು :

೩೭. ೧೯೮೮-೮೯ನೇ ಬಜೆಟ್‌ನಲ್ಲಿ ಖಾಲಿ ಜಮೀನಿನ ಮೇಲೆ ತೆರಿಗೆ ವಿಧಿಸುವ ಪ್ರಸ್ತಾವವನ್ನು ಮಂಡಿಸಲಾಗಿತ್ತು. ಆ ಸಂದರ್ಭದಲ್ಲಿ ಆರು ನಗರ ಪಾಲಿಕೆಗಳು ಮತ್ತು ಇಪ್ಪತ್ತು ಮುನಿಸಿಪಲ್ ಪ್ರದೇಶಗಳಲ್ಲಿ ಈ ತೆರಿಗೆಯನ್ನು ವಿಧಿಸಲು ಉದ್ದೇಶಿಸಲಾಗಿತ್ತು. ೫೦ ಚದರ ಮೀಟರ್‌ಗಳಿಗಿಂತ ಹೆಚ್ಚಿನ ಖಾಲಿ ನಗರ ಜಮೀನುಗಳ ಸಂಬಂಧದಲ್ಲಿ ಚದರ ಮೀಟರ್ ಒಂದಕ್ಕೆ ೩ ರೂಪಾಯಿಗಳ ದರದಲ್ಲಿ ತೆರಿಗೆ ವಿಧಿಸಲು ಉದ್ದೇಶಿಸಿದ್ದು ಇದರಿಂದ ೨೧ ಕೋಟಿ ರೂಪಾಯಿಗಳ ಉತ್ಪನ್ನವನ್ನು ನಿರೀಕ್ಷಿಸಲಾಗಿತ್ತು. ಇದುವರೆಗೂ ಈ ತೆರಿಗೆಯನ್ನು ಜಾರಿಗೆ ತಂದಿಲ್ಲ. ೧೯೯೦-೯೧ನೇ ವರ್ಷದಲ್ಲಿ ಇದನ್ನು ಜಾರಿಗೆ ತರುವ ಉದ್ದೇಶ ಸರ್ಕಾರಕ್ಕಿದೆ. ಇದಕ್ಕೆ ಸಂಬಂಧಪಟ್ಟಂತೆ ಸೂಕ್ತ ಕಾನೂನನ್ನು ತರಲಾಗುವುದು

ಹೈದರಾಬಾದ್-ಕರ್ನಾಟಕ ಪ್ರದೇಶದ ಅಭಿವೃದ್ಧಿ :

೩೮. ಎಲ್ಲಾ ಅಭಿವೃದ್ಧಿ ಸೂಚಿಗಳಿಂದ ಸ್ಪಷ್ಟವಾದ ಸಂಗತಿ ಎಂದರೆ ರಾಜ್ಯದಲ್ಲಿನ ಇತರ ಪ್ರದೇಶಗಳಿಗೆ ಹೋಲಿಸಿ ನೋಡಿದಾಗ ಹೈದರಾಬಾದ್-ಕರ್ನಾಟಕ ಪ್ರದೇಶ ಹಿಂದುಳಿದಿರುವುದು. ಪ್ರಾದೇಶಿಕ ಅಭಿವೃದ್ಧಿಯಲ್ಲಿ ಈ ರೀತಿಯ ಅಸಮತೋಲನವು ಆ ಪ್ರದೇಶದ ಜನತೆಯಲ್ಲಿ ಸಹಜವಾಗಿಯೇ ಅಸಮಾಧಾನವನ್ನುಂಟುಮಾಡಿದೆ. ಬಹುಕಾಲದಿಂದ ಮುಂದುವರಿಯುತ್ತಿರುವ ಈ ಸಮಸ್ಯೆಯ ಬಗ್ಗೆ ಸರ್ಕಾರಕ್ಕೆ ತುಂಬಾ ಕಳಕಳಿ ಇದೆ ಮತ್ತು ಈ ಪ್ರದೇಶವನ್ನು ಅಭಿವೃದ್ಧಿಪಡಿಸಲು ಸರ್ವ ಪ್ರಯತ್ನಗಳನ್ನೂ ಮಾಡಬೇಕೆಂದು ನಿರ್ಧರಿಸಿದೆ. ಈ ಪ್ರದೇಶದ ಅಭಿವೃದ್ಧಿಗಾಗಿ ನಲವತ್ತು ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿದೆ. ಈ ಮೊಬಲಗನ್ನು ವಿವಿಧ ಯೋಜನಾ ಕಾರ್ಯಕ್ರಮಗಳನ್ವಯ ಈ ಪ್ರದೇಶಕ್ಕೆ ಹಂಚಿಕೆ ಮಾಡಲಾದ ೫೩ ಕೋಟಿ ರೂಪಾಯಿಗಳ ಜೊತೆಗೆ ಹೆಚ್ಚಿಗೆಯಾಗಿ ನೀಡಲಾಗಿದೆ. ಇದರಿಂದ ಈ ಪ್ರದೇಶದಲ್ಲಿ ಅಭಿವೃದ್ಧಿಯ ಹೊಸ ಶಕವೊಂದು ಪ್ರಾರಂಭವಾಗುತ್ತದೆಂದು ಸರ್ಕಾರವು ನಂಬಿದೆ.

ಗಡಿ ಪ್ರದೇಶದ ಅಭಿವೃದ್ಧಿ :

೩೯. ಗಡಿ ಪ್ರದೇಶದ ಅಭಿವೃದ್ಧಿಗೆ ವಿಶೇಷ ಗಮನ ನೀಡಲು ಸರ್ಕಾರವು ತೀರ್ಮಾನಿಸಿದೆ. ಈ ಉದ್ದೇಶಕ್ಕಾಗಿ ನಾನು ೫.೦೦ ಕೋಟಿ ರೂ.ಗಳನ್ನು ಒದಗಿಸಿದ್ದೇನೆ.

ಪಂಚಾಯಿತ್ ರಾಜ್ ;

೪೦. ಪಂಚಾಯಿತ್ ರಾಜ್ಯದ ಕಲ್ಪನೆ ಬಹಳ ಹಳೆಯದು. ಆಧುನಿಕ ಯುಗದಲ್ಲೂ ಗಾಂಧೀಜಿಯವರ ಕಾಲದಲ್ಲೇ ಇದರ ಪರಿಕಲ್ಪನೆ ಇತ್ತು. ಇತರ ರಾಜ್ಯಗಳಲ್ಲಿದಂತೆ ನಮ್ಮಲ್ಲಿ ಕೂಡ ಗ್ರಾಮ ಪಂಚಾಯಿತಿಗಳ ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಳಿಗಳ ರೂಪದಲ್ಲಿ ಆಡಳಿತದ ವಿಕೇಂದ್ರಿಕರಣ ವ್ಯವಸ್ಥೆ ಜಾರಿಯಲ್ಲಿತ್ತು. ಈಗ ತಂದ ಶಾಸನವು ಗ್ರಾಮ ಮಟ್ಟದಲ್ಲಿನ ಪ್ರಜಾಪ್ರಭುತ್ವವನ್ನು ಇನ್ನೊಂದು ಹೆಜ್ಜೆ ಮುಂದಕ್ಕೆ ಒಯ್ದಿದೆ. ನಾವು ಪ್ರಜಾಪ್ರಭುತ್ವದ ವಿಕೇಂದ್ರೀಕರಣ ಹಾಗೂ ಜನತೆಗೆ ಅಧಿಕಾರ ಎಂಬ ನೀತಿಗೆ ಬದ್ಧರಾಗಿದ್ದೇವೆ. ಈ ಸಂಸ್ಥೆಗಳಿಗೆ ಎಂದರೆ ಜಿಲ್ಲಾ ಪರಿಷತ್ತುಗಳು ಮತ್ತು ಮಂಡಲ ಪಂಚಾಯತುಗಳಿಗೆ ಎಷ್ಟು ಮಹತ್ವ ನೀಡಿದ್ದೇವೆಂಬುದು, ೧೯೯೦-೯೧ನೇ ವರ್ಷಾವಧಿಯಲ್ಲಿ ೧,೧೪೫ ಕೋಟಿ ರೂಪಾಯಿಗಳ ಒಟ್ಟು ಯೋಜನಾ ವೆಚ್ಚದಲ್ಲಿ ಜಿಲ್ಲಾ ವಲಯಕ್ಕಾಗಿ ೩೦೦.೨೯ ಕೋಟಿ ರೂಪಾಯಿಗಳಷ್ಟು ಹಣವನ್ನು ಹಂಚಿಕೆ ಮಾಡಿರುವುದನ್ನು ನೋಡಿದಾಗ ಸ್ಪಷ್ಟವಾಗುತ್ತದೆ. ಪಂಚಾಯತ್ ರಾಜ್ಯ ಮತ್ತು ಅದರ ಸಂಸ್ಥೆಗಳ ಬಗ್ಗೆ ನಮ್ಮ ವಿಶ್ವಾಸ ಅಚಲ. ಆದರೆ ಈಗಿನ ವ್ಯವಸ್ಥೆಯನ್ನು ಇನ್ನೂ ಹೆಚ್ಚು ಪರಿಣಾಮಕಾರಿಯನ್ನಾಗಿ ಮಾಡಲು ಸೂಕ್ತ ಮಾರ್ಪಾಟುಗಳ ಅಗತ್ಯವಿದೆಯೆಂದು ಸರ್ಕಾರ ಭಾವಿಸುತ್ತದೆ.

ಗ್ರಾಮೀಣ ರಸ್ತೆಗಳ ಅಭಿವೃದ್ಧಿಗಾಗಿ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿ ನಿಧಿಗಳ ಸಂಗ್ರಹ :

೪೧. ರಾಜ್ಯದಲ್ಲಿ ಒಟ್ಟು ೧೧೬ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಗಳಿದ್ದು, ಅವುಗಳು, ಶೇಕಡ ಒಂದರ ದರದಲ್ಲಿ ಮಾರುಕಟ್ಟೆ ಶುಲ್ಕವನ್ನು ವಸೂಲಿ ಮಾಡುತ್ತಿವೆ. ಮಾರುಕಟ್ಟೆ ಸಮಿತಿಗಳು ತಮಗೆ ಸಂಬಂಧಿಸಿದ ಮಾರುಕಟ್ಟೆ ಪ್ರಾಂಗಣಗಳಲ್ಲಿ ಮಾತ್ರವೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳದೆ, ತಮ್ಮ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿಯೂ ಕೈಗೊಳ್ಳಬಹುದು. ಇದುವರೆಗೂ, ಅವುಗಳ ಅಭಿವೃದ್ಧಿ ಕಾರ್ಯಗಳು ಬಹುಪಾಲು ಮಾರುಕಟ್ಟೆ ಪ್ರಾಂಗಣಗಳಿಗೆ ಮಾತ್ರ ಸೀಮಿತವಾಗಿದ್ದುವು. ಆದ್ದರಿಂದ, ಅವುಗಳ ಕಾರ್ಯವಲಯವನ್ನು ಹೆಚ್ಚಿಸಲು ಮತ್ತು ವಿಸ್ತರಿಸಲು ಉದ್ದೇಶಿಸಿದೆ. ನಮ್ಮ ಗ್ರಾಮೀಣ ರಸ್ತೆಗಳ ದುಸ್ಥಿತಿಯ ಬಗ್ಗೆ ಮಾನ್ಯ ಸದಸ್ಯರುಗಳಿಗೂ ತಿಳಿದಿದೆ. ಅವುಗಳಲ್ಲಿ ಬಹಳಷ್ಟು ರಸ್ತೆಗಳನ್ನು ಕೂಡಲೇ ದುರಸ್ತಿಗೊಳಿಸುವ ಅವಶ್ಯಕತೆಯಿದೆ. ಹಲವು ಪ್ರದೇಶಗಳಿಗೆ ಹೊಸದಾಗಿ ರಸ್ತೆಗಳನ್ನು ನಿರ್ಮಿಸಿ ಸಂಪರ್ಕ ಕಲ್ಪಿಸುವ ಅಗತ್ಯವೂ ಉಂಟು. ಹೊಸ ರಸ್ತೆಗಳ ನಿರ್ಮಾಣ ಮತ್ತು ಈಗಿರುವ ರಸ್ತೆಗಳ ಸುಧಾರಣೆಗೆ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಲಭ್ಯವಿರುವ ಹೆಚ್ಚುವರಿ ನಿಧಿಯನ್ನು ಬಳಸಿಕೊಳ್ಳಲು ಉದ್ದೇಶಿಸಲಾಗಿದೆ. ಮುಂದಿನ ಐದು ವರ್ಷಗಳಲ್ಲಿ ಈ ಕಾರ್ಯಕ್ರಮಗಳಿಗಾಗಿ ೧೦೦ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗುವುದು. ಇವುಗಳ ರೂಪರೇಷೆಗಳನ್ನು ಸಿದ್ಧಪಡಿಸಲಾಗಿದೆ.

ಕುಟುಂಬ ಕಲ್ಯಾಣ

೪೨. ಗ್ರಾಮಾಂತರ ಪ್ರದೇಶಗಳಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಮತ್ತು ಪ್ರಾಥಮಿಕ ಆರೋಗ್ಯ ಘಟಕಗಳಿಗೆ ಹೊಂದಿಕೊಂಡಿರುವಂತೆ ೧೦೦ ಪ್ರಸೂತಿವಾರ್ಡ್‌ಗಳ ಹಾಗೂ ಕುಟುಂಬ ಕಲ್ಯಾಣ ವಾರ್ಡುಗಳ ನಿರ್ಮಾಣ ಕಾರ್ಯವನ್ನು ರಾಜ್ಯ ಸರ್ಕಾರವು ಕೈಗೊಳ್ಳುತ್ತದೆ. ಈ ಪ್ರತಿಯೊಂದು ಪ್ರಸೂತಿ ಹಾಗೂ ಕುಟುಂಬ ಕಲ್ಯಾಣ ವಾರ್ಡುಗಳಲ್ಲಿ ೧೨ ರಿಂದ ೧೫ ಹಾಸಿಗೆ ಸೌಲಭ್ಯವಿರುತ್ತದೆ. ಈ ಯೋಜನೆಗೆ ಸುಮಾರು ೪ ಕೋಟಿ ರೂ. ವೆಚ್ಚ ತಗಲುವುದೆಂದು ಅಂದಾಜು ಮಾಡಲಾಗಿದೆ. ಇದರಲ್ಲಿ, ವಾರ್ಡುಗಳಿಗೆ ಬೇಕಾಗುವ ಸಲಕರಣೆಗಳು ಹಾಗೂ ಪೀಠೋಪಕರಣಗಳಿಗೆ ತಗಲುವ ವೆಚ್ಚವೂ ಸೇರಿದೆ. ಇದಕ್ಕಾಗಿ ಬಜೆಟ್ಟಿನಲ್ಲಿ ೩ ಕೋಟಿ ರೂ. ಒದಗಿಸಲಾಗಿದೆ.

ಸ್ಥಳೀಯ ಸಂಸ್ಥೆಗಳು ಮತ್ತು ಸಾರ್ವಜನಿಕರು ಎಲ್ಲಿ ಕನಿಷ್ಠ ಒಂದು ಲಕ್ಷ ರೂ. ವಂತಿಗೆ ಹಾಗೂ ನಿವೇಶನವನ್ನು ಒದಗಿಸುವರೋ ಅಂತಹ ಪ್ರದೇಶಗಳಲ್ಲಿ ಅವಶ್ಯಕತೆಯ ಮೇರೆಗೆ ಪ್ರಸೂತಿ ಮತ್ತು ಕುಟುಂಬ ಕಲ್ಯಾಣ ವಾರ್ಡುಗಳ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು.

ನಿರ್ಮಲ ಗ್ರಾಮ ಯೋಜನೆ :

೪೩. ಯುನಿಸೆಫ್ ನೆರವಿನೊಂದಿಗೆ ಮೈಸೂರು ಜಿಲ್ಲೆಯಲ್ಲಿ ಈಗಾಗಲೇ ಕೈಗೆತ್ತಿಕೊಂಡಿರುವ ಯೋಜನೆಯ ಮಾದರಿಯಲ್ಲೇ ಗ್ರಾಮೀಣ ಕುಟುಂಬಗಳಿಗೆ ಶೌಚಾಲಯಗಳನ್ನು ನಿರ್ಮಿಸಿಕೊಡುವ ಮೂಲಕ ಗ್ರಾಮಾಂತರ ನೈರ್ಮಲ್ಯಕ್ಕೆ ಉತ್ತೇಜನ ಕೊಡುವ ಸಲುವಾಗಿ ‘ ನಿರ್ಮಲ ಗ್ರಾಮ ಯೋಜನೆ ’’ ಎಂಬ ಹೊಸ ಕಾರ್ಯಕ್ರಮವೊಂದನ್ನು ಪ್ರಾರಂಭಿಸಲಾಗುವುದು. ಈ ಯೋಜನೆಯ ಮೇರೆಗೆ ಪ್ರತಿ ವರ್ಷ ಒಂದು ಲಕ್ಷ ಕುಟುಂಬಗಳಿಗೆ ನಾಲ್ಕು ನೂರು ರೂಪಾಯಿ ಬೆಲೆಯ ಸಾಮಗ್ರಿಗಳ ರೂಪದಲ್ಲಿ ಸಹಾಯವನ್ನು ಹಾಗೂ ತಾಂತ್ರಿಕ ಮಾರ್ಗದರ್ಶನವನ್ನು ನೀಡಲಾಗುವುದು. ಈ ಕಾರ್ಯಕ್ರಮಕ್ಕೆ ಪ್ರತಿ ವರ್ಷ ೪ ಕೋಟಿ ರೂಪಾಯಿ ವಿನಿಯೋಗವಾಗುವುದೆಂದು ನಿರೀಕ್ಷಿಸಲಾಗಿದೆ. ಈ ಪೈಕಿ ಸುಮಾರು ೨ ಕೋಟಿ ರೂಪಾಯಿಗಳನ್ನು ಅಂತರ ರಾಷ್ಟ್ರೀಯ ಏಜೆನ್ಸಿಗಳಿಂದ ನೆರವಿನ ರೂಪದಲ್ಲಿ ಪಡೆದುಕೊಳ್ಳಲು ರಾಜ್ಯ ಸರ್ಕಾರವು ಉದ್ದೇಶಿಸಿದೆ.

ಏತ ನೀರಾವರಿ :

೪೪. ಸಹಕಾರಿ ಏತ ನೀರಾವರಿ ಸಂಘಗಳಿಗೆ ವಂತಿಗೆ ಕೊಡುವುದು ರೈತರಿಗೆ ಕಷ್ಟವಾಗುವುದೆಂದು ಹಾಗೂ ನದಿ ದಂಡೆಯುದ್ದಕ್ಕೂ ಏತ ನೀರಾವರಿ ಯೋಜನೆಗಳ ಅನುಷ್ಠಾನವನ್ನು ಸರ್ಕಾರವೇ ವಹಿಸಿಕೊಳ್ಳಬೇಕೆಂದೂ ಮನವಿಗಳು ಬಂದಿವೆ. ಏತ ನೀರಾವರಿಗೆ ಹೇರಳ ಅವಕಾಶವಿರುವ ಪಶ್ಚಿಮದಿಂದ ಪೂರ್ವಕ್ಕೆ ಹಾಗೂ ಪೂರ್ವದಿಂದ ಪಶ್ಚಿಮಕ್ಕೆ ಹರಿಯುತ್ತಿರುವ ಹಲವಾರು ನದಿಗಳು ಕರ್ನಾಟಕದಲ್ಲಿವೆ. ಈ ವಿಷಯವನ್ನು ಗಮನಿಸಿ ಸರ್ಕಾರವು ದೊಡ್ಡ ಪ್ರಮಾಣದಲ್ಲಿ ಏತ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಿದೆ.

ರೈತರಿಗೆ ಬಡ್ಡಿ ಸಹಾಯಧನ :

೪೫. ಸಣ್ಣ ಮತ್ತು ಅತಿ ಸಣ್ಣ ರೈತರು ಪಡೆದುಕೊಂಡಿರುವ ಬೆಳೆ ಸಾಲಕ್ಕೆ ಸಂಬಂಧಿಸಿದಂತೆ ಬಡ್ಡಿ ಸಹಾಯಧನ ಒದಗಿಸುವ ಒಂದು ಹೊಸ ಯೋಜನೆಯನ್ನು ೨–೧೦–೧೯೯೦ರಿಂದ ಜಾರಿಗೆ ಬರುವಂತೆ ಕಾರ್ಯಗತಗೊಳಿಸಲು ಉದ್ದೇಶಿಸಲಾಗಿದೆ. ಈ ಯೋಜನೆಯ ರೂಪರೇಷೆಗಳನ್ನು ಮುಂದೆ ತಿಳಿಸಲಾಗುವುದು.

(ಈ ಸಂದರ್ಭದಲ್ಲಿ ಜನತಾದಳ ಹಾಗೂ ಭಾರತೀಯ ಜನತಾ ಪಕ್ಷದ ಸದಸ್ಯರು ಪ್ರತಿಭಟಿಸಿ ಸಭಾತ್ಯಾಗ ಮಾಡಿದರು)

ರಿಯಾಯಿತಿಗಳ ಮರುಪರಿಶೀಲನೆ :

೪೬. ನಮ್ಮಲ್ಲಿರುವ ಸಂಪನ್ಮೂಲಗಳು ಪರಿಮಿತವಾಗಿದ್ದು ಬೇಡಿಕೆ ಬಹಳ ಹೆಚ್ಚಾಗಿದೆ. ಯೋಜಿತ ಅಭಿವೃದ್ಧಿಯನ್ನು ಸಾಧಿಸಲು ಈ ಅತ್ಯಲ್ಪ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ವಿನಿಯೋಗಿಸಿಕೊಳ್ಳಬೇಕಾಗಿದೆ. ಈ ಉದ್ದೇಶವನ್ನು ಮನಸ್ಸಿನಲ್ಲಿಟ್ಟುಕೊಂಡು ನಾವು ಹಿಂದಿನ ಸರ್ಕಾರವು ಪ್ರಾರಂಭಿಸಿದ ವಿವಿಧ ಕಾರ್ಯಕ್ರಮಗಳನ್ನು, ಮುಖ್ಯವಾಗಿ, ರಿಯಾಯಿತಿ ಬೆಲೆಗೆ ಆಹಾರ ಧಾನ್ಯಗಳ ನೀಡಿಕೆ, ಉಚಿತ ಸಮವಸ್ತ್ರಗಳ ಮತ್ತು ಪಠ್ಯಪುಸ್ತಕಗಳ ಸರಬರಾಜು ಹಾಗೂ ಸೀರೆ_ಪಂಚೆ ಯೋಜನೆ ಇವುಗಳನ್ನು ಪುನರ್ವಿಮರ್ಶೆ ಮಾಡಿದ್ದೇವೆ.

೪೭. ಹಾಗೆ ಪುನರ್ವಿಮರ್ಶೆ ಮಾಡಿದಾಗ, ವಿದ್ಯಾರ್ಥಿಗಳ ಆರ್ಥಿಕ ಸ್ಥಿತಿ ಏನೇ ಇದ್ದರೂ, ಎಲ್ಲರಿಗೂ ಸಮವಸ್ತ್ರಗಳನ್ನು ಮತ್ತು ಪಠ್ಯ ಪುಸ್ತಕಗಳನ್ನು ಉಚಿತವಾಗಿ ಪೂರೈಸುವುದು ಸಮರ್ಥನೀಯವಲ್ಲವೆಂಬ ತೀರ್ಮಾನಕ್ಕೆ ನಾವು ಬಂದಿದ್ದೇವೆ. ಸೀರೆ–ಪಂಚೆಗಳ ಪೂರೈಕೆಯ ಯೋಜನೆಯನ್ನು

ನಿಲ್ಲಿಸಲಾಗುವುದು. ಆದಾಗ್ಯೂ, ರಿಯಾಯಿತಿ ದರಗಳಲ್ಲಿ ಆಹಾರ ಧಾನ್ಯಗಳ ಸರಬರಾಜಿಗೆ ಸಂಬಂಧಿಸಿದ ಯೋಜನೆ ಮುಂದುವರಿಯುವುದು.

ಬಳಕೆದಾರರ ಹಿತರಕ್ಷಣೆ :

೪೮. ನಮ್ಮ ದೇಶದಲ್ಲಿ ಬಹಳಕಾಲದಿಂದಲೂ ಮಾರುಕಟ್ಟೆಗಳಲ್ಲಿ ಮಾರಾಟಗಾರರದೇ ಮೇಲುಗೈ. ನಮ್ಮ ಸಂರಕ್ಷಕ ವ್ಯಾಪಾರ ನೀತಿಯು ದೇಶಿಯ ಕೈಗಾರಿಕೆ ಮತ್ತು ವ್ಯಾಪಾರದ ಬೆಳವಣಿಗೆಯನ್ನು ಪೋಷಿಸಿದೆಯಾದರೂ ಮಾನಕ ಗುಣಮಟ್ಟಗಳನ್ನು ನಾವು ಸದಾ ಉಳಿಸಿಕೊಂಡು ಬಂದಿಲ್ಲವೆಂಬುದು ವಿಷಾದಕರ. ಖಾದ್ಯ ಪದಾರ್ಥಗಳಿಗೆ ಬಹಳ ಹಾನಿಕಾರಿ ಪದಾರ್ಥಗಳನ್ನು ಕಲಬೆರಕೆ ಮಾಡಿರುವ ಪ್ರಕರಣಗಳು ಇಲ್ಲದಿಲ್ಲ. ಇಂತಹ ಪರಿಸ್ಥಿತಿಯಲ್ಲಿ, ಸಾಮಾನ್ಯ ಬಳಕೆದಾರನಿಗೆ ಯಾವ ರಕ್ಷಣೆಯೂ ಇಲ್ಲ ಮತ್ತು ಅವನು ಯಾವುದಕ್ಕೂ ಹೇಸದ ಪಟ್ಟಭದ್ರ ಹಿತಾಸಕ್ತಿಗಳ ಕೃಪೆಯಲ್ಲಿ ಬದುಕಬೇಕಾಗುತ್ತದೆ. ದೇಶದಲ್ಲಿ ಬಳಕೆದಾರರ ಪ್ರತಿಭಟನಾ ಆಂದೋಲನ ಬಹಳ ದುರ್ಬಲವಾಗಿದ್ದು, ಅವರು ಸಮರ್ಥ ರೀತಿಯಲ್ಲಿ ಪ್ರಭಾವ ಬೀರಲು ಸಾಧ್ಯವಾಗಿಲ್ಲ. ಈ ಬಗ್ಗೆ ರಾಷ್ಟ್ರೀಯ ಮಟ್ಟದಲ್ಲಿ ಶಾಸನ ಜಾರಿಗೆ ಬಂದ ಮೇಲೆ, ಅಂತಹ ಪ್ರಕರಣಗಳ ಬಗ್ಗೆ ವಿಚಾರಣೆ ನಡೆಸಲು ಸರ್ಕಾರವು ಬೆಂಗಳೂರು ಮೈಸೂರು, ಬೆಳಗಾವಿ ಮತ್ತು ಗುಲ್ಬರ್ಗ ವಿಭಾಗೀಯ ಕೇಂದ್ರಗಳಲ್ಲಿ ವೇದಿಕೆಗಳನ್ನೂ ಹಾಗೂ ರಾಜ್ಯ ಮಟ್ಟದಲ್ಲಿ ಒಂದು ಆಯೋಗವನ್ನು ರಚಿಸಿದೆ. ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಅಂತಹ ವೇದಿಕೆಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಇಂಥ ವೇದಿಕೆಗಳ ರಚನೆಯಿಂದಾಗಿ ಸಾಮಾನ್ಯ ಬಳಕೆದಾರರು ಬಹಳ ಕಾಲದಿಂದಲೂ ತಾವು ವಂಚಿತರಾಗಿದ್ದಂಥ ನ್ಯಾಯ ಮತ್ತು ರಕ್ಷಣೆಯನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ ಎಂಬುದು ಸರ್ಕಾರದ ಆಶಯ. ಈ ಉದ್ದೇಶಕ್ಕಾಗಿ ೧೦೦ ಲಕ್ಷ ರೂ. ಗಳನ್ನು ಒದಗಿಸಲಾಗಿದೆ.

ನೀರು ಸರಬರಾಜು :

೪೯. ಸಣ್ಣ ಪಟ್ಟಣಗಳಿಗೆ ನೀರು ಸರಬರಾಜು ವ್ಯವಸ್ಥೆಗೆ ೧೯೯೦–೯೧ರಲ್ಲಿ ಮತ್ತಷ್ಟು ಹಣದ ನೆರವು ದೊರೆಯಲಿದೆ. ೧೯೯೦–೯೧ನೇ ವರ್ಷಾವಧಿಯಲ್ಲಿ ಕರ್ನಾಟಕ ಪಟ್ಟಣ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ೧೭೧೭ ಲಕ್ಷ ರೂ. ಗಳಷ್ಟು ಮೊತ್ತವನ್ನು ಹಂಚಿಕೆ ಮಾಡಲು ಉದ್ದೇಶಿಸಲಾಗಿದೆ. ಈ ಮಂಡಳಿಯು ೨೧ ಯೋಜನೆಗಳನ್ನು ಕೈಗೊಳ್ಳಲಿದ್ದು, ಅವುಗಳ ಪೈಕಿ ೧೭ ಯೋಜನೆಗಳು ಪಟ್ಟಣ ನೀರು ಸರಬರಾಜಿಗೆ ಸಂಬಂಧಪಟ್ಟಿವೆ.

೫೦. ರಾಜ್ಯ ಸರ್ಕಾರ, ೯೪.೪೭ ಕೋಟಿ ರೂ. ಗಳ ಅಂದಾಜು ವೆಚ್ಚದಲ್ಲಿ ಮೂರು ವರ್ಷಗಳ ಅವಧಿಯಲ್ಲಿ ಪಟ್ಟಣ ನೀರು ಸರಬರಾಜು ವೃದ್ಧಿ ಯೋಜನೆಯನ್ನು ಕಾರ್ಯಗತಗೊಳಿಸಲು ೧೭ ಪಟ್ಟಣಗಳನ್ನು/ನಗರಗಳನ್ನು ಆಯ್ಕೆ ಮಾಡಿದೆ. (ಅನುಬಂಧ-Iರಲ್ಲಿ ವಿವರಗಳನ್ನು ನೀಡಲಾಗಿದೆ) ಭಾರತದ ಜೀವ ವಿಮಾ ನಿಗಮವು ೫೦ ಕೋಟಿ ರೂ. ಗಳನ್ನು ಒದಗಿಸಲಾಗಿದೆ. ಈ ಯೋಜನೆಗಳಲ್ಲಿ ಮುಖ್ಯವಾದುವು, ಬೆಳಗಾವಿ, ಮಂಗಳೂರು ಮತ್ತು ಮೈಸೂರು ನಗರ ಕಾರ್ಪೊರೇಷನ್‌ಗಳು ಹಾಗೂ ಬಿಜಾಪುರ, ಚಿಕ್ಕಮಗಳೂರು, ನಿಪ್ಪಾಣಿ ಮತ್ತು ರಾಣಿಬೆನ್ನೂರು ಪಟ್ಟಣ ಮುನಿಸಿಪಾಲಿಟಿಗಳ ನೀರು ಸರಬರಾಜು ಯೋಜನೆಗಳು. ಈ ಯೋಜನೆಗಳ ಅನುಷ್ಠಾನವನ್ನು ೧೯೯೦–೯೧ ರಿಂದ ಪ್ರಾರಂಭಿಸಲಾಗುವುದು. ಮಲಪ್ರಭಾ ಜಲಾಶಯದಿಂದ ಹುಬ್ಬಳ್ಳಿ-ಧಾರವಾಡ ಗಳಿಗೆ ನೀರು ಸರಬರಾಜು ಮಾಡುವ ಯೋಜನೆಯ IIನೆಯ ಹಂತದ ೬ ೫೧ ಲಕ್ಷ ರೂ. ಗಳ ಅಂದಾಜು ವೆಚ್ಚದ ಯೋಜನೆಯು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಮೇಲೆ ಹೇಳಿದ ಹದಿನೇಳು ಯೋಜನೆಗಳ ಜೊತೆ ಇದು, ಹುಡ್ಕೋ ನೆರವಿನಿಂದ ಕಾರ್ಯಗತಗೊಳಿಸಲು ಯೋಜಿಸಿದ ಹನ್ನೊಂದು ಯೋಜನೆಗಳಲ್ಲಿ ಒಂದಾಗಿದ್ದು ಅವುಗಳನ್ನು ಅನುಬಂಧ–Iಎ ಯಲ್ಲಿ ವಿವರಿಸಲಾಗಿದೆ.

೫೧. ಕಾವೇರಿ ನೀರು ಸರಬರಾಜು ಯೋಜನೆಯ IIIನೇ ಹಂತವನ್ನು ೧೯೯೧ರ ಕೊನೆಯೊಳಗಾಗಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ೮೦೦ ಲಕ್ಷ ರೂ. ಮೊತ್ತದ ಆಯವ್ಯಯದ ವ್ಯವಸ್ಥೆ ಮಾಡಲಾಗಿದೆ.

ಕೊಳಚೆ ಪ್ರದೇಶಗಳ ಅಭಿವೃದ್ಧಿ

೫೨. ರಾಜ್ಯದಲ್ಲಿ ೧,೨೭೦ ಕೊಳಚೆ ಪ್ರದೇಶಗಳನ್ನು ಗುರುತಿಸಿದ್ದು, ಬೆಂಗಳೂರು ನಗರದಲ್ಲಿ ೪೦೧ ಕೊಳಚೆ ಪ್ರದೇಶಗಳಿವೆ. ಕೊಳಚೆ ನಿವಾಸಿಗಳ ಒಟ್ಟು ಜನಸಂಖ್ಯೆ ಸುಮಾರು ೧೦ ಲಕ್ಷ ಎಂದು ಅಂದಾಜು ಮಾಡಲಾಗಿದೆ. ಈ ಪ್ರದೇಶದ ನಿವಾಸಿಗಳ ಪರಿಸ್ಥಿತಿ ಶೋಚನೀಯ. ಗೃಹ ನಿರ್ಮಾಣಕ್ಕೆ ಸಾಂಸ್ಥಿಕ ನೆರವು ಪಡೆದು ಕೊಳಚೆ ಪ್ರದೇಶದ ನಿವಾಸಿಗಳ ವಸತಿ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸಲು ೧೯೯೦-೯೧ರ ಸಾಲಿಗೆ ೩೦೦ ಲಕ್ಷ ರೂಪಾಯಿ ಮೊತ್ತವನ್ನು ಒದಗಿಸಲಾಗಿದೆ.

ವಿದೇಶಿ ನೆರವಿನ ಯೋಜನೆಗಳು :

೫೩. ರಾಜ್ಯವು, ಈ ಹಿಂದೆ ಕೃಷ್ಣಾ ಮೇಲ್ದಂಡೆ ಯೋಜನೆ, ಸಾಮಾಜಿಕ ಅರಣ್ಯ ಯೋಜನೆ, ರೇಷ್ಮೆ ವ್ಯವಸಾಯ ಯೋಜನೆ ಮುಂತಾದ ಹಲವು ಯೋಜನೆಗಳಿಗೆ ವಿದೇಶಿ ನೆರವನ್ನು ಪಡೆದಿದೆ. ವಿದೇಶಿ ನೆರವಿನಿಂದ ದೇಶಕ್ಕೆ ವಿದೇಶಿ ವಿನಿಮಯ ದೊರಕುವುದಲ್ಲದೆ, ಕೇಂದ್ರ ಸರ್ಕಾರದಿಂದ ಬರುವಂಥ ಯೋಜನಾ ಧನ ಸಹಾಯದ ಜೊತೆಗೆ ಹೆಚ್ಚಿನ ಹಣ ದೊರಕುತ್ತದೆ.

೫೪. ಪ್ರಸಕ್ತ ವರ್ಷದಲ್ಲಿ, ವಿದೇಶಿ ಏಜೆನ್ಸಿಗಳ ಮೂಲಕ ನೆರವು ಪಡೆಯುವುದಕ್ಕಾಗಿ ರಾಜ್ಯವು ಈ ಮುಂದಿನ ಯೋಜನೆಗಳನ್ನು ಮಂಡಿಸಿದೆ :

೧. ಡೆನಿಡಾ ನೆರವಿನೊಂದಿಗೆ ಮೈಸೂರಿನಲ್ಲಿ ಸರ್ಕಾರಿ ಉಪಕರಣ ಶಾಲೆ ಮತ್ತು ತರಬೇತಿ ಕೇಂದ್ರದ ಉಪಕೇಂದ್ರದ ಸ್ಥಾಪನೆ ;

೨. ಡೆನಿಡಾ ನೆರವಿನೊಂದಿಗೆ ಡಬ್ಲ್ಯುವೈಟಿ ಇಪಿ (ಮಹಿಳೆ ಮತ್ತು ಯುವಜನರ ತರಬೇತಿ ಹಾಗೂ ವಿಸ್ತರಣಾ ಕಾರ್ಯಕ್ರಮದ) IIನೇ ಹಂತದ ಸ್ಥಾಪನೆ :

೩. ಓವರ್‌ಸೀಸ್ ಅಭಿವೃದ್ಧಿ ಏಜೆನ್ಸಿ (ಒಡಿಎ) ನೆರವು ಪಡೆದು ಪಶ್ಚಿಮ ಘಟ್ಟಗಳಲ್ಲಿ ಸಮಗ್ರ ಅರಣ್ಯ ಅಭಿವೃದ್ಧಿ :

೪. ವಿಶ್ವ ಬ್ಯಾಂಕ್ ನೆರವಿನ ಭಾರತ ಜನಸಂಖ್ಯಾ ಯೋಜನೆ-III ಪೂರಕ ಯೋಜನೆ :

೫. ಏಷ್ಯಾ ಅಭಿವೃದ್ಧಿ ಬ್ಯಾಂಕ್ (ಎಡಿಬಿ)ನ ನೆರವು ಪಡೆದು ಅಂಕೋಲ-ಹುಬ್ಬಳ್ಳಿ ರಸ್ತೆಯ ಪ್ರಗತಿ :

೬. ಓವರ್‌ಸೀಸ್ ಆರ್ಥಿಕ ಸಹಕಾರ ನಿಧಿ (ಓಇಸಿಎಫ್), ಜಪಾನ್—ಇದರ ನೆರವು ಪಡೆದು ಕರ್ನಾಟಕದಲ್ಲಿ ಪ್ರವಾಸ ಅಭಿವೃದ್ಧಿ :

೭. ವಿಶ್ವ ಬ್ಯಾಂಕ್ ಧನ ಸಹಾಯದೊಂದಿಗೆ ಕರ್ನಾಟಕದಲ್ಲಿ ತಾಂತ್ರಿಕ ಶಿಕ್ಷಣವನ್ನು ಬಲ ಪಡಿಸುವುದು :

೮. ಒಪೆಕ್ ನಿಧಿಯಿಂದ ರಾಯಚೂರು ಜಿಲ್ಲಾ ಆಸ್ಪತ್ರೆಯ ಅಭಿವೃದ್ಧಿ ;

೯. ಗ್ರಾಮಾಂತರ ಪ್ರದೇಶಗಳಲ್ಲಿ ನೀರಿನ ಸರಬರಾಜು ಮತ್ತು ನೈರ್ಮಲ್ಯ ವ್ಯವಸ್ಥೆ.

ಈ ಎಲ್ಲಾ ಯೋಜನೆಗಳಲ್ಲಿ ತೊಡಗಿಸಲು ಅಂದಾಜು ಮಾಡಲಾಗಿರುವ ಒಟ್ಟು ಮೊಬಲಗು ಸರಿ ಸುಮಾರು ೬೫೦ ಕೋಟಿ ರೂಪಾಯಿಗಳು,

ಗ್ರಾನೈಟ್ ಕಲ್ಲುಗಣಿ ಕೆಲಸ :

೫೫. ಸರ್ಕಾರವು ಗ್ರಾನೈಟ್ ಕಲ್ಲುಗಣಿ ಕುರಿತ ತನ್ನ ಪ್ರಸಕ್ತ ಕಾರ್ಯನೀತಿಯನ್ನು ಸರಳಗೊಳಿಸಲಿದೆ. ಈಗಿನ ಕಾರ್ಯನೀತಿಯ ಪುನರ್ವಿಮರ್ಶೆಯು ದೇಶಕ್ಕೆ ವಿದೇಶಿ ವಿನಿಮಯವನ್ನು ಗಳಿಸಿ ಕೊಡುವುದಲ್ಲದೆ, ರಾಜ್ಯಕ್ಕೆ ವಾರ್ಷಿಕ ೧೦ ಕೋಟಿ ರೂ. ಗಳಷ್ಟು ಹೆಚ್ಚಿನ ವರಮಾನ ತಂದುಕೊಡುವ ಸಂಭವವಿದೆ. ವಿವರಗಳನ್ನು ಕಾಲಕ್ರಮದಲ್ಲಿ ರೂಪಿಸಲಾಗುವುದು.

ಸ್ಟೈಪಂಡರಿ ಪದವೀದರರ ನೇಮಕ ;

೫೬. ಮೂಲತಃ ಸುಮಾರು ೧೪,೦೦೦ ವ್ಯಕ್ತಿಗಳನ್ನು ಸ್ಟೈಪೆಂಡರಿ ಉದ್ಯೋಗ ಯೋಜನೆಯ ಅಡಿಯಲ್ಲಿ ನೇಮಕ ಮಾಡಲಾಗಿತ್ತು. ಇವರಲ್ಲಿ ಸುಮಾರು ೮,೩೯೦ ವ್ಯಕ್ತಿಗಳಿಗೆ ೧೯೮೭ರ ಕರ್ನಾಟಕ

ಸರ್ಕಾರಿ ಸೇವಾ (ವಿಶೇಷ) ನಿಯಮಗಳ ಮೇರೆಗಿನ ನೇಮಕಗಳೂ ಸೇರಿದಂತೆ ನಿಯತ ನೇಮಕಗಳನ್ನು ನೀಡಲಾಗಿದೆ. ಈಗ ಸದರಿ ಯೋಜನೆಯ ಅಡಿಯಲ್ಲಿ ನೇಮಕವಾಗಿರುವ ಆದರೆ ಸದರಿ ನಿಯಮಗಳ ಪ್ರಕಾರ ಇನ್ನೂ ನಿಯತ ನೇಮಕಗಳನ್ನು ಕೊಟ್ಟಿರದ ಸುಮಾರು ೫,೬೧೦ ವ್ಯಕ್ತಿಗಳಿದ್ದಾರೆ. ಈ ೫,೬೧೦ ವ್ಯಕ್ತಿಗಳನ್ನು ಸದರಿ ನಿಯಮಗಳಲ್ಲಿ ಹೇಳಿರುವಂತೆ, ಯಾವುದೇ ಸ್ಪರ್ಧಾ ಪರೀಕ್ಷೆಗೆ ಅಥವಾ ಸಂದರ್ಶನಕ್ಕೆ ಗುರಿಪಡಿಸದೆ ಈಗಿರುವ ಖಾಲಿ ಸ್ಥಾನಗಳಲ್ಲಿ ತ್ವರಿತವಾಗಿ ನಿಯತ ನೇಮಕಾತಿ ಮಾಡಲಾಗುವುದು.

ಊಟೋಪಚಾರ ವೆಚ್ಚದ ಏರಿಕೆ :

೫೭. ೧೯೮೯-೯೦ರ ಬಜೆಟ್ ಭಾಷಣದಲ್ಲಿ ಆಶ್ರಮ ಮತ್ತು ನಿವಾಸಿ ಶಾಲೆಗಳಲ್ಲಿ, ಮೆಟ್ರಿಕ್ ಪೂರ್ವದ ವಿದ್ಯಾರ್ಥಿ ನಿಲಯಗಳಲ್ಲಿ ಮತ್ತು ಮೆಟ್ರಿಕ್ ತರುವಾಯದ ವಿದ್ಯಾರ್ಥಿನಿಲಯಗಳಲ್ಲಿರುವ ವಿದ್ಯಾರ್ಥಿಗಳಿಗೆ ಊಟದ ವೆಚ್ಚದ ದರಗಳನ್ನು ಕ್ರಮವಾಗಿ ೭೫ ರೂಪಾಯಿಗಳಿಂದ ೧೦೦ ರೂಪಾಯಿಗಳಿಗೆ, ೧೦೦ ರೂಪಾಯಿಗಳಿಂದ ೧೫೦ ರೂಪಾಯಿಗಳಿಗೆ ಮತ್ತು ೧೫೦ ರೂಪಾಯಿಗಳಿಂದ ೨೦೦ ರೂಪಾಯಿಗಳಿಗೆ ಹೆಚ್ಚಿಸಲಾಗುವುದೆಂದು ಪ್ರಕಟಿಸಲಾಗಿತ್ತು. ಈ ಕ್ರಮವನ್ನು ಕಾರ್ಯರೂಪಕ್ಕೆ ತರಲಾಗಿಲ್ಲ. ಸರ್ಕಾರವು ಪ್ರಸಕ್ತ ವರ್ಷ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಉದ್ದೇಶಿಸಿದೆ. ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ ಹಾಸಿಗೆಗಾಗಿ ಈಗ ಕೊಡುತ್ತಿರುವ ಸಹಾಯ ಧನವನ್ನು ತಲಾ ೧೦೦ ರಿಂದ ೩೦೦ಕ್ಕೆ ಹೆಚ್ಚಿಸಲು ಉದ್ದೇಶಿಸಲಾಗಿದೆ.

ವಿದ್ಯಾ ಮಂದಿರ ಯೋಜನೆ :

೫೮. ಪ್ರಾಥಮಿಕ ಶಿಕ್ಷಣಕ್ಕೆ ವಿಶೇಷ ಮಹತ್ವ ನೀಡುವುದು ಈ ಸರ್ಕಾರದ ನೀತಿ. ಅನೇಕ ಪ್ರಾಥಮಿಕ ಶಾಲೆಗಳಿಗೆ ಸ್ವಂತ ಕಟ್ಟಡಗಳಿಲ್ಲ. ಶಾಲಾ ಕಟ್ಟಡಗಳು ಇದ್ದರೂ, ಆ ಕಟ್ಟಡಗಳಿಗೆ ದುರಸ್ತಿಯ ತೀವ್ರ ಅವಶ್ಯಕತೆಯಿದೆ. ಒಟ್ಟಿನಲ್ಲಿ ಪರಿಸ್ಥಿತಿ ತೃಪ್ತಿಕರವಾಗಿಲ್ಲ. ಈ ದುಸ್ಥಿತಿಯನ್ನು ನೀಗಿಸಿ, ಸ್ವಲ್ಪಮಟ್ಟಿನ ಸುಧಾರಣೆ ತರುವ ಉದ್ದೇಶದಿಂದ ೧೯೯೦-೯೧ರ ಸಾಲಿನಲ್ಲಿ ಸರ್ಕಾರ ೫೦೦೦ ಶಾಲಾ ಕೊಠಡಿಗಳನ್ನು ನಿರ್ಮಿಸಲು ಉದ್ದೇಶಿಸಿದೆ. ಸರ್ಕಾರವು ಶಾಲಾ ಕೊಠಡಿಯೊಂದಕ್ಕೆ ೨೦,೦೦೦ ರೂಪಾಯಿ ಧನ ಸಹಾಯ ಒದಗಿಸಲಿದೆ. ಉಳಿದ ಮೊತ್ತವನ್ನು ಸ್ಥಳೀಯವಾಗಿ ಎತ್ತಲಾಗುವುದು. ೧೦ ಕೋಟಿ ರೂಪಾಯಿಗಳನ್ನು ಈ ಯೋಜನೆಗೆ ವಿಶೇಷವಾಗಿ ಒದಗಿಸಲಾಗಿದೆ.

ಕನ್ನಡ ವಿಶ್ವವಿದ್ಯಾಲಯ :

೫೯. ಕನ್ನಡವು ರಾಜ್ಯದ ಆಡಳಿತ ಭಾಷೆ. ಆಡಳಿತದ ಎಲ್ಲಾ ಮಟ್ಟಗಳಲ್ಲೂ ಕನ್ನಡಕ್ಕೆ ಅಗ್ರಸ್ಥಾನ ದೊರೆಯಬೇಕೆಂಬುದು ಸರ್ಕಾರದ ನೀತಿಯಾಗಿದೆ. ಕನ್ನಡದ ಏಳಿಗೆಗೆ ಪೂರ್ಣವಾಗಿ ಮುಡಿಪಾದ ಒಂದು ಪ್ರತ್ಯೇಕ ವಿಶ್ವವಿದ್ಯಾಲಯವು ಸ್ಥಾಪನೆಯಾಗಬೇಕೆಂಬುದು ಕನ್ನಡಿಗರ ಬಹುದಿನದ ಹಂಬಲ. ಈ ಉದ್ದೇಶವನ್ನು ದೃಷ್ಟಿಯಲ್ಲಿರಿಸಿಕೊಂಡು ವಿದ್ವತ್ತಿನ ಕೇಂದ್ರವಾಗಲಿರುವ ಹಂಪೆಯಲ್ಲಿ ಕನ್ನಡ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಸರ್ಕಾರವು ನಿರ್ಧರಿಸಿದೆ. ಈ ಉದ್ದೇಶಕ್ಕಾಗಿ ಮುಂಬರುವ ವರ್ಷ ೧ ಕೋಟಿ ರೂಪಾಯಿಗಳನ್ನು ತೆಗೆದಿರಿಸಲಾಗಿದೆ.

ಕನ್ನಡಕ್ಕೆ ಉತ್ತೇಜನ :

೬೦. ಕನ್ನಡ ಮಾಧ್ಯಮದಲ್ಲಿ ಓದುತ್ತಿರುವ ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳ ಪ್ರಯೋಜನಕ್ಕಾಗಿ ಭೌತಶಾಸ್ತ್ರ, ಸಮಾಜಶಾಸ್ತ್ರ, ಮಾನವಿಕಗಳು ಹಾಗೂ ಲಲಿತಕಲೆ ಇವುಗಳಿಗೆ ಸಂಬಂಧಿಸಿದ ಮೂಲ ಶೈಕ್ಷಣಿಕ ಪುಸ್ತಕಗಳ ಹಾಗೂ ಅನುವಾದಿತ ಆವೃತ್ತಿಗಳ ಪ್ರಕಟಣೆಗೆ ಉತ್ತೇಜನ ನೀಡಲು ಈ ವರ್ಷ ಸರ್ಕಾರವು ಹೊಸ ಯೋಜನೆಯೊಂದನ್ನು ಕಾರ್ಯರೂಪಕ್ಕೆ ತರುತ್ತದೆ. ಈ ಉದ್ದೇಶಕ್ಕಾಗಿ ೨೦ ಲಕ್ಷ ರೂಪಾಯಿಗಳನ್ನು ಮೀಸಲಿಡಲಾಗಿದೆ.

೬೧. ಸರ್ಕಾರವು ಕನ್ನಡದ ಪುಸ್ತಕ ಪ್ರಕಾಶನ ಉದ್ಯಮಕ್ಕೆ ನೆರವು ನೀಡುವುದಕ್ಕಾಗಿ ಕನ್ನಡದಲ್ಲಿ ಪ್ರಕಟಿಸಲಾದ ಪುಸ್ತಕಗಳ ೩೦೦ ಪ್ರತಿಗಳನ್ನು ಖರೀದಿಸುವ ಒಂದು ಹೊಸ ಯೋಜನೆಯನ್ನು ಜಾರಿಗೆ ತರಲಿದೆ. ಸರ್ಕಾರವು ಮಾಡುವ ಅಂತಹ ಸಗಟು ಖರೀದಿಗಳಿಗೆ ಪುಸ್ತಕಗಳನ್ನು ಆಯ್ಕೆ ಮಾಡುವುದಕ್ಕೆ ಮತ್ತು ಬೆಲೆಯನ್ನು ನಿರ್ಧರಿಸುವುದಕ್ಕೆ ಪ್ರಖ್ಯಾತ ಹಾಗೂ ತಜ್ಞ ವ್ಯಕ್ತಿಗಳನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಲಾಗುವುದು. ಈ ಯೋಜನೆಗಾಗಿ ಪ್ರಸಕ್ತ ವರ್ಷದಲ್ಲಿ ೨೦ ಲಕ್ಷ ರೂಪಾಯಿಗಳ ಮೊತ್ತವನ್ನು ಮೀಸಲಿಡಲಾಗಿದೆ.

೬೨. ಕನ್ನಡದ ಇಲೆಕ್ಟ್ರಾನಿಕ್ ಬೆರಳಚ್ಚು ಯಂತ್ರಗಳು, ವರ್ಡ್ ಪ್ರೊಸೆಸರ್‌ಗಳು ಮತ್ತು ದೂರ ಮುದ್ರಣಗಳು ಮುಂತಾದ ಕಛೇರಿ ಸಲಕರಣೆಗಳ ವಿನ್ಯಾಸ ಮತ್ತು ತಯಾರಿಕೆಗೆ ಉತ್ತೇಜನ ನೀಡುವುದಕ್ಕಾಗಿ ಮತ್ತು ಕನ್ನಡ ಭಾಷೆಯಲ್ಲಿ ಆಕರ್ಷಕ ಶೈಲಿಯ ಮುದ್ರಣಾಕ್ಷರಗಳನ್ನು ರೂಪಿಸುವುದಕ್ಕಾಗಿ ೧೦ ಲಕ್ಷ ರೂಪಾಯಿಗಳನ್ನು ಕಾದಿರಿಸಲಾಗಿದೆ.

ಆಡಳಿತವನ್ನು ಚುರುಕುಗೊಳಿಸುವುದು :

೬೩. ಸರ್ಕಾರದ ಕಾರ್ಯನೀತಿಗಳು ಮತ್ತು ಕಾರ್ಯಕ್ರಮಗಳು ಏನೇ ಇದ್ದರೂ, ಅವುಗಳನ್ನು ಕಾರ್ಯಗತಗೊಳಿಸುವವರು ಸರ್ಕಾರದ ಆಡಳಿತ ಯಂತ್ರದಲ್ಲಿರುವ ಅಸಂಖ್ಯಾತ ಸಿಬ್ಬಂದಿವರ್ಗ. ಈ ಕಾರ್ಯನೀತಿ ಮತ್ತು ಕಾರ್ಯಕ್ರಮಗಳು ಎಷ್ಟು ಪರಿಣಾಮಕಾರಿಯಾಗಿ ಜಾರಿಯಾಗುತ್ತವೆ ಎಂಬುದು ಸಿಬ್ಬಂದಿ ವರ್ಗದ ಶ್ರದ್ಧೆ ಹಾಗೂ ಕರ್ತವ್ಯ ನಿಷ್ಠೆಯನ್ನು ಅವಲಂಬಿಸಿವೆ. ತಮ್ಮ ಕರ್ತವ್ಯಗಳನ್ನು ಸ್ವಪ್ರೇರಣೆಯಿಂದಲೇ ಆದರ್ಶ ರೀತಿಯಲ್ಲಿ ನಿರ್ವಹಿಸುವ ವ್ಯಕ್ತಿಗಳು ಸಾಕಷ್ಟಿದ್ದರೂ ಆಡಳಿತದ ಗುಣಮಟ್ಟ ಕುಸಿದಿದೆ ಎಂಬ ಭಾವನೆ ಇದೆ. ಈ ಹಿನ್ನೆಲೆಯಲ್ಲಿ ಸಿಬ್ಬಂದಿ ವರ್ಗ ತನ್ನ ಜವಾಬ್ದಾರಿಯನ್ನು ಅರಿತು ದಕ್ಷತೆಯಿಂದ ಕೆಲಸ ಮಾಡುವುದು ಅತ್ಯವಶ್ಯಕ.

೬೪ ಸಾಮಾನ್ಯಾಡಳಿತದ ಗುಣಮಟ್ಟವು ಹೀಗೆ ಕಡಿಮೆಯಾಗುತ್ತಿರುವುದು ಸರ್ಕಾರಕ್ಕೆ ತೀವ್ರ ಕಳವಳವನ್ನುಂಟು ಮಾಡಿದೆ. ಅಗತ್ಯವಿರುವ ಕಡೆಗಳಲ್ಲಿ ಕಟ್ಟುನಿಟ್ಟಾದ ಕಾರ್ಯಸೂಚಿಗಳನ್ನು ನಿಗದಿ ಪಡಿಸಿ ಎಲ್ಲಾ ಮಟ್ಟಗಳಲ್ಲಿ ಬಿಗಿಯಾದ ಮೇಲ್ವಿಚಾರಣಾ ವ್ಯವಸ್ಥೆಯನ್ನು ಏರ್ಪಡಿಸಿ ಆಡಳಿತವನ್ನು ಎಲ್ಲಾ ಮಟ್ಟಗಳಲ್ಲಿ ಚುರುಕುಗೊಳಿಸಲು ನಾವು ದೃಢ ನಿರ್ಧಾರ ತಳೆದಿದ್ದೇವೆ. ಪ್ರಾಮಾಣಿಕರಿಗೆ ಮತ್ತು ಅರ್ಹರಿಗೆ ಪ್ರೋತ್ಸಾಹ ಮತ್ತು ದಕ್ಷತೆಯಿಂದ ಕೆಲಸ ಮಾಡದವರಿಗೆ ದಂಡನೆ, ಇದು ಸರ್ಕಾರದ ನೀತಿ.

ತೆರಿಗೆ :

೬೫. ನಾನು ಈಗಾಗಲೇ ಹೇಳಿದಂತೆ ಸಂಪನ್ಮೂಲಗಳ ಕೊರತೆಯು ಕಳೆದ ಕೆಲವು ವರ್ಷಗಳಿಂದ ರಾಜ್ಯದ ಅಭಿವೃದ್ಧಿಗೆ ಧಕ್ಕೆಯನ್ನುಂಟುಮಾಡಿದೆ. ಹೆಚ್ಚು ಕಡಿಮೆ ಸ್ಥಗಿತವಾಗಿರುವ ಅರ್ಥ ವ್ಯವಸ್ಥೆಯನ್ನು ಮೇಲೆತ್ತಿ ಅದಕ್ಕೆ ಅವಶ್ಯವಾದ ಉತ್ತೇಜನವನ್ನು ಕೊಡಲೆಂದು ೧೯೯೦-೯೧ನೇ ಸಾಲಿನ ಯೋಜನಾ ಗಾತ್ರವನ್ನು ಉದ್ದೇಶಪೂರ್ವಕವಾಗಿ ೧೧೬೫ ಕೋಟಿ ರೂಪಾಯಿಗಳೆಂದು ಗೊತ್ತುಪಡಿಸಲಾಗಿದೆ. ಬಜೆಟ್ ಕೊರತೆಯನ್ನು ವರ್ಷಾವಧಿಯಲ್ಲಿ ಹೇಗಾದರೂ ತುಂಬಿಕೊಳ್ಳಬಹುದೆಂಬ ಆಶಾ ಭಾವನೆಯಿಂದ, ಭಾರಿ ಪ್ರಮಾಣದ ಬಜೆಟ್ ಕೊರತೆಯನ್ನು ಇಟ್ಟುಕೊಳ್ಳುವುದರಲ್ಲಿ ನನಗೆ ವಿಶ್ವಾಸವಿಲ್ಲ ಕಷ್ಟಕರ ಸಂಪನ್ಮೂಲ ಪರಿಸ್ಥಿತಿ ಮತ್ತು ೧೯೯೦-೯೧ರ ಸಾಲಿನ ಯೋಜನೆಯ ದೊಡ್ಡ ಗಾತ್ರಗಳಿಂದಾಗಿ ರಾಜಸ್ವವನ್ನು ಹೆಚ್ಚಿಸಬೇಕಾಗಿದೆ. ಇದು ಸ್ವಲ್ಪ ಕಷ್ಟಕರವಾದ ಕೆಲಸ. ಆದರೂ, ತೆರಿಗೆಗಳ ಭಾರ ಹೆಚ್ಚು ಕಷ್ಟವಿಲ್ಲದೆ ಹೊರಲು ಶಕ್ತಿಯಿರುವವರ ಮೇಲೆ ಬೀಳುವಂತೆ ನಾನು ನೋಡಿಕೊಂಡಿದ್ದೇನೆ. ತೆರಿಗೆಗಳ್ಳತನ ತಡೆಯಲು ಮತ್ತು ವ್ಯವಸ್ಥೆಯಲ್ಲಿನ ಲೋಪದೋಷಗಳನ್ನು ತಿದ್ದಲು ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಲಾಗುವುದು. ಈ ಕ್ರಮಗಳಿಂದ ರಾಜ್ಯದ ಹಣಕಾಸಿನ ಪರಿಸ್ಥಿತಿಯು ಉತ್ತಮಗೊಳ್ಳುವುದೆಂದು ನಾನು ನಂಬುತ್ತೇನೆ.

ಮಾರಾಟ ತೆರಿಗೆ :

೬೬. (ಎ) ನಾನು ಈ ಮುಂದಿನ ರಿಯಾಯಿತಿಗಳನ್ನು ಮತ್ತು ಪರಿಹಾರಗಳನ್ನು ಪ್ರಕಟಿಸುತ್ತೇನೆ.—

(i) ಕಡ್ಡಾಯ ನೋಂದಣಿ ಮಾಡಿಸಲು ಇರುವ ವಾರ್ಷಿಕ ವಹಿವಾಟು ಮಿತಿಯನ್ನು, ಈಗಿರುವ ೭೫,೦೦೦ ರೂಪಾಯಿಗಳಿಂದ ೧,೦೦,೦೦೦ ರೂಪಾಯಿಗಳಿಗೆ ಹೆಚ್ಚಿಸಲಾಗುವುದು.

(ii) ಒಟ್ಟು ವಾರ್ಷಿಕ ವಹಿವಾಟು ೧೦ ಲಕ್ಷ ರೂಪಾಯಿಗಳಿಗಿಂತ ಕಡಿಮೆ ಇರುವಂಥ ವ್ಯಾಪಾರಿಗಳಿಗೆ ವಹಿವಾಟು ತೆರಿಗೆಯಿಂದ ವಿನಾಯಿತಿ ನೀಡಲಾಗುವುದು. ವಹಿವಾಟು ತೆರಿಗೆ ದರಗಳಲ್ಲಿ ಈ ಕಾರಣದಿಂದ ಉಂಟಾದ ಹೊಂದಾಣಿಕೆಗಳನ್ನು ಅನುಬಂಧ–೨ರಲ್ಲಿ ಕೊಡಲಾಗಿದೆ.

(iii) ಬಿಸ್ಕತ್ತು, ಕೇಕ್ ಮತ್ತು ಇತರ ಬೇಕರಿ ಉತ್ಪನ್ನಗಳ ತಯಾರಕರಿಗೆ ಅನ್ವಯಿಸುವ ಶೇ. ೪ರ ರಿಯಾಯಿತಿ ದರದ ಅರ್ಹತೆಗಾಗಿ ಅವರ ವಾರ್ಷಿಕ ವಹಿವಾಟಿನ ಗರಿಷ್ಠ ಪರಿಮಿತಿಯನ್ನು ಈಗಿರುವ ರೂ. ೨.೫ ಲಕ್ಷಗಳಿಂದ ರೂ. ೪ ಲಕ್ಷಗಳಿಗೆ ಹೆಚ್ಚಿಸಲಾಗುವುದು.

(iv) ಎಲ್ಲಾ ಜೀವರಕ್ಷಕ ಔಷಧಿಗಳಿಗೆ ವಹಿವಾಟು ತೆರಿಗೆ ಮತ್ತು ಕೇಂದ್ರ ಮಾರಾಟ ತೆರಿಗೆ ವಿನಾಯಿತಿ ನೀಡಲಾಗುವುದು.

(v) ಪೀಠೋಪಕರಣ (furniture) ಬಾಡಿಗೆಯ ಮೇಲಿನ ಶೇ. ೫ರ ತೆರಿಗೆಯನ್ನು ತೆಗೆದು ಹಾಕಲಾಗುವುದು.

(vi) ಉದ್ದ ಎಳೆಯ ಹತ್ತಿಯನ್ನು ರಫ್ತು ಮಾಡಿದಾಗ ಖರೀದಿ ತೆರಿಗೆಗೆ ವಿನಾಯಿತಿ ಕೊಡಲಾಗುವುದು.

(vii) ಟ್ರ್ಯಾಕ್ಟರ್‌ಗಳ ಮೇಲಿನ ಮಾರಾಟ ತೆರಿಗೆಯನ್ನು ಶೇ. ೪ರಿಂದ ಶೇ. ೩ಕ್ಕೆ ಇಳಿಸಲಾಗುವುದು ಹಾಗೂ ಟ್ರ್ಯಾಕ್ಟರ್‌ಗಳನ್ನು ವಹಿವಾಟು ತೆರಿಗೆಯಿಂದ ವಿನಾಯಿತಿಗೊಳಿಸಲಾಗುವುದು.

(viii) ಜಿಪ್ಸಂ ಮೇಲಿನ ತೆರಿಗೆಯನ್ನು ಶೇ. ೭ರಿಂದ ಶೇ. ೩ಕ್ಕೆ ಇಳಿಸಲಾಗುವುದು.

(ಬಿ) ಸಣ್ಣ ವ್ಯಾಪಾರಿಗಳಿಗೆ ಅನುಕೂಲವಾಗುವ ದೃಷ್ಟಿಯಿಂದ ಕರ ನಿರ್ಧಾರಣೆಯ ಕಠಿಣ, ಕಾರ್ಯ ವಿಧಾನಗಳನ್ನು ಸರಳಗೊಳಿಸಿ ಹೊಸ ಕಾರ್ಯ ವಿಧಾನಗಳನ್ನು ಜಾರಿಗೆ ತರಲು ನಾನು ಉದ್ದೇಶಿಸಿದ್ದೇನೆ,
ಅವುಗಳೆಂದರೆ.—

(i) ಒಂದು ಲಕ್ಷ ರೂಪಾಯಿಗಳಿಗಿಂತ ಕಡಿಮೆ ವಾರ್ಷಿಕ ವಹಿವಾಟು ಹೊಂದಿರುವ ವ್ಯಾಪಾರಿಗಳ ಕರ ನಿರ್ಧಾರಣೆಯನ್ನು ಅವರ ಹಾಜರಾತಿಯನ್ನು ಕೋರದೆ ಮತ್ತು ಅವರ ಲೆಕ್ಕಪತ್ರಗಳನ್ನು ಪರಿಶೀಲಿಸದೆ ಮುಗಿಸುವುದು.

(ii) ವಾರ್ಷಿಕ ವಹಿವಾಟು ೨.೫ ಲಕ್ಷ ರೂ. ಗಿಂತಲೂ ಕಡಿಮೆಯಿದ್ದರೆ ವಿವಾರಣಾ ಪಟ್ಟಿಕೆಗೆ ಲಗತ್ತಿಸಬೇಕಾದ ಅನುಬಂಧಗಳನ್ನು ದಾಖಲು ಮಾಡುವುದಕ್ಕೆ ವಿನಾಯಿತಿ ಕೊಡುವುದು.

(iii) ಈಗಿರುವಂತೆ ತಿಂಗಳಿಗೆ ಒಂದು ಬಾರಿ ಸಂದಾಯ ಮಾಡುವ ಬದಲು ಮೂರು ತಿಂಗಳಿಗೆ ಒಂದು ಬಾರಿ ಮುಂಗಡ ತೆರಿಗೆಯನ್ನು ಸಂದಾಯ ಮಾಡಲು ಅನುಮತಿ ನೀಡುವುದು.

(ಸಿ) ಕೆಲವೊಂದು ವರ್ಗದ ವ್ಯಾಪಾರಿಗಳಿಗೆ ತೆರಿಗೆ ಸಂದಾಯ ಮಾಡುವುದಕ್ಕಾಗಿ ಪಾಸ್ ಪುಸ್ತಕಗಳನ್ನು ನೀಡಲು ಮತ್ತು ನಗರದೊಳಗೆ ಅಥವಾ ಪಟ್ಟಣದೊಳಗೆ ಸರಕುಗಳ ಚಲನವಲನ ಕುರಿತಂತೆ ಇರುವ ಕಾರ್ಯ ವಿಧಾನಗಳನ್ನು ಸರಳಗೊಳಿಸಲು ನಾನು ಉದ್ದೇಶಿಸಿದ್ದೇನೆ.

ಈ ಸಂಬಂಧವಾಗಿ ವಿವರವಾದ ಆಡಳಿತಾತ್ಮಕ ನಿರ್ದೇಶನಗಳನ್ನು ನೀಡಲಾಗುವುದು.

(ಡಿ) ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದಲ್ಲಿ ಕೆಲವು ಲೋಪದೋಷಗಳನ್ನು ಸರಿಪಡಿಸಲು ಮತ್ತು ಅದರ ಉಪಬಂಧಗಳನ್ನು ಹೆಚ್ಚು ಸಮಂಜಸ ಹಾಗೂ ಸರಳವಾಗಿಸಲು ತಿದ್ದುಪಡಿಗಳನ್ನು ತರಲು ಪ್ರಸ್ತಾವಿಸಿದ್ದೇನೆ. ಪ್ರಸ್ತಾವಿಸಲಾದ ಪ್ರಮುಖ ಬದಲಾವಣೆಗಳನ್ನು ಈ ಕೆಳಗೆ ಕೊಡಲಾಗಿದೆ.—

(i) ಈಗ ಸರಕುಗಳ ಉತ್ಪಾದಕರು, ಅವರು ಉತ್ಪಾದಿಸಿದ ಸರಕುಗಳನ್ನು ಪ್ಯಾಕು (pack) ಮಾಡುವುದಕ್ಕೆ ಬಳಸುವ ಕಂಟೇನರುಗಳ (containers) ಖರೀದಿಯ ಮೇಲೆ ಶೇ. ೪ರ ರಿಯಾಯಿತಿ ದರ ಪಡೆಯಲು ಅರ್ಹರಾಗಿರುತ್ತಾರೆ. ಇದೇ ರಿಯಾಯಿತಿಯನ್ನು ಮರುಮಾರಾಟಗಾರರಿಗೂ ಅವರು ಮಾರಾಟ ಮಾಡುವ ಸರಕುಗಳನ್ನು ಪ್ಯಾಕು ಮಾಡುವುದಕ್ಕೆ ಕಂಟೇನರುಗಳನ್ನು ಖರೀದಿ ಮಾಡಿದಾಗ ನೀಡಲಾಗುವುದು:

(ii) ತೆರಿಗೆಗಳ್ಳತನವನ್ನು ತಡೆಯಲು, ಕೆಲವು ಸರಕುಗಳ ಸಾಗಾಣಿಕೆಗಾಗಿ ವಿಶೇಷ ಡೆಲಿವರಿ ನೋಟ್‌ಗಳನ್ನು ನಿಗದಿಪಡಿಸಲಾಗುವುದು:

(iii) ಈಗ ಪಾದರಕ್ಷೆಯ ಮೇಲಿನ ತೆರಿಗೆಯನ್ನು ಅವರ ಬೆಲೆಯನ್ನು ಆಧರಿಸಿ ವಿಧಿಸಲಾಗುತ್ತಿದೆ. ಇನ್ನು ಮುಂದೆ ಎಲ್ಲಾ ಪಾದರಕ್ಷೆಗಳ ಮೇಲೂ ತೆರಿಗೆ ವಿಧಿಸಲಾಗುವುದು. ಆದರೆ ಅವುಗಳ ಮೇಲಿನ ತೆರಿಗೆಯ ದರವನ್ನು ಶೇಕಡ ೧೦ ರಿಂದ ಶೇಕಡ ೮ಕ್ಕೆ ಇಳಿಸಲಾಗುವುದು.

(iv) ಸಾರಾಯಿಯ ಮೇಲೆ ಕೊನೆಯ ಮಾರಾಟ ಹಂತದಲ್ಲಿ ವಿಧಿಸುವ ಶೇಕಡ ೩ರ ತೆರಿಗೆಯನ್ನು ತೆಗೆದುಹಾಕಲಾಗುವುದು. ಪ್ರಥಮ ಮಾರಾಟ ಹಂತದ ತೆರಿಗೆಯನ್ನು ಶೇಕಡ ೨೦ಕ್ಕೆ ಗೊತ್ತುಪಡಿಸಲಾಗುವುದು.

(v) ಕಬ್ಬಿನ ಮೇಲಿನ ತೆರಿಗೆಯನ್ನು ಟನ್ನೇಜ್ ಆಧಾರಕ್ಕೆ ಬದಲಾಗಿ ಬೆಲೆಯ ಆಧಾರಕ್ಕೆ ಬದಲಾಯಿಸಲು ಮತ್ತು ಅದನ್ನು ಶೇಕಡ ೧೦ಕ್ಕೆ ನಿಗದಿಪಡಿಸಲು ಪ್ರಸ್ತಾವಿಸಲಾಗಿದೆ;

(ಇ) ಕೆಲವು ವಸ್ತುಗಳ ಮೇಲಿನ ತೆರಿಗೆ ದರಗಳನ್ನು ಅನುಬಂಧ-೩ರಲ್ಲಿ ನಿರ್ದಿಷ್ಟಪಡಿಸಿರುವಂತೆ ಹೆಚ್ಚಿಸಲು ಪ್ರಸ್ತಾವಿಸಿದ್ದೇನೆ ;

(ಎಫ್) ನಾನು "ಇಲೆಕ್ಟ್ರೋಪ್ಲೇಟಿಂಗ್ ಮತ್ತು ಅನಾಡೈಸಿಂಗ್" ಅನ್ನು VIನೇ ಅನುಸೂಚಿಯಲ್ಲಿ ಕರಾರು ಕೆಲಸಗಳ ಒಂದು ಹೊಸ ಬಾಬು ಆಗಿ ಸೇರಿಸಲು ಮತ್ತು ಅದಕ್ಕೆ ಶೇಕಡ ೫ರಂತೆ ತೆರಿಗೆ ವಿಧಿಸಲು ಪ್ರಸ್ತಾವಿಸುತ್ತೇನೆ.

೬೭. ಈ ಎಲ್ಲಾ ಕ್ರಮಗಳಿಂದ ನಿವ್ವಳಗಳಿಕೆ ವಾರ್ಷಿಕ ೩೦.೮೦ ಕೋಟಿ ರೂಪಾಯಿಗಳಷ್ಟಾಗುವುದೆಂದು ನಿರೀಕ್ಷಿಸಲಾಗಿದೆ.

ವೃತ್ತಿ ತೆರಿಗೆ

೬೮. (ಎ) ಅನುಬಂಧ-೪ರಲ್ಲಿ ವಿವರಿಸಿದಂತೆ ನಾನು ಕೆಲವು ವರ್ಗಗಳ ವ್ಯಕ್ತಿಗಳಿಗೆ ವೃತ್ತಿ ತೆರಿಗೆ ವಿನಾಯಿತಿ ನೀಡಲು ಪ್ರಸ್ತಾವಿಸುತ್ತೇನೆ.

(ಬಿ) ಫರ್ಮುಗಳ (firms) ಪಾಲುದಾರರು ಸಂದಾಯ ಮಾಡಬೇಕಾದ ತೆರಿಗೆಯನ್ನು ಈಗಿರುವ ವಾರ್ಷಿಕ ೫೦೦ ರೂಪಾಯಿಗಳಿಂದ ೨೫೦ ರೂಪಾಯಿಗಳಿಗೆ ಇಳಿಸಲು ಪ್ರಸ್ತಾವಿಸುತ್ತೇನೆ. ಈ ಉದ್ದೇಶಕ್ಕಾಗಿ ೧೯೩೨ರ ಭಾರತೀಯ ಪಾಲುದಾರಿಕೆ ಅಧಿನಿಯಮದ ಅಡಿಯಲ್ಲಿ ಫರ್ಮುಗಳ ನೊಂದಣಿ ಕುರಿತ ಉಲ್ಲೇಖವನ್ನು ತೆಗೆದುಹಾಕಲು ಕೂಡ ಉದ್ದೇಶಿಸಲಾಗಿದೆ,

(ಸಿ) ಈಗ ವರ್ಷಕ್ಕೆ ೧೦ ಲಕ್ಷ ರೂಪಾಯಿ ಹಾಗೂ ಅದಕ್ಕೂ ಮೇಲ್ಪಟ್ಟು ಹಣವನ್ನು ಸಾಲ ನೀಡಲು ಲೈಸೆನ್ಸು ಪಡೆದ ಲೇವಾದೇವಿಗಾರರು ವರ್ಷಕ್ಕೆ ೨,೫೦೦ ರೂಪಾಯಿಗಳ ತೆರಿಗೆ ನೀಡಬೇಕಾಗಿದೆ ನಾನು. ಈ ಸಾಲ ನೀಡುವ ಮಿತಿಯನ್ನು ವರ್ಷಕ್ಕೆ ೧೦ ಲಕ್ಷ ರೂಪಾಯಿಗಳಿಂದ ೧೫ ಲಕ್ಷ ರೂಪಾಯಿಗಳವರೆಗೆ ಹೆಚ್ಚಿಸಲು ಉದ್ದೇಶಿಸುತ್ತೇನೆ.

(ಡಿ) ಕೆಲವು ವರ್ಗಗಳ ಜನರಿಗೆ ಸಂಬಂಧಿಸಿದಂತೆ ತೆರಿಗೆಯ ದರವನ್ನು ಅನುಬಂಧ-೫ರಲ್ಲಿ ನಿರ್ದಿಷ್ಟಪಡಿಸಿರುವಂತೆ ಹೆಚ್ಚಿಸಲು ನಾನು ಉದ್ದೇಶಿಸುತ್ತೇನೆ.

(ಇ) ಈ ಮುಂದಿನ ವರ್ಗಗಳ ವ್ಯಕ್ತಿಗಳನ್ನು ಅಧಿನಿಯಮದ ಅಡಿಯ ಅನುಸೂಚಿಗೆ ಸೇರಿಸಲು ಮತ್ತು ಅವರಿಗೆ ಈ ಮುಂದಿನಂತೆ ತೆರಿಗೆ ವಿಧಿಸಲು ನಾನು ಉದ್ದೇಶಿಸುತ್ತೇನೆ.

ವ್ಯಕ್ತಿಗಳ ವರ್ಗ	ತೆರಿಗೆಯ ದರ
೧. ಜಾಹೀರಾತಿನ ಫರ್ಮುಗಳು/ಏಜೆನ್ಸಿಗಳು	ವಾರ್ಷಿಕ ೨೫೦೦ರೂ
೨. ಬಿಡಿ ಕೆಲಸಕ್ಕಾಗಿ ಫೋಟೋ ಕಾಪೀಯಿಂಗ್ ಯಂತ್ರಗಳನ್ನು ಬಳಸುವ ವ್ಯಕ್ತಿಗಳು	ವಾರ್ಷಿಕ ೫೦೦ ರೂಪಾಯಿ

೬೯. ಈ ಕ್ರಮಗಳಿಂದ ೧೯.೪೫ ಕೋಟಿ ರೂಪಾಯಿಗಳ ಗಳಿಕೆಯನ್ನು ನಿರೀಕ್ಷಿಸಲಾಗಿದೆ,

ಪ್ರವೇಶ ತೆರಿಗೆ :

೨೦. (i) ನಾನು, ಪ್ರವೇಶ ತೆರಿಗೆ ಅಧಿನಿಯಮದ ಅಡಿಯ ಅನುಸೂಚಿಯಲ್ಲಿ ಜವಳಿಗೆ ಸಂಬಂಧಿಸಿದ ನಮೂದನ್ನು ಅದರಲ್ಲಿ ಪಿವಿಸಿ ಅಥವಾ ಸೆಲ್ಯುಲೋಸ್ ಉತ್ಪನ್ನಗಳನ್ನು ಲೇಪಿಸಿರುವ ಅಥವಾ ಬೆರಸಿರುವ ಹತ್ತಿಬಟ್ಟೆಗೂ ಸೇರುವಂತೆ ತಿದ್ದುಪಡಿ ಮಾಡಲು ಉದ್ದೇಶಿಸಿದ್ದೇನೆ.

(ii) ಮೇಲೆ ಹೇಳಿದ ಅಧಿನಿಯಮದ ಅನುಸೂಚಿಯ ನಮೂದು ೧೬-ಬಿಯ ಅಡಿಯಲ್ಲಿ, ತೆರಿಗೆ ವಿಧಿಸುವ ಉದ್ದೇಶಕ್ಕಾಗಿ "ಸರಕುಗಳ ಸಂಸ್ಕರಣ, ಅಭಿವೃದ್ಧಿ ಮತ್ತು ದುರಸ್ತಿ" ಯನ್ನು ಸೇರಿಸಲು ನಾನು ಪ್ರಸ್ತಾವಿಸುತ್ತೇನೆ;

(iii) ಅಕ್ಕಿ ತೌಡು ಮತ್ತು ಹಿಂಡಿಗಳಿಗೆ ಪ್ರವೇಶ ತೆರಿಗೆ ವಿನಾಯಿತಿ ನೀಡಲು ನಾನು ಪ್ರಸ್ತಾವಿಸುತ್ತೇನೆ;

(iv) ವರ್ಷದಲ್ಲಿ ಒಟ್ಟು ೧ ಲಕ್ಷ ರೂಪಾಯಿಗಳಿಗಿಂತ ಕಡಿಮೆ ವಹಿವಾಟು ಇರುವ ವ್ಯಾಪಾರಿಗಳಿಗೆ ಪ್ರವೇಶ ತೆರಿಗೆ ವಿನಾಯಿತಿ ನೀಡಲು ನಾನು ಪ್ರಸ್ತಾವಿಸುತ್ತೇನೆ ;

(v) ೨.೫ ಲಕ್ಷ ರೂಪಾಯಿಗಳಿಗಿಂತ ಕಡಿಮೆ ವಾರ್ಷಿಕ ವಹಿವಾಟು ಇರುವ ಸಣ್ಣ ವ್ಯಾಪಾರಿಗಳಿಗೆ ಪ್ರತಿ ತಿಂಗಳಿಗೆ ಬದಲಾಗಿ ಮೂರು ತಿಂಗಳಿಗೆ ಒಮ್ಮೆ ಮುಂಗಡ ತೆರಿಗೆಯನ್ನು ಸಂದಾಯ ಮಾಡಲು ಅನುಮತಿಸಲಾಗುವುದು;

(vi) ಮೇಲೆ ಸೂಚಿಸಿದ ತಿದ್ದುಪಡಿಗಳಲ್ಲದೆ, ಮೇಲೆ ಹೇಳಿದ ಅಧಿನಿಯಮದ ಉಪಬಂಧಗಳನ್ನು ಹೆಚ್ಚು ಸಮಂಜಸ ಹಾಗೂ ಸರಳವಾಗಿಸುವ ದೃಷ್ಟಿಯಿಂದ ತಿದ್ದುಪಡಿ ಮಾಡಲು ಉದ್ದೇಶಿಸಲಾಗಿದೆ.

೨೧. ಈ ರಿಯಾಯಿತಿಗಳಿಂದಾಗಿ ಸರ್ಕಾರಕ್ಕೆ ೨೦ ಲಕ್ಷ ರೂಪಾಯಿಗಳ ನಷ್ಟ ಉಂಟಾಗುವುದು.

ಮನೋರಂಜನ ತೆರಿಗೆ :

೨೨. (i) ೧೫,೦೦೦ಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಗ್ರಾಮಗಳು/ಪಟ್ಟಣಗಳಲ್ಲಿನ ಸಿನಿಮಾ ಮಂದಿರಗಳಿಗೆ ರಾಜಿ ವ್ಯವಸ್ಥೆ ಮೇರೆಗಿನ ಪ್ರದರ್ಶನ ತೆರಿಗೆಯ ವಿನಾಯಿತಿ ಮತ್ತು ಮನೋರಂಜನಾ ತೆರಿಗೆಯ ರಿಯಾಯಿತಿ ದರಗಳು ಅನ್ವಯವಾಗುವಂತೆ ಮಾಡಲಾಗುವುದು ;

(ii) ವಿಡಿಯೋ ಪಾರ್ಲರುಗಳಿಗೆ ಅವು ಪ್ರದರ್ಶನಗಳನ್ನು ನಡೆಸದ ಅವಧಿಯಲ್ಲಿ ಸ್ವಲ್ಪ ಮಟ್ಟಿಗೆ ಪರಿಹಾರ ನೀಡಲು ಉದ್ದೇಶಿಸಲಾಗಿದೆ;

(iii) ಸಿನಿಮಾ ಮಂದಿರಗಳ ಮೃತ ಮಾಲೀಕರ ಕಾನೂನುಬದ್ಧ ವಾರಸುದಾರರ ಮೇಲೆ ಕರ ನಿರ್ಧರಣೆ ಮಾಡಲು ಅನುಕೂಲವಾಗುವಂತೆ ಹೊಸ ಉಪಬಂಧವೊಂದನ್ನು ಜಾರಿಗೆ ತರಲು ಉದ್ದೇಶಿಸಲಾಗಿದೆ :

(iv) ಮೇಲೆ ತಿಳಿಸಿದ ತಿದ್ದುಪಡಿಗಳಲ್ಲದೆ, ಮೇಲೆ ಹೇಳಿದ ಅಧಿನಿಯಮದ ಉಪಬಂಧಗಳನ್ನು ಅವುಗಳನ್ನು ಹೆಚ್ಚು ಸಮಂಜಸ ಹಾಗೂ ಸರಳಗೊಳಿಸುವ ದೃಷ್ಟಿಯಿಂದ ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.

ಜೂಜು ತೆರಿಗೆ ;

ಟೋಟಲೈಸೇಟರ್ ತೆರಿಗೆ ಮತ್ತು ಜೂಜು ತೆರಿಗೆಗಳ ದರವನ್ನು ಅನುಬಂಧ-೬ರಲ್ಲಿ ನಿರ್ದಿಷ್ಟಪಡಿಸಿರುವಂತೆ ಹೆಚ್ಚಿಸಲು ನಾನು ಉದ್ದೇಶಿಸಿದ್ದೇನೆ. ಹೆಚ್ಚಿಸಿದ ದರದ ತೆರಿಗೆಗಳು ಆನ್-ಕೋರ್ಸ್ (On Course) ಮತ್ತು ಆಫ್-ಕೋರ್ಸ್ (Off Course) ಜೂಜುಗಳೆರಡಕ್ಕೂ ಒಂದೇ ರೀತಿ ಅನ್ವಯಿಸುತ್ತವೆ,

೨೪. ಮೇಲಿನ ತೆರಿಗೆ ಏರಿಕೆಯಿಂದ ವರ್ಷಕ್ಕೆ ೪ ಕೋಟಿ ರೂಪಾಯಿಗಳ ನಿವ್ವಳ ಆದಾಯ ದೊರೆಯುವುದೆಂದು ನಿರೀಕ್ಷಿಸಲಾಗಿದೆ.

೭೫. ರಾಜ್ಯವು, ಹಂತಹಂತವಾಗಿ ಹೆಂಡದ ಮಾರಾಟವನ್ನು ನಿಷೇಧಿಸುತ್ತಿದೆ. ಈಗ ಏಳು ಜಿಲ್ಲೆಗಳಲ್ಲಿ ಹೆಂಡದ ಮಾರಾಟವನ್ನು ನಿಷೇಧಿಸಲಾಗಿದೆ. ನಾನು, ೧-೭-೧೯೯೦ ರಿಂದ ಇಡೀ ರಾಜ್ಯಕ್ಕೆ ಈ ನಿಷೇಧವನ್ನು ವಿಸ್ತರಿಸಲು ಉದ್ದೇಶಿಸಿದ್ದೇನೆ. ಆದಾಯದಲ್ಲಿ ನಿರೀಕ್ಷಿಸಲಾದ ನಷ್ಟ ೬೦ ಕೋಟಿ ರೂಪಾಯಿಗಳು. ಈ ನಷ್ಟದ ಭಾಗವನ್ನು ಸಾರಾಯಿ ಬಾಡಿಗೆ ದರ ಏರಿಕೆ ಮತ್ತು ನಿಯಮ ಹಾಗೂ ನಿಬಂಧನೆಗಳ ಪರಿಣಾಮಕಾರಿ ಜಾರಿಯ ಮೂಲಕ ಭರಿಸಲಾಗುವುದು.

೭೬. (i) ರಕ್ಷಣಾ ಸೇವೆಗಳಿಗಲ್ಲದೆ ಬೇರೆ ಕಡೆಗೆ ಮಾಡುವ ಸರಬರಾಜಿಗೆ ರಫ್ತು ಸುಂಕವನ್ನು ಪ್ರತಿ ಸಗಟು ಲೀಟರಿಗೆ ಈಗಿರುವ ೧ ರೂಪಾಯಿಯಿಂದ ಸಗಟು ಲೀಟರ್ ಒಂದಕ್ಕೆ ೨೦ ರೂಪಾಯಿಗೆ ಹೆಚ್ಚಿಸಲಾಗುವುದು. ಇದರಿಂದ ವರ್ಷಕ್ಕೆ ೩೮ ಕೋಟಿ ರೂಪಾಯಿಗಳಷ್ಟು ಹೆಚ್ಚುವರಿ ಆದಾಯ ಬರುವ ನಿರೀಕ್ಷೆಯಿದೆ.—

(ii) ರಮ್ ಹೊರತುಪಡಿಸಿ ರಕ್ಷಣಾ ಸೇವೆಗಳಿಗೆ ಸರಬರಾಜು ಮಾಡುವ, ಭಾರತದಲ್ಲಿ ತಯಾರಿಸಿದ ಮದ್ಯದ ಮೇಲೆ ಪ್ರತಿ ಸಗಟು ಲೀಟರಿಗೆ ಈಗಿರುವ ೧ ರೂಪಾಯಿಯಂತೆ ರಫ್ತು ಸುಂಕವನ್ನು ಪ್ರತಿ ಸಗಟು ಲೀಟರಿಗೆ ೨ ರೂಪಾಯಿಗಳಿಗೆ ಹೆಚ್ಚಿಸಲಾಗುವುದು. ಇದರಿಂದ ವರ್ಷಕ್ಕೆ ೧೭ ಲಕ್ಷ ರೂಪಾಯಿಯ ಹೆಚ್ಚುವರಿ ಆದಾಯವನ್ನು ನಿರೀಕ್ಷಿಸಲಾಗಿದೆ.

(iii) ರಕ್ಷಣಾ ಸೇವೆಗಳಿಗೆ ಸರಬರಾಜು ಮಾಡುವ ರಮ್ ಮೇಲಿನ ರಫ್ತು ಸುಂಕವನ್ನು ಪ್ರೂಫ್ ಲೀಟರ್ ಒಂದಕ್ಕೆ ೩೫ ಪೈಸೆ ದರದಿಂದ ಪ್ರತಿ ಸಗಟು ಲೀಟರಿಗೆ ೧ ರೂಪಾಯಿಗೆ ಹೆಚ್ಚಿಸಲಾಗಿದೆ. ಇದರಿಂದ ವರ್ಷಕ್ಕೆ ೩೩ ಲಕ್ಷ ರೂಪಾಯಿಗಳ ಹೆಚ್ಚುವರಿ ಆದಾಯವನ್ನು ನಿರೀಕ್ಷಿಸಲಾಗಿದೆ.

೭೭. ವಿವಿಧ ಬಗೆಯ ಲೈಸೆನ್ಸ್ ಶುಲ್ಕಗಳನ್ನು ಅನುಬಂಧ-೭ ರಲ್ಲಿ ಸೂಚಿಸಿದಂತೆ ಹೆಚ್ಚಿಸಲಾಗಿದೆ. ಅಂಥ ಹೆಚ್ಚಳದಿಂದ ವರ್ಷಕ್ಕೆ ೨.೬೦ ಕೋಟಿ ರೂಪಾಯಿ ಹೆಚ್ಚುವರಿ ಆದಾಯವನ್ನು ನಿರೀಕ್ಷಿಸಲಾಗಿದೆ.

೭೮. ಕಾಕಂಬಿ ಮತ್ತು ರೆಕ್ಟಿಫೈಡ್ ಸ್ಪಿರಿಟ್‌ನ ರಫ್ತನ್ನು ತೀವ್ರವಾಗಿ ಕಡಿಮೆ ಮಾಡಲಾಗುವುದು. ಇದರಿಂದ ಲಭ್ಯವಾಗುವ ಕಾಕಂಬಿಯನ್ನು ರೆಕ್ಟಿಫೈಡ್ ಸ್ಪಿರಿಟ್ ಆಗಿಯೂ, ರೆಕ್ಟಿಫೈಡ್ ಸ್ಪಿರಿಟ್‌ನ್ನು ಐ ಎಂ ಎಲ್ ಮತ್ತು ಸಾರಾಯಿಗಳಾಗಿಯೂ ಪರಿವರ್ತಿಸಲಾಗುವುದು. ಇದರಿಂದ ವರ್ಷಕ್ಕೆ ೧೫ ಕೋಟಿ ರೂಪಾಯಿಗಳ ಹೆಚ್ಚುವರಿ ಆದಾಯ ನಿರೀಕ್ಷಿಸಲಾಗಿದೆ.

೭೯. ಸಾರಾಯಿ ಮೇಲಿನ ಸುಂಕವನ್ನು ಪ್ರತಿ ಸಗಟು ಲೀಟರಿಗೆ ಈಗಿರುವ ೫ ರೂಪಾಯಿಂದ ಲೀಟರ್ ಒಂದಕ್ಕೆ ೬ ರೂಪಾಯಿಗೆ ಹೆಚ್ಚಿಸಲಾಗುವುದು. ಇದರಿಂದ ೧೯೯೦-೯೧ರ ಆರ್ಥಿಕ ವರ್ಷದಲ್ಲಿ ೫ ಕೋಟಿ ರೂಪಾಯಿಗಳ ಹೆಚ್ಚುವರಿ ಆದಾಯ ನಿರೀಕ್ಷಿಸಲಾಗಿದೆ.

೮೦. ಈ ಎಲ್ಲಾ ಕ್ರಮಗಳಿಂದ ವರ್ಷಕ್ಕೆ ಒಟ್ಟು ೬೧.೧೦ ಕೋಟಿ ರೂಪಾಯಿಗಳ ಆದಾಯ ನಿರೀಕ್ಷಿಸಲಾಗಿದೆ.

ಸ್ಟಾಂಪುಗಳು ಮತ್ತು ನೋಂದಣಿ

೮೧. ೧೯೫೭ರ ಕರ್ನಾಟಕ ಸ್ಟಾಂಪು ಅಧಿನಿಯಮದ ಅನುಸೂಚಿಯಲ್ಲಿ ಹೇಳಲಾದ ಕೆಲವಾರು ಅನುಚ್ಛೇದಗಳ ಸಂಬಂಧದಲ್ಲಿ ೩ನೇ ಪ್ರಕರಣದ ಮೇರೆಗೆ ವಿಧಿಸುವ ಸ್ಟಾಂಪು ಶುಲ್ಕವನ್ನು ೧೯೭೪ ರಿಂದೀಚೆಗೆ ಪರಿಷ್ಕರಿಸಿಲ್ಲ. ೧೯೫೭ರ ಕರ್ನಾಟಕ ಸ್ಟಾಂಪು ಅಧಿನಿಯಮದ ಅನುಸೂಚಿಯ ೨, ೪, ೬, ೧೨, ೧೪, ೨೧, ೨೨, ೨೩, ೩೬, ೪೧, ೪೨, ೪೫, ೪೭, ೫೧, ೫೨ ಮತ್ತು ೫೪ನೇ ಅನುಚ್ಛೇದಗಳ ವ್ಯಾಪ್ತಿಯಲ್ಲಿ ಬರುವ ಲಿಖಿತಗಳ ಸಂಬಂಧದಲ್ಲಿ ಶುಲ್ಕದ ದರಗಳನ್ನು ಪರಿಷ್ಕರಿಸಲು ಉದ್ದೇಶಿಸಲಾಗಿದೆ. ಮಿಕ್ಕವುಗಳೊಂದಿಗೆ, ಈ ಮುಂದಿನ ಲಿಖಿತಗಳು ಅಂದರೆ ಅಫಿದಾವಿತ್, ಹಕ್ಕುಪತ್ರಗಳ ಠೇವಣಾತಿ ಕುರಿತ ಒಪ್ಪಂದಪತ್ರ, ಬಾಂಡು, ನೋಟರಿಗಳ ಪ್ರಮಾಣನ ಕಾರ್ಯ ಮತ್ತು ಪವರ್ ಆಫ್ ಅಟಾರ್ನಿಗಳಿಗೆ ಸಂಬಂಧಿಸಿದ ಸ್ಟಾಂಪು ಶುಲ್ಕ ಹೆಚ್ಚಿಸಲು ಉದ್ದೇಶಿಸಲಾಗಿದೆ. ಪ್ರಸ್ತಾವಿತ ಬದಲಾವಣೆಗಳನು ಅನುಬಂಧ-೮ರಲ್ಲಿ ತೋರಿಸಲಾಗಿದೆ.

೮೨. ಆಸ್ತಿಯನ್ನು ಕಡಿಮೆ ಮೌಲ್ಯಕ್ಕೆ ನೋಂದಣಿ ಮಾಡಿಸಿಕೊಳ್ಳುವುದನ್ನು ತಪ್ಪಿಸುವ ಉದ್ದೇಶದಿಂದ ಮುನಿಸಿಪಾಲಿಟಿಗಳು, ಸ್ಯಾನಿಟರಿ ಬೋರ್ಡುಗಳು ಮತ್ತು ಅಧಿಸೂಚಿತ ಪ್ರದೇಶಗಳು ಒಳಗೊಳ್ಳುವಂತೆ ೧೯೫೭ರ ಕರ್ನಾಟಕ ಸ್ಟಾಂಪು ಅಧಿನಿಯಮದ ೪೫-ಎ ಪ್ರಕರಣದ ವ್ಯಾಪ್ತಿಯನ್ನು ವಿಸ್ತರಿಸಲು ಉದ್ದೇಶಿಸಲಾಗಿದೆ.

೮೩. ಅಧಿನಿಯಮದ ಜಾರಿಯಲ್ಲಿ ಆಗುವ ಕೆಲವು ಲೋಪದೋಷ ತಪ್ಪಿಸಲು, ಆಸ್ತಿಗಳಿಗೆ ಕಡಿಮೆ ಮೌಲ್ಯ ನಿರ್ಧರಿಸಿ ಸ್ಟಾಂಪು ಶುಲ್ಕ ತಪ್ಪಿಸಿಕೊಳ್ಳುವುದನ್ನು ತಡೆಗಟ್ಟಲು, ಹೆಚ್ಚುವರಿ ಅಪೀಲು ಪ್ರಾಧಿಕಾರದ ರಚನೆಗೆ ಅವಕಾಶ ಕಲ್ಪಿಸಲು, ಪ್ರಕರಣಗಳ ಶೀಘ್ರ ವಿಲೆಗೆ ಮತ್ತು ಕೆಲ ಸಂದರ್ಭಗಳಲ್ಲಿ ಪ್ರಕರಣಗಳನ್ನು ಮತ್ತೆ ತೆರೆಯುವುದಕ್ಕೆ ಅವಕಾಶ ಮಾಡಿಕೊಡಲು ಅಧಿನಿಯಮದ ೪೫-ಎ, ೪೬-ಎ ಮತ್ತು ೫೩ನೇ ಪ್ರಕರಣಗಳನ್ನು ತಿದ್ದುಪಡಿ ಮಾಡಲು ಉದ್ದೇಶಿಸಲಾಗಿದೆ.

೮೪. ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮದ ಉಪಬಂಧಗಳ ಮೇರೆಗೆ ವಿಧಿಸುತ್ತಿರುವ ಕೆಲವು ಫೀಸು ದರಗಳನ್ನು ಆ ಅಧಿನಿಯಮವನ್ನು ತಿದ್ದುಪಡಿ ಮಾಡುವುದರ ಮೂಲಕ ಪರಿಷ್ಕರಿಸಲು ನಾನು ಉದ್ದೇಶಿಸಿದ್ದೇನೆ.

೮೫. ಈ ಬದಲಾವಣೆಗಳಿಂದ ವರ್ಷದಲ್ಲಿ ಬೊಕ್ಕಸಕ್ಕೆ ೨೦ ಕೋಟಿ ರೂಪಾಯಿಗಳ ಹೆಚ್ಚುವರಿ ಆದಾಯ ಬರುವ ನಿರೀಕ್ಷೆಯಿದೆ.

ಸಾರಿಗೆ ಇಲಾಖೆ

೮೬. ನಾನು ವಿವಿಧ ಮಾದರಿಯ ವಾಹನಗಳ ಮೇಲೆ ೯ನೇ ಅನುಬಂಧದಲ್ಲಿ ನಿರ್ದಿಷ್ಟಪಡಿಸಿದಂತೆ ತೆರಿಗೆಯನ್ನು ಹೆಚ್ಚಿಸಲು ಉದ್ದೇಶಿಸಿದ್ದೇನೆ. ಈ ಹೆಚ್ಚಳದಿಂದ ವರ್ಷಕ್ಕೆ ೧೨.೩೫ ಕೋಟಿ ರೂಪಾಯಿಗಳ ಹೆಚ್ಚುವರಿ ಆದಾಯ ನಿರೀಕ್ಷಿಸಲಾಗಿದೆ.

ಪರಿಷ್ಕೃತ ಅಂದಾಜು 1989-90

೮೭. ಪ್ರಸಕ್ತ ವರ್ಷ, ರಾಜ್ಯ ತೆರಿಗೆ ರಾಜಸ್ವ ಜಮೆಗಳು ೩೮.೨೩ ಕೋಟಿ ರೂಪಾಯಿಗಳಷ್ಟು ಹೆಚ್ಚಾಗುವ ನಿರೀಕ್ಷೆ ಇದೆ. ಕೇಂದ್ರ ತೆರಿಗೆಗಳಲ್ಲಿ ನಮ್ಮ ಪಾಲು ೫೯.೧೬ ಕೋಟಿ ರೂಪಾಯಿಗಳಷ್ಟು ಹೆಚ್ಚಬಹುದೆಂದು ನಿರೀಕ್ಷಿಸಲಾಗಿದೆ. ಇದರಲ್ಲಿ ೨೨.೯೭ ಕೋಟಿ ರೂಪಾಯಿಗಳ ಬಾಕಿಗಳು ಸೇರಿವೆ. ರಾಜಸ್ವ ವೆಚ್ಚದಲ್ಲಿ ೬೩.೨೧ ಕೋಟಿ ರೂಪಾಯಿಗಳ ಉಳಿತಾಯವನ್ನು ಕೂಡ ನಿರೀಕ್ಷಿಸಲಾಗಿದೆ. ಈ ಎಲ್ಲ ಅಂಶಗಳಿಂದ ರಾಜಸ್ವ ಲೆಕ್ಕದ ಕೊರತೆಯು ೧೨೨.೧೫ ಕೋಟಿ ರೂಪಾಯಿಗಳಿಂದ ೬೭.೭೦ ಕೋಟಿ ರೂಪಾಯಿಗಳಿಗೆ ಇಳಿದಿದೆ. ಸಣ್ಣ ಉಳಿತಾಯಗಳ ಸಂಗ್ರಹಣೆಗಳಿಗೆ ಪ್ರತಿಯಾಗಿ ಭಾರತ ಸರ್ಕಾರದಿಂದ ಹೆಚ್ಚಿನ ಸಾಲ ದೊರೆತ ಕಾರಣ ಬಂಡವಾಳ ಜಮೆಗಳು ಬಜೆಟ್‌ನಲ್ಲಿ ತೋರಿಸಿದ್ದಕ್ಕಿಂತ ಹೆಚ್ಚಾಗಿದೆ.

೮೮. ವರ್ಷದ ಪ್ರಾರಂಭಿಕ ಶಿಲ್ಕು ಮಹಾಲೇಖಪಾಲರು ಒದಗಿಸಿದ ೧೯೮೮-೮೯ನೇ ಸಾಲಿನ ಲೆಕ್ಕಗಳ ಪ್ರಕಾರ (—) ೧೩.೫೪ ಕೋಟಿ ರೂಪಾಯಿ ವರ್ಷದ ಒಟ್ಟಾರೆ ಕೊರತೆ ೬.೧೯ ಕೋಟಿ ರೂಪಾಯಿಗಳಾಗುವ ನಿರೀಕ್ಷೆ ಇದೆ. ಪ್ರಾರಂಭಿಕ ಶಿಲ್ಕು ಮತ್ತು ವರ್ಷದ ಕೊರತೆಯನ್ನು ಪರಿಗಣಿಸಿದಾಗ ೧೯೮೯-೯೦ನೇ ಸಾಲಿನ ಅಂತಿಮ ಶಿಲ್ಕು (—) ೧೯.೭೩ ಕೋಟಿ ರೂಪಾಯಿಯಾಗುವುದೆಂದು ನಿರೀಕ್ಷಿಸಲಾಗಿದೆ.

ಬಜೆಟ್ ಅಂದಾಜು 1990-91

೮೯. ರಾಜ್ಯ ತೆರಿಗೆಗಳಿಂದ ೧೯೮೯-೯೦ಕ್ಕಿಂತಲೂ ೨೨೨.೪೨ ಕೋಟಿ ರೂಪಾಯಿ ಹೆಚ್ಚಿಗೆ ಗಳಿಕೆಯನ್ನು ನಿರೀಕ್ಷಿಸಲಾಗಿದೆ. ಕೇಂದ್ರ ತೆರಿಗೆಗಳ ಪಾಲಿನಲ್ಲಿ ೨೨.೦೬ ಕೋಟಿ ರೂಪಾಯಿಗಳ ಸ್ವಲ್ಪ ಹೆಚ್ಚಳವನ್ನು ನಿರೀಕ್ಷಿಸಲಾಗಿದೆ, ವರ್ಷದ ರಾಜಸ್ವ ಜಮೆಗಳು ೩,೮೧೫.೯೨ ಕೋಟಿ ರೂಪಾಯಿಗಳೆಂದು ಅಂದಾಜು ಮಾಡಲಾಗಿದೆ. ವಿವರಗಳ ಹೆಚ್ಚುವರಿ ಸಂಪನ್ಮೂಲಗಳ ಸಂಗ್ರಹಣೆ ಅನುಬಂಧ ೧೦ರಲ್ಲಿ ಇರುವಂತೆ ಇದೆ. ೧೯೮೯-೯೦ನೇ ಸಾಲಿನ ರಾಜಸ್ವ ವೆಚ್ಚ ೪,೦೧೩.೨೩ ಕೋಟಿ ರೂಪಾಯಿಯಷ್ಟಾಗಿ, ಹೆಚ್ಚುವರಿ ಸಂಪನ್ಮೂಲ ಕ್ರಮಗಳಿಂದ ಬರುವ ಗಳಿಕೆಯನ್ನು ಸೇರಿಸದೆ, ನೋಡಿದಾಗ ರಾಜಸ್ವ ಲೆಕ್ಕದಲ್ಲಿ ೧೯೪.೩೧ ಕೋಟಿ ರೂಪಾಯಿಗಳ ಕೊರತೆ ಕಂಡುಬರುವುದು. ಬಂಡವಾಳ ಲೆಕ್ಕದಲ್ಲಿ ೯.೮೧ ಕೋಟಿ ರೂಪಾಯಿಯ ಅತ್ಯಲ್ಪ ಹೆಚ್ಚಳವನ್ನು ನಿರೀಕ್ಷಿಸಲಾಗಿದೆ. ಹೆಚ್ಚುವರಿ ಸಂಪನ್ಮೂಲ ಸಂಗ್ರಹಣೆಗೆ ಮೊದಲು ವರ್ಷದ ಒಟ್ಟಾರೆ ಕೊರತೆಯು ೧೮೪.೫೦ ಕೋಟಿ ರೂಪಾಯಿಗಳಷ್ಟಾಗಿದ್ದು ಅದು (—) ೧೯.೭೩ ಕೋಟಿ ರೂಪಾಯಿಗಳ ಪ್ರಾರಂಭಿಕ ಶಿಲ್ಕಿನೊಂದಿಗೆ (—) ೨೦೪.೨೩ ಕೋಟಿ ರೂಪಾಯಿಯ ಅಂತಿಮ ಶಿಲ್ಕು ಆಗಿ ಪರಿಣಮಿಸುವುದು. ೧೪೭.೫೦ ಕೋಟಿ ರೂಪಾಯಿಗಳ ಹೆಚ್ಚುವರಿ ಸಂಪನ್ಮೂಲ ಸಂಗ್ರಹಣೆಯ ಕಾರಣದಿಂದ ಕೊನೆಗೆ ಅಂತಿಮ ಶಿಲ್ಕು (—) ೫೬.೭೩ ಕೋಟಿ

ರೂಪಾಯಿಯಾಗುವುದು. ಇದನ್ನೂ ಕೂಡ ಬಹುಮಟ್ಟಿಗೆ ವರ್ಷಾವಧಿಯಲ್ಲಿ ತೆರಿಗೆಗಳಿಂದ ನಿರೀಕ್ಷಿಸುವ ಸ್ವಾಭಾವಿಕ ಹೆಚ್ಚಳದಿಂದ ಮತ್ತು ಹೆಚ್ಚು ದಕ್ಷತೆಯಿಂದ ವಸೂಲಿ ಮಾಡುವ ಮೂಲಕ ತುಂಬಲಾಗುವುದು.

೯೦. ನಾನು ಈಗ ೧೯೯೦-೯೧ನೇ ಸಾಲಿನ ಬಜೆಟ್ ಅಂದಾಜುಗಳನ್ನು ಸದನದ ಪರಿಶೀಲನೆಗಾಗಿ ಮತ್ತು ಅನುಮೋದನೆಗಾಗಿ ಮಂಡಿಸುತ್ತೇನೆ. ಹಾಗೂ ೧೯೯೦ರ ಜುಲೈ ೩೧ಕ್ಕೆ ಕೊನೆಗೊಳ್ಳುವ ನಾಲ್ಕು ತಿಂಗಳ ಅವಧಿಗೆ ಲೇಖಾನುದಾನ ನೀಡಬೇಕಾಗಿ ವಿನಂತಿಸುತ್ತೇನೆ.

ಬಜೆಟ್ ವಿಹಂಗವು

(ಕೋಟಿ ರೂಪಾಯಿಗಳಲ್ಲಿ)

	ಬಜೆಟ್ ಅಂದಾಜು ೧೯೮೯-೯೦	ಪರಿಷ್ಕೃತ ಅಂದಾಜು ೧೯೮೯-೯೦	ಬಜೆಟ್ ಅಂದಾಜು ೧೯೯೦-೯೧
ಪ್ರಾರಂಭದ ಶಿಲ್ಕು	(—)೯೧.೫೩	(—)೧೩.೫೪	(—)೧೯.೭೩
ಎ. ರಾಜಸ್ವ ಲೆಕ್ಕ			
I. ಜಮೆ:			
ರಾಜ್ಯ ತೆರಿಗೆ	೧೮೯೦.೪೫	೧೯೨೮.೬೮	೨೧೫೧.೧೦
ಕೇಂದ್ರ ತೆರಿಗೆಯಲ್ಲಿ ಪಾಲು	೫೭೩.೭೦	೬೩೨.೯೦	೬೫೪.೯೬
ಕೇಂದ್ರ ಸರ್ಕಾರದ ಅನುದಾನಗಳು	೪೦೨.೩೭	೩೨೪.೪೦	೩೧೫.೭೯
ತೆರಿಗೆಯೇತರ ರಾಜಸ್ವ	೫೬೨.೬೮	೫೩೪.೫೦	೬೯೪.೦೭
ಒಟ್ಟು —ಎ. I.	೩೪೨೯.೨೪	೩೪೨೦.೪೮	೩೮೧೫.೯೨
II. ವೆಚ್ಚ:			
ಸಾಮಾಜಿಕ ಸೇವೆ	... ೧೪೫೧.೯೫	೧೬೯೦.೩೮	೧೫೯೬.೩೮
ಆರ್ಥಿಕ ಸೇವೆ	... ೯೪೨.೫೬	೯೭೦.೭೭	೧೦೬೬.೬೭
ಸಾಮಾನ್ಯ ಸೇವೆ	... ೧೦೬೨.೯೨	೧೦೩೪.೮೬	೧೨೪೬.೧೩
ಸಹಾಯಾನುದಾನ ಮತ್ತು ಅಂಶದಾನ	... ೯೩.೯೬	೯೨.೧೭	೧೦೧.೦೫
ಒಟ್ಟು —ಎ. II	೩೫೫೧.೩೯	೩೪೮೮.೧೮	೪೦೦೦.೨೩
ಎ. ರಾಜ್ಯಸ್ವ ಲೆಕ್ಕ ಹೆಚ್ಚುವರಿ (+) ಕೊರತೆ (—)	(—) ೧೨೨.೧೫	(—) ೬೭.೭೦	(—) ೧೯೪.೩೧

ನೋಟ

(ಕೋಟಿ ರೂಪಾಯಿಗಳಲ್ಲಿ).

	ಬಜೆಟ್ ಅಂದಾಜು ೧೯೮೯-೯೦	ಪರಿಷ್ಕೃತ ಅಂದಾಜು ೧೯೮೯-೯೦	ಬಜೆಟ್ ಅಂದಾಜು ೧೯೯೦-೯೧
ಬಿ. ಬಂಡವಾಳ ಲೆಕ್ಕ			
I. ಜಮೆ:			
ಭಾರತದ ಸರ್ಕಾರದಿಂದ ಸಾಲ	೪೫೩.೭೭	೫೭೬.೧೬	೪೮೩.೭೨
ಬಹಿರಂಗ ಮಾರುಕಟ್ಟೆ ಸಾಲ ಇತ್ಯಾದಿ	೧೪೨.೦೪	೧೪೨.೦೪	೧೨೩.೫೦
ಎಲ್‌ಐಸಿ, ಆರ್‌ಬಿಐ, ಜಿಐಸಿ ಮತ್ತು ಎನ್‌ಸಿಡಿಸಿ ಇವುಗಳಿಂದ ಸಾಲ	೧೮.೧೧	೨೭.೦೭	೨೩.೩೪
ಸಾಲಗಳು ಮತ್ತು ಮುಂಗಡಗಳಿಂದ ವಸೂಲಿ	೧೨೯.೫೦	೧೬೬.೬೫	೨೨೩.೭೫
ಸರ್ಕಾರಿ ಲೆಕ್ಕ (ನಿವ್ವಳ) ಇತ್ಯಾದಿ	೧೫೮.೮೪	೧೯.೦೭	೧೩೮.೩೭
ಒಟ್ಟು — ಬಿ. I.	೯೦೨.೨೬	೯೩೦.೯೯	೯೯೧.೬೮
II. ಬಟವಾಡೆ:			
ಬಂಡವಾಳ ವೆಚ್ಚ (ನಿವ್ವಳ)	೩೯೯.೧೨	೩೬೧.೬೭	೪೩೧.೧೫
ಕೇಂದ್ರ ಸಾಲಗಳ ಮರುಸಂದಾಯ	೧೯೧.೩೧	೧೯೪.೫೫	೧೫೫.೦೨
ಬಹಿರಂಗ ಮಾರುಕಟ್ಟೆ ಸಾಲ ಇತ್ಯಾದಿಗಳ ಮರುಸಂದಾಯ	೧೯.೪೭	೧೮.೧೩	೦.೮೭
ಎಲ್‌ಐಸಿ, ಆರ್‌ಬಿಐ, ಜಿಐಸಿ ಮತ್ತು ಎನ್‌ಸಿಡಿಸಿ ಇವುಗಳಿಗೆ ಸಾಲಗಳ ಮರುಸಂದಾಯ	೮.೭೬	೮.೬೨	೯.೮೮
ಸಾಲಗಳ ಮತ್ತು ಮುಂಗಡಗಳ ಬಟವಾಡೆ	೩೩೭.೭೫	೨೮೬.೫೧	೩೮೪.೯೫
ಒಟ್ಟು — ಬಿ. II.	೯೫೬.೪೧	೮೬೯.೪೮	೯೮೧.೮೭
ಬಿ. ಬಂಡವಾಳ ಲೆಕ್ಕ ಹೆಚ್ಚಳ/ಕೊರತೆ	(—) ೫೪.೧೫	(+) ೬೧.೫೧	(+) ೯.೮೧
ಸಿ. ವರ್ಷದ ಒಟ್ಟು ಹೆಚ್ಚಳ/ಕೊರತೆ	(—) ೧೭೬.೩೦	(—) ೬.೧೯	(—) ೧೮೪.೫೦
ಡಿ. ಮುಕ್ತಾಯದ ಶಿಲ್ಕು ವಜಾ	(—) ೨೬೭.೮೩	(—) ೧೯.೭೩	(—) ೨೦೪.೨೩
ಕನ್‌ಸೈನ್‌ಮೆಂಟ್ ತೆರಿಗೆ ಇತ್ಯಾದಿ	೧೦೦.೦೦		
ಎಆರ್‌ಎಮ್	—	—	೧೪೭.೫೦
ಎಫ್. ಒಟ್ಟು ಹೆಚ್ಚುವರಿ ಕೊರತೆ	(—) ೧೬೭.೮೩	(—) ೧೯.೭೩	(—) ೫೬.೭೩

ಅನುಬಂಧ I

(೫೦ನೆಯ ಪ್ಯಾರಾ ನೋಡಿ)

ಕ್ರಮ ಸಂಖ್ಯೆ	ನಗರದ ಹೆಸರು		ಯೋಜನೆಯ ಒಟ್ಟು ಅಂದಾಜು ವೆಚ್ಚ (ಕೋಟಿ ರೂಪಾಯಿಗಳಲ್ಲಿ)
೧	೨		೩
	I. ನಗರ ಪಾಲಿಕೆಗಳು:		
೧	ಬೆಳಗಾಂ ನಗರ ಪಾಲಿಕೆ	...	೨೫.೬೧
೨	ಮಂಗಳೂರು ನಗರ ಪಾಲಿಕೆ	...	೧೪.೦೦
೩	ಮೈಸೂರು ನಗರ ಪಾಲಿಕೆ	...	೬.೫೦
	II. ನಗರ ಮುನ್ಸಿಪಲ್ ಕೌನ್ಸಿಲ್‌ಗಳು:		
೪	ಬಿಜಾಪುರ	...	೧೬.೭೦
೫	ಚಿಕ್ಕಮಗಳೂರು (ಎರಡನೇ ಹಂತ)	...	೦.೮೮
೬	ನಿಪ್ಪಾಣಿ	...	೧.೧೦
೭	ರಾಣಿಬೆನ್ನೂರು ನಗರ ಮುನ್ಸಿಪಲ್ ಕೌನ್ಸಿಲ್ (ಬ್ಯಾಡಗಿಗೆ ಪಿಡಬ್ಲ್ಯುಎಸ್‌ಎಸ್ ಸೇರಿ)	...	೪.೫೦
	III. ಟೌನ್ ಮುನ್ಸಿಪಲ್ ಕೌನ್ಸಿಲ್‌ಗಳು:		
೮	ಸಿಂಧನೂರು	...	೨.೫೦
೯	ಕುಮಟ	...	೧.೨೨
೧೦	ಕೊಪ್ಪಳ	...	೧.೮೦
೧೧	ಸಂಕೇಶ್ವರ ಮತ್ತು ಹುಕ್ಕೇರಿ	...	೫.೦೦
೧೨	ಇಳಕಲ್ ಮತ್ತು ಹುನಗುಂದ	...	೩.೫೫
೧೩	ಚಾಮರಾಜನಗರ	...	೬.೧೫
೧೪	ಬೈಲಹೊಂಗಲ	...	೦.೮೦
೧೫	ಗಂಗಾವತಿ	...	೧.೫೨
೧೬	ಆಳಂದ	...	೧.೩೪
೧೭	ಭದ್ರಾವತಿ ಅಧಿಸೂಚಿತ ಪ್ರದೇಶ ಸಮಿತಿ	...	೧.೩೦
	ಒಟ್ಟು	...	೯೪.೪೬

ಅನುಬಂಧ 1 ಎ

(೫೦ನೆಯ ಪ್ಯಾರಾ ನೋಡಿ)

ಕ್ರಮ ಸಂಖ್ಯೆ	ಯೋಜನೆ ಹೆಸರು	ಅಂದಾಜು ವೆಚ್ಚ (ಲಕ್ಷ ರೂಪಾಯಿಗಳಲ್ಲಿ)
೧	೨	೩
೧	ಅರಸೀಕೆರೆ ನೀರು ಸರಬರಾಜು ಯೋಜನೆ	೪೫೨.೦೦
೨	ತಿಪಟೂರು ನೀರು ಸರಬರಾಜು ಯೋಜನೆ	೩೬೦.೦೦
೩	ತುಮಕೂರು ನೀರು ಸರಬರಾಜು ಯೋಜನೆ	೧೦೦೦.೦೦
೪	ಚಿಕ್ಕಮಗಳೂರು (ಯಗಚಿ) ನೀರು ಸರಬರಾಜು ಯೋಜನೆ	೭೫೨.೦೦
೫	ಹಾಸನ ನೀರು ಸರಬರಾಜು ಯೋಜನೆ	೩೫೦.೦೦
೬	ನಂಜನಗೂಡು ನೀರು ಸರಬರಾಜು ಯೋಜನೆ	೫೫.೦೦
೭	ಚಿತ್ತಾಪುರ ನೀರು ಸರಬರಾಜು ಯೋಜನೆ	೮೬.೦೦
೮	ಸೇಡಂ ನೀರು ಸರಬರಾಜು ಯೋಜನೆ	೯೯.೦೦
೯	ಹುಬ್ಬಳ್ಳಿ ಧಾರವಾಡ ನೀರು ಸರಬರಾಜು ಯೋಜನೆ	೬೫೦.೦೦
೧೦	ಬೈಂದೂರು ನೀರು ಸರಬರಾಜು ಯೋಜನೆ	೪೦.೦೦
೧೧	ಉಡುಪಿ ನೀರು ಸರಬರಾಜು ಯೋಜನೆ	೧೧೦.೦೦

ಅನುಬಂಧ – 2

(೬೬ ಪ್ಯಾರಾ ನೋಡಿ)

ವಹಿವಾಟು ತೆರಿಗೆ ತಿದ್ದುಪಡಿ ಪ್ರಸ್ತಾವ

	ತೆರಿಗೆ ದರ
(i) ಒಂದು ವರ್ಷದಲ್ಲಿ ವ್ಯಾಪಾರಿಯ ಒಟ್ಟು ವಹಿವಾಟು ೧೧.೦೦ ಲಕ್ಷ ರೂಪಾಯಿಗಳನ್ನು ಮೀರದಿದ್ದರೆ	ಇಲ್ಲ
(ii) ಒಂದು ವರ್ಷದಲ್ಲಿ ವ್ಯಾಪಾರಿಯು ಒಟ್ಟು ವಹಿವಾಟು ೧೧.೦೦ ಲಕ್ಷ ರೂಪಾಯಿಗಳನ್ನು ಮೀರಿದ್ದು ೨೦೦.೦೦ ಲಕ್ಷ ರೂಪಾಯಿಗಳನ್ನು ಮೀರದಿದ್ದರೆ	ಶೇ. ೧.೨೫
(iii) ಒಂದು ವರ್ಷದಲ್ಲಿ ವ್ಯಾಪಾರಿಯು ಒಟ್ಟು ವಹಿವಾಟು ೨೦೦.೦೦ ಲಕ್ಷ ರೂಪಾಯಿಗಳನ್ನು ಮೀರಿದ್ದರೆ	ಶೇ. ೧.೭೫

ಅನುಬಂಧ — 3

(೬೬ನೇ ಪ್ಯಾರಾ ನೋಡಿ)

ಮಾರಾಟ ತೆರಿಗೆ ದರ ಹೆಚ್ಚಿಸಲು ಪ್ರಸ್ತಾವಿಸಲಾದ ಸರಕುಗಳು

	ಸರಕಿನ ಹೆಸರು	ಈಗಿರುವ ತೆರಿಗೆ ದರ (ಶೇಕಡ)	ಪ್ರಸ್ತಾವಿತ ತೆರಿಗೆ ದರ (ಶೇಕಡ)
೧	ಮದ್ಯ (ಹೊರದೇಶಗಳಿಂದ ಆಮದು ಮಾಡಿಕೊಂಡು ಮದ್ಯಗಳು, ಪೆನ್ನಿ, ಸಾರಾಯಿ ಮತ್ತು ಹೆಂಡ ಹೊರತುಪಡಿಸಿ)		
	(i) ಐ. ಎಂ. ಎಲ್.	ರಾಜ್ಯದೊಳಗೆ ತೆರಿ ಪಾವತಿ ಮಾಡಿದಂಥ ನಿಕಟ ಪೂರ್ವದ ಮಾರಾಟದ ವಹಿವಾಟು ವಜಾ ಮಾಡುವುದರೊಂದಿಗೆ ವಿವಿಧ ಹಂತಗಳಲ್ಲಿ ಶೇಕಡ ೩೫ರಷ್ಟು ಮತ್ತು ಕೊನೆಯ ಮಾರಾಟ ಹಂತದಲ್ಲಿ ಶೇಕಡ ೫ರಷ್ಟು	ರಾಜ್ಯದೊ ಗೆ ತೆರಿಗೆ ಪಾವತಿ ಮಾಡಿದಂಥ ನಿಕಟ ಪೂರ್ವದ ಮಾರಾಟದ ವಹಿವಾಟು ವಜಾ ಮಾಡುವುದರೊಂದಿಗೆ ವಿವಿಧ ಹಂತಗಳಲ್ಲಿ ಶೇಕಡ ೪೫ ರಷ್ಟು ಮತ್ತು ಕೊನೆಯ ಮಾರಾಟ ಹಂತದಲ್ಲಿ ಶೇಕಡ ೫ರಷ್ಟು
	(ii) ಬಿಯರ್	ಮೊದಲ ಹಂತದಲ್ಲಿ ಶೇಕಡ ೩೬ ರಷ್ಟು ಮತ್ತು ಕೊನೆಯ ಮಾರಾಟದ ಹಂತದಲ್ಲಿ ಶೇಕಡ ೪ ರಷ್ಟು	ಅದೇ
೨	ಸಾರಾಯಿ	೧೩	೨೦
೩	ವಿಮಾನ ಇಂಧನವೂ ಸೇರಿದಂತೆ ಪೆಟ್ರೋಲ್	೧೮	೧೯
೪	ಪೆಟ್ರೋಲ್ ಮತ್ತು ವಿಮಾನ ಇಂಧನವನ್ನು ಹೊರತುಪಡಿಸಿ ಡೀಸಲ್ ಕೂಡ ಸೇರಿದಂತೆ ಮೋಟಾರು ಸ್ಪಿರಿಟ್	೧೮	೧೯
೫	ಹಿಂಡಿ	೩	೫
೬	ಪ್ರಸಾಧನ ವಸ್ತುಗಳು (ಸಾಬೂನು ಬಿಟ್ಟು)	೧೩	೧೫
೭	ಕಚ್ಚಾ ಹರಿ ರೇಷ್ಮೆ ಅಥವಾ ಹೊಸೆದ ರೇಷ್ಮೆ)	ಇಲ್ಲ	೪

೮ ಚಿನ್ನ ಮತ್ತು ಬೆಳ್ಳಿ ವಸ್ತುಗಳು		
(i) ಅಮೂಲ್ಯ ರತ್ನಗಳನ್ನು ಕೊಡಿಸಿದ್ದು	೪	೮
(ii) ಇತರೆ	೨	೪
೯ ಕೃತಕ ಅಥವಾ ಸಿಂಥೆಟಿಕ್ ಫೈಬರ್‌ಗಳ ಮತ್ತು ಫೈಬರ್ ಯಾರ್ನ್‌ಗಳು.	೨	೪
೧೦ ಕಥಾ ಚಿತ್ರಗಳು (ಗುತ್ತಿಗೆ)	ಇಲ್ಲ	೫
೧೧ ಅಲ್ಯೂಮಿನಿಯಂ ವಸ್ತುಗಳು ಎಂದರೆ.—		
(i) ಅಲ್ಯೂಮಿನಿಯಂ, ಸರಳುಗಳು (ಸುರುಳಿ ಆಕಾರ ಹಾಗೂ ನೇರ ಉದ್ದಗಳಲ್ಲಿ ಕಂಬಿಗಳು, ಗುಂಡು ಕಂಬಿ, ಚೌಕಾಕೃತಿ, ಚಪ್ಪಟೆ, ಅಷ್ಟಕೋನಾಕೃತಿ, ಷಟ್ ಕೋನಾಕೃತಿ.)	೬	೮
(ii) ಕೊಳವೆ ಫಿಟಿಂಗ್‌ಗಳು ಸೇರಿದಂತೆ ಎಲ್ಲಾ ವ್ಯಾಸ ಮತ್ತು ಉದ್ದದ ಅಲ್ಯೂಮಿನಿಯಂ ಕೊಳವೆಗಳು (ಗುಂಡು ಕೊಳವೆ ಮತ್ತು ಚೌಕಾಕೃತಿ ಕೊಳವೆ)	೬	೮
(iii) ಅಲ್ಯೂಮಿನಿಯಂ ತಂತಿ ಕಂಬಿಗಳು ಮತ್ತು ರೋಲ್ ಮಾಡಿದ ಅಥವಾ ಡ್ರಾ ಮಾಡಿದ ತಂತಿಗಳು.	೬	೮
(iv) ಅಲ್ಯೂಮಿನಿಯಂ ಸ್ಟ್ರಕ್ಚರ್‌ಗಳು (ಆ್ಯಂಗಲ್ಸ್ ಜಾಯಿಂಟ್ಸ್, ಚಾನಲ್ಸ್, ಟೀಸ್, ಶೆಲ್ಫ್ ಫೈಲಿಂಗ್ ಸೆಕ್ಷನ್ಸ್, ಜಡ್–ಸೆಕ್ಷನ್ಸ್ ಅಥವಾ ಯಾವುದೇ ಇತರ ಎಕ್ಸ್‌ಟ್ರೂಡೆಟ್ ಸೆಕ್ಷನ್‌ಗಳು)	೬	೮
೧೨ ತಾಮ್ರ, ಎಂದರೆ:—		
(i) ತಾಮ್ರದ ವರ್ತುಲಗಳು ಶೀಟು ಮತ್ತು ಸ್ಟ್ರಿಪ್ಸ್	೮	೧೦
(ii) ತಾಮ್ರದ ಇನ್‌ಗಾಟ್ಸ್ ಮತ್ತು ಇನ್ಸುಲೇಟೆಡ್ ವೈರ್ ಬಿಟ್ಟು ತಾಮ್ರದ ತಂತಿ.	೮	೧೦

ಅನುಬಂಧ — ೪

ವೃತ್ತಿ ತೆರಿಗೆ ಪಾವತಿಯಿಂದ ವಿನಾಯಿತಿ ನೀಡಲು ಪ್ರಸ್ತಾವಿಸಲಾದ ವ್ಯಕ್ತಿಗಳ ವರ್ಗ

(ಪ್ಯಾರಾ ೬೮ ನೋಡಿ)

ಕ್ರಮ ಸಂಖ್ಯೆ	ಅನುಸೂಚಿಯ ಕ್ರಮಸಂಖ್ಯೆ	ವ್ಯಕ್ತಿಗಳ ವರ್ಗಗಳು
೧	೨	೩
೧.	೩	ಆಯುರ್ವೇದ, ಹೋಮಿಯೋಪಥಿ ಮತ್ತು ಯುನಾನಿ ವೈದ್ಯ ಪದ್ಧತಿಗಳಲ್ಲಿ ವೈದ್ಯ ವೃತ್ತಿ ನಡೆಸುವವರು.
೨.	೨ಎ (ii) (iii), (iv) ಮತ್ತು (v)	ವರ್ಷಕ್ಕೆ ೧೮,೦೦೦ ರೂಪಾಯಿಗಿಂತ ಕಡಿಮೆ ವರಮಾನವುಳ್ಳ ೧೯೩೮ರ ವಿಮಾ ಅಧಿನಿಯಮದ ಮೇರೆಗೆ ನೋಂದಾಯಿಸಿದ ಅಥವಾ ಲೈಸೆನ್ಸ್ ಪಡೆದ ಏಜೆಂಟರು, ಸರ್ವೆಯರುಗಳು ಅಥವಾ ನಷ್ಟ ನಿರ್ಧರಣೆ ಮಾಡುವವರು.
೩.	೮(ಬಿ)	ಚಲನಚಿತ್ರ ಉದ್ಯಮದಲ್ಲಿ ನಿರತರಾದ ಕಿರಿಯ ಕಲಾವಿದರು, ಪ್ರೊಡಕ್ಷನ್ ಮ್ಯಾನೇಜರುಗಳು, ಸಹಾಯಕ ನಿರ್ದೇಶಕರುಗಳು, ಸಹಾಯಕ ಕ್ಯಾಮರಾಮೆನ್, ಸಹಾಯಕ ಧ್ವನಿ ಮುದ್ರಕರು, ಸಹಾಯಕ ಸಂಕಲನಕಾರರು, ಸಂಗೀತಗಾರರು ಮತ್ತು ನೃತ್ಯಗಾರರು.
೪		೧೯೫೭ರ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ ಮೇರೆಗೆ ನೋಂದಾಯಿಸಲ್ಪಟ್ಟು ವರ್ಷಕ್ಕೆ ಒಂದು ಲಕ್ಷ ರೂಪಾಯಿಗಿಂತ ಕಡಿಮೆ ವಹಿವಾಟನ್ನು ಹೊಂದಿರುವ ವ್ಯಾಪಾರಿಗಳು.

ಅನುಬಂಧ–೫

(ಪ್ಯಾರಾ ೬೮ ನೋಡಿ)

ಏರಿದ ದರದ ವೃತ್ತಿ ತೆರಿಗೆಯನ್ನು ವಿಧಿಸಲು ಪ್ರಸ್ತಾವಿಸಲಾದ ವ್ಯಕ್ತಿ ವರ್ಗಗಳು

ಕ್ರಮ ಸಂಖ್ಯೆ	ಅನುಸೂಚಿಯ ಕ್ರಮ ಸಂಖ್ಯೆ	ವ್ಯಕ್ತಿಗಳ ವರ್ಗಗಳು	ಈಗಿರುವ ದರ	ಪ್ರಸ್ತಾವಿತ ದರ
೧	೨	೩	೪	೫
		ಭಾಗ–I ವೇತನ ಪಡೆಯುವ ವರ್ಗ		
೧	೧	ಸಂದರ್ಭಾನುಸಾರ ಈ ಮುಂದಿನಂತೆ ವೇತನ ಅಥವಾ ಮಜೂರಿ ಅಥವಾ ಅವೆರಡನ್ನು ಪಡೆಯುವವರಿಗೆ		
		ಎ) ೧೫೦೦ ರೂಪಾಯಿಗಳಿಗಿಂತ ಕಡಿಮೆಯಲ್ಲದ ಆದರೆ ೨೦೦೦ ರೂಪಾಯಿಗಳಿಗಿಂತ ಕಡಿಮೆ ವೇತನ ಪಡೆಯುವವರು	ಇಲ್ಲ	ತಿಂಗಳಿಗೆ ೧೦ ರೂಪಾಯಿ
		ಬಿ) ೨೦೦೦ ರೂಪಾಯಿಗಳಿಗಿಂತ ಕಡಿಮೆಯಲ್ಲದ ಆದರೆ ೪೦೦೦ ರೂಪಾಯಿಗಳಿಗಿಂತ ಕಡಿಮೆ ವೇತನ ಪಡೆಯುವವರು	ತಿಂಗಳಿಗೆ ೨೦ರೂಪಾಯಿ	ತಿಂಗಳಿಗೆ ೩೦ರೂಪಾಯಿ
		ಸಿ) ೪೦೦೦ ರೂಪಾಯಿಗಳಿಗಿಂತ ಕಡಿಮೆಯಲ್ಲದ ವೇತನ ಪಡೆಯುವವರು	ತಿಂಗಳಿಗೆ ೨೨ರೂಪಾಯಿ	ತಿಂಗಳಿಗೆ ೪೦ರೂಪಾಯಿ
		ಭಾಗ–II ವ್ಯಾಪಾರಿ ವರ್ಗ		
೨	೬	ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, ೧೯೫೭ರ ಮೇರೆಗೆ ನೋಂದಾಯಿತರಾದ ಅಥವಾ ನೋಂದಾಯಿತರಾಗಲು ಬದ್ಧರಾದ ಮತ್ತು ಈ ಕೆಳಗಿನಂತೆ ಒಟ್ಟು ವಾರ್ಷಿಕ ವಹಿವಾಟುವನ್ನು ಹೊಂದಿರುವ ವ್ಯಾಪಾರಿಗಳು		
		ಎ) ಎರಡೂವರೆ ಲಕ್ಷಕ್ಕಿಂತ ಕಡಿಮೆಯಲ್ಲದ ಆದರೆ ೧೦ ಲಕ್ಷ ರೂಪಾಯಿಗಳಿಗಿಂತ ಕಡಿಮೆ ವಹಿವಾಟು	ವರ್ಷಕ್ಕೆ ೨೫೦ರೂಪಾಯಿ	ವರ್ಷಕ್ಕೆ ೫೦೦ರೂಪಾಯಿ
		ಬಿ) ೧೦ ಲಕ್ಷ ರೂಪಾಯಿಗಳಿಗಿಂತ ಕಡಿಮೆಯಲ್ಲದ ವಹಿವಾಟು	ವರ್ಷಕ್ಕೆ ೨೫೦ರೂಪಾಯಿ	ವರ್ಷಕ್ಕೆ ೧೦೦೦ರೂಪಾಯಿ
		ಭಾಗ–III ಇತರ ವರ್ಗ		
೩	೨(ಎ)	ಸಾಲಿಸಿಟರುಗಳು ಮತ್ತು ನೋಟರಿ ಪಬ್ಲಿಕ್‌ಗಳು ಸೇರಿದಂತೆ ಲೀಗಲ್ ಪ್ರಾಕ್ಟೀಶನರುಗಳು		
	(ಬಿ)	ವೈದ್ಯಕೀಯ ಸಲಹೆಗಾರರೂ ಸೇರಿದಂತೆ ವೈದ್ಯ ವೃತ್ತಿಗರು (ಆಯುರ್ವೇದ ಹೋಮಿಯೋಪತಿ, ಮತ್ತು ಯುನಾನಿ ವೈದ್ಯಪದ್ಧತಿಯ		

೧	೨		೩
	ವೃತ್ತಿಗರನ್ನು ಬಿಟ್ಟು) ದಂತ ವೈದ್ಯರು, ರೇಡಿಯೋಲಾಜಿಸ್ಟ್, ಪ್ಯಾಥ್ಯಾಲೋಜಿಸ್ಟ್, ಹಾಗೂ ಪ್ಯಾರಾ ಮೆಡಿಕಲ್ ಸ್ವರೂಪದ ಇದೇ ಬಗೆ ವೃತ್ತಿ ಅಥವಾ ಕಸಬನ್ನು ನಡೆಸುತ್ತಿರುವವರು:		
(ಸಿ) (ಬಿ)	ಬಾಬಿನಲ್ಲಿ ಹೇಳಿರುವವರನ್ನು ಬಿಟ್ಟು ಆದರೆ ವಾಸ್ತು ಶಿಲ್ಪಿಗಳು. ಇಂಜಿನಿಯರುಗಳು, ಆರ್. ಸಿ.ಸಿ. ಸಲಹೆಗಾರರುಗಳು ಪ್ಲಂಬರುಗಳು ತೆರಿಗೆ ಸಲಹೆಗಾರರುಗಳು ಮ್ಯಾನೇಜ್‌ಮೆಂಟ್ ಸಲಹೆಗಾರರುಗಳೂ ಸೇರಿದಂತೆ ತಾಂತ್ರಿಕ ಮತ್ತು ವೃತ್ತಿ ಸಲಹೆಗಾರರು		
ಎ.	ಬೆಂಗಳೂರು ನಗರ ಸಮಂಚ್ಚಯ ಅಥವಾ ಜಿಲ್ಲಾ ಕೇಂದ್ರ ಪಟ್ಟಣಗಳ ಪುರಸಭಾ ಮಿತಿಯೊಳಗೆ ಬರುವ ಮತ್ತು ಯಾರ ವೃತ್ತಿ ಅವಧಿಯು ಈ ಕೆಳಗಿನಂತಿದೆಯೋ ಅವರಿಗೆ:–		
(ii)	ಎರಡು ವರ್ಷಗಳು ಅಥವಾ ಅದಕ್ಕಿಂತ ಹೆಚ್ಚು ಅವಧಿ ಆದರೆ ಐದು ವರ್ಷಗಳಿಗಿಂತ ಕಡಿಮೆ.	ವರ್ಷಕ್ಕೆ ೧೫೦ ರೂಪಾಯಿ	ವರ್ಷಕ್ಕೆ ೩೦೦ ರೂಪಾಯಿ
(iii)	ಐದು ವರ್ಷಗಳು ಅಥವಾ ಅದಕ್ಕಿಂತ ಹೆಚ್ಚು ಅವಧಿ	ವರ್ಷಕ್ಕೆ ೨೫೦ ರೂಪಾಯಿ	ವರ್ಷಕ್ಕೆ ೫೦೦ ರೂಪಾಯಿ
ಬಿ.	ರಾಜ್ಯದ ಇನ್ನಾವುದೇ ಪ್ರದೇಶದಲ್ಲಿ		
(ii)	ಎರಡು ಅಥವಾ ಅದಕ್ಕೂ ಹೆಚ್ಚು ವರ್ಷಗಳು ಆದರೆ ೫ ವರ್ಷಗಳಿಗಿಂತ ಕಡಿಮೆ	ವರ್ಷಕ್ಕೆ ೫೦ ರೂಪಾಯಿ	ವರ್ಷಕ್ಕೆ ೧೦೦ ರೂಪಾಯಿ
(iii)	ಐದು ಅಥವಾ ಅದಕ್ಕೂ ಹೆಚ್ಚು ವರ್ಷಗಳು ಆದರೆ ೧೦ ವರ್ಷಗಳಿಗಿಂತ ಕಡಿಮೆ	ವರ್ಷಕ್ಕೆ ೧೦೦ ರೂಪಾಯಿ	ವರ್ಷಕ್ಕೆ ೨೦೦ ರೂಪಾಯಿ
(iv)	ಹತ್ತು ವರ್ಷಗಳು ಅಥವಾ ಅದಕ್ಕೂ ಹೆಚ್ಚು	ವರ್ಷಕ್ಕೆ ೨೫೦ ರೂಪಾಯಿ	ವರ್ಷಕ್ಕೆ ೩೦೦ ರೂಪಾಯಿ
೪ ೨(ಸಿ)	ಚಾರ್ಟರ್ಡ್ ಅಕೌಂಟೆಂಟುಗಳು ಮತ್ತು ಆಕ್ಚುಯರಿಗಳು ಅವರ ವೃತ್ತಿ ಅವಧಿಯು		
(i)	ಎರಡು ವರ್ಷಗಳಿಗಿಂತ ಕಡಿಮೆ ಇಲ್ಲವೆ ಐದು ವರ್ಷಗಳಿಗಿಂತ ಕಡಿಮೆ ಇದ್ದರೆ	ವರ್ಷಕ್ಕೆ ೧೫೦ ರೂಪಾಯಿ	ವರ್ಷಕ್ಕೆ ೫೦೦ ರೂಪಾಯಿ
(ii)	ಐದು ವರ್ಷಗಳಿಗಿಂತ ಕಡಿಮೆ ಇರದಿದ್ದರೆ	ವರ್ಷಕ್ಕೆ ೨೫೦ ರೂಪಾಯಿ	ವರ್ಷಕ್ಕೆ ೨೫೦೦ ರೂಪಾಯಿ
೫ ೨ ಎ.	೧೯೩೮ರ ವಿಮಾ ಅಧಿನಿಯಮ (೧೯೩೮ರ ಕೇಂದ್ರಾಧಿನಿಯಮ ೪)ರ ಮೇರೆಗೆ ನೊಂದಾಯಿತರಾದ ಅಥವಾ ಲೈಸೆನ್ಸ್ ಪಡೆದ ಹಾಗೂ ಯಾರ ವಾರ್ಷಿಕ ವರಮಾನ ೧೮,೦೮೦ ರೂಪಾಯಿಗಳಿಗಿಂತ ಕಡಿಮೆ ಇರದ ಮುಖ್ಯ ಏಜೆಂಟರು, ಪ್ರಧಾನ ಏಜೆಂಟರು ವಿಶೇಷ ಏಜೆಂಟರು ಮತ್ತು ಸಮೀಕ್ಷಕರು ಅಥವಾ ನಷ್ಟ ನಿರ್ಧರಣೆ ಮಾಡುವವರು.	ವರ್ಷಕ್ಕೆ ೨೪೦ ರೂಪಾಯಿ	ವರ್ಷಕ್ಕೆ ೫೦೦ ರೂಪಾಯಿ

೧	೨	೩	೪	೫
೬	೪	ಭದ್ರತಾ ಕರಾರುಗಾರರ (ವಿನಿಯಮನ) ಅಧಿನಿಯಮ ೧೯೫೬–ಇದರ ಮೇರೆಗೆ ಮಾನ್ಯತೆ ಪಡೆದ ಸ್ಟಾಕ್ ಎಕ್ಸ್‌ಚೇಂಜ್‌ಗಳ ಸದಸ್ಯರು	ವರ್ಷಕ್ಕೆ ೨೫೦ ರೂಪಾಯಿ	ವರ್ಷಕ್ಕೆ ೨೫೦೦ ರೂಪಾಯಿ
೭	೫(ಎ)	ಎಸ್ಟೇಟ್ ಏಜೆಂಟರುಗಳು ಅಥವಾ ಬ್ರೋಕರುಗಳು	ವರ್ಷಕ್ಕೆ ೨೫೦ ರೂಪಾಯಿ	ವರ್ಷಕ್ಕೆ ೫೦೦ ರೂಪಾಯಿ
	(ಸಿ)	ಉಪ–ಬಾಬು (ಬಿ)ಯಲ್ಲಿ ನಿರ್ದಿಷ್ಟಪಡಿಸಿದವರಲ್ಲದ ಕಟ್ಟಡ ಕರಾರುಗಾರರು	ವರ್ಷಕ್ಕೆ ೨೫೦ ರೂಪಾಯಿ	ವರ್ಷಕ್ಕೆ ೫೦೦ ರೂಪಾಯಿ
೮	೬(ಎ)	ಟರ್ಫ್ ಕ್ಲಬ್ ಲೈಸೆನ್ಸ್ ಪಡೆದ ಪಂದ್ಯದ ಕುದುರೆ ಮಾಲೀಕರು ಮತ್ತು ತರಬೇತಿದಾರರು	ವರ್ಷಕ್ಕೆ ೨೫೦ ರೂಪಾಯಿ	ವರ್ಷಕ್ಕೆ ೨,೫೦೦ ರೂಪಾಯಿ
೯	೭(ಎ)	ಟರ್ಫ್ ಕ್ಲಬ್ ಲೈಸೆನ್ಸ್ ಪಡೆದ ಜಾಕಿಗಳು	ವರ್ಷಕ್ಕೆ ೨೫೦ ರೂಪಾಯಿ	ವರ್ಷಕ್ಕೆ ೫೦೦ ರೂಪಾಯಿ
೧೦	೮	ಚಲನಚಿತ್ರೋದ್ಯಮದಲ್ಲಿನ ಸ್ವಂತ ಉದ್ಯೋಗಿಗಳು ಈ ಮುಂದಿನಂತೆ: ನಿರ್ದೇಶಕರು, ನಟರು ಮತ್ತು ನಟಿಯರು (ಕಿರಿಯ ಕಲಾವಿದರನ್ನು ಬಿಟ್ಟು) ಹಿನ್ನೆಲೆ ಗಾಯಕರು, ಕ್ಯಾಮರಾಮೆನ್ ಧ್ವನಿಮುದ್ರಕರು, ಸಂಕಲನಗಾರರು, ಸ್ಥಿರ ಚಿತ್ರ ಛಾಯಗ್ರಾಹಕರು	ವರ್ಷಕ್ಕೆ ೨೫೦ ರೂಪಾಯಿ	ವರ್ಷಕ್ಕೆ ೫೦೦ ರೂಪಾಯಿ
೧೧	೧೦	ಕಾರ್ಖಾನೆಗಳ ಅಧಿನಿಯಮ ೧೯೪೮ರ ಮೇರೆಗೆ ಪರಿಭಾಷಿಸಲಾದ ಕಾರ್ಖಾನೆಗಳ ಅನುಭೋಗದಾರರು	ವರ್ಷಕ್ಕೆ ೨೫೦ ರೂಪಾಯಿ	ವರ್ಷಕ್ಕೆ ೫೦೦ ರೂಪಾಯಿ
೧೨	೧೧	ಕರ್ನಾಟಕ ಅಂಗಡಿಗಳು ಮತ್ತು ಕಾರ್ಯಸಂಸ್ಥೆಗಳ ಅಧಿನಿಯಮದ ಮೇರೆಗೆ ಪರಿಭಾಷಿಸಲಾದ ಕಾರ್ಯಸಂಸ್ಥೆಗಳ ನಿಯೋಜಕರು ಆ ಕಾರ್ಯಸಂಸ್ಥೆಗಳಲ್ಲಿ		
		(ii) ಐವರನ್ನು ಮೀರದ ನೌಕರರು ಕೆಲಸದ ಮೇಲಿದ್ದರೆ	ವರ್ಷಕ್ಕೆ ೫೦ ರೂಪಾಯಿ	ವರ್ಷಕ್ಕೆ ೧೦೦ ರೂಪಾಯಿ
		(iii) ಐದಕ್ಕಿಂತ ಹೆಚ್ಚು ಮಂದಿ ಆದರೆ ಹತ್ತನ್ನು ಮೀರದ ನೌಕರರು ಕೆಲಸದ ಮೇಲಿದ್ದರೆ	ವರ್ಷಕ್ಕೆ ೧೫೦ ರೂಪಾಯಿ	ವರ್ಷಕ್ಕೆ ೩೦೦ ರೂಪಾಯಿ
		(iv) ಹತ್ತಕ್ಕಿಂತ ಹೆಚ್ಚು ಮಂದಿ ನೌಕರರು ಕೆಲಸದ ಮೇಲಿದ್ದರೆ	ವರ್ಷಕ್ಕೆ ೨೫೦ ರೂಪಾಯಿ	ವರ್ಷಕ್ಕೆ ೫೦೦ ರೂಪಾಯಿ
೧೩	೧೨	ಆಯಿಲ್ ಪಂಪ್‌ಗಳು ಮತ್ತು ಸರ್ವೀಸ್ ಸ್ಟೇಷನ್ನುಗಳ ಮಾಲೀಕರು	ವರ್ಷಕ್ಕೆ ೨೫೦ ರೂಪಾಯಿ	ವರ್ಷಕ್ಕೆ ೫೦೦ ರೂಪಾಯಿ
೧೪	೧೩(ಬಿ)	೧೩(ಎ) ಎದುರಿನಲ್ಲಿ ಹೇಳಿರುವ ವ್ಯಕ್ತಿಗಳಲ್ಲದ ಲೈಸೆನ್ಸು ಪಡೆದ ವಿದೇಶಿ ಮದ್ಯದ ಮಾರಾಟಗಾರರು ಮತ್ತು ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ ಅಧಿನಿಯಮ ೧೯೬೧ರಲ್ಲಿ ಪರಿಭಾಷಿಸಲಾದ ೨೦ಕ್ಕೂ ಕಡಿಮೆ ಕೊಠಡಿಗಳಿರುವ ವಸತಿ ಹೋಟೆಲುಗಳ ಮತ್ತು ಥಿಯೇಟರುಗಳ ನಿಯೋಜಕರು	ವರ್ಷಕ್ಕೆ ೨೫೦ ರೂಪಾಯಿ	ವರ್ಷಕ್ಕೆ ೫೦೦ ರೂಪಾಯಿ

೧	೨	೩	೪	೫
೧೫	೧೩(ಬಿ)	೨೦ಕ್ಕಿಂತ ಕಡಿಮೆ ಕೊಠಡಿಗಳಿಲ್ಲದ ವಸತಿ ಹೋಟೆಲುಗಳ ಮತ್ತು ವಸತಿ ಗೃಹಗಳ ಮಾಲೀಕರು	ವರ್ಷಕ್ಕೆ ೨೫೦ ರೂಪಾಯಿ	ವರ್ಷಕ್ಕೆ ೨೫೦೦ ರೂಪಾಯಿ
೧೬	೧೪	ಮೋಟಾರು ವಾಹನ ಅಧಿನಿಯಮ ೧೯೩೯ರ ಮೇರೆಗೆ ನೀಡಿದ ಸಾರಿಗೆ ವಾಹನ ಪರ್ಮಿಟ್ಟು ಹೊಂದಿರುವವರು (ಆಟೋರಿಕ್ಷಾಗಳನ್ನು ಬಿಟ್ಟು)	ವರ್ಷಕ್ಕೆ ೨೫೦ ರೂಪಾಯಿ	ವರ್ಷಕ್ಕೆ ೫೦೦ ರೂಪಾಯಿ
೧೭	೧೫(ಬಿ)	ಕರ್ನಾಟಕ ಲೇವಾದೇವಿಗಾರರ ಅಧಿನಿಯಮ ೧೯೬೧ರ ಮೇರೆಗೆ ಲೈಸೆನ್ಸು ಪಡೆದ ಮತ್ತು ವರ್ಷಕ್ಕೆ ೧೦ ಲಕ್ಷ ರೂಪಾಯಿಗಳಿಗಿಂತಲೂ ಕಡಿಮೆ ಹಣವನ್ನು ಸಾಲಕೊಡುವ ಲೇವಾದೇವಿಗಾರರು	ವರ್ಷಕ್ಕೆ ೨೫೦ ರೂಪಾಯಿ	ವರ್ಷಕ್ಕೆ ೫೦೦ ರೂಪಾಯಿ
೧೮	೧೬	ಚಿಟ್ ಫಂಡ್‌ಗಳನ್ನು ನಡೆಸುತ್ತಿರುವ ವ್ಯಕ್ತಿಗಳು ಅಥವಾ ಸಂಸ್ಥೆಗಳು	ವರ್ಷಕ್ಕೆ ೨೫೦ ರೂಪಾಯಿ	ವರ್ಷಕ್ಕೆ ೫೦೦ ರೂಪಾಯಿ
೧೯	೧೭	ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮದ ಮೇರೆಗೆ ನೋಂದಾಯಿತವಾದ ಹಾಗೂ ಯಾವುದೇ ವೃತ್ತಿ ವ್ಯಾಪಾರ ಅಥವಾ ಕಸಬಿನಲ್ಲಿ ನಿರತವಾದ ಸಹಕಾರ ಸಂಘಗಳು		
		(iii) ಜಿಲ್ಲಾ ಮಟ್ಟದ ಸಂಘಗಳು	ವರ್ಷಕ್ಕೆ ೧೫೦ ರೂಪಾಯಿ	ವರ್ಷಕ್ಕೆ ೩೦೦ ರೂಪಾಯಿ
		(iv) ತಾಲ್ಲೂಕು ಮಟ್ಟದ ಸಂಘಗಳು	ವರ್ಷಕ್ಕೆ ೧೦೦ ರೂಪಾಯಿ	ವರ್ಷಕ್ಕೆ ೨೦೦ ರೂಪಾಯಿ
೨೦	೨೦(ಎ)	ಕರ್ನಾಟಕ ಕೃಷಿ ವರಮಾನ ತೆರಿಗೆ ಅಧಿನಿಯಮ, ೧೯೫೭ರಲ್ಲಿ ಪರಿಭಾಷಿಸಲಾದ ಪ್ಲಾಂಟೇಷನ್ ಬೆಳೆಗಳನ್ನು ಬೆಳೆಯುತ್ತಿರುವ ಕೃಷಿಕರು	ವರ್ಷಕ್ಕೆ ೨೫೦ ರೂಪಾಯಿ	ವರ್ಷಕೆ ೫೦೦ ರೂಪಾಯಿ
೨೧	೨೦ ಬಿ	ಫೋಟೋ ಲ್ಯಾಬರೇಟರಿಗಳು ಫಿಲಂ, ಸಂಸ್ಕರಣ ಲ್ಯಾಬೋರೇಟರಿಗಳು ಮತ್ತು ಫೋಟೋ ಸ್ಟುಡಿಯೋಗಳು	ವರ್ಷಕ್ಕೆ ೨೫೦ ರೂಪಾಯಿ	ವರ್ಷಕ್ಕೆ ೫೦೦ ರೂಪಾಯಿ
೨೨	೨೦ಸಿ(ಬಿ)	ರೋಗಲಕ್ಷಣ ಪರೀಕ್ಷಾ ಪ್ರಯೋಗಾಲಯಗಳು, ಕ್ಷ-ಕಿರಣ ಕ್ಲಿನಿಕ್‌ಗಳು	ವರ್ಷಕ್ಕೆ ೨೫೦ ರೂಪಾಯಿ	ವರ್ಷಕ್ಕೆ ೫೦೦ ರೂಪಾಯಿ
೨೩	೨೦ಡಿ	ಬ್ಯೂಟಿ ಪಾರ್ಲರುಗಳು, ಡ್ರೈಕ್ಲೀನರುಗಳು ಮತ್ತು ಒಳಾಂಗಣ ಡೆಕೋರೇಟರುಗಳು	ವರ್ಷಕ್ಕೆ ೨೫೦ ರೂಪಾಯಿ	ವರ್ಷಕ್ಕೆ ೫೦೦ ರೂಪಾಯಿ
೨೪	೨೦ಇ(ಎ)	೨ ಇ (ಬಿ)ಯ ಅಡಿಯಲ್ಲಿ ಬರದಂಥ ಚಲನಚಿತ್ರ ವಿತರಕರು ಹಾಗೂ ಪ್ರವಾಸ ಏಜೆಂಟರುಗಳು	ವರ್ಷಕ್ಕೆ ೨೫೦ ರೂಪಾಯಿ	ವರ್ಷಕ್ಕೆ ೫೦೦ ರೂಪಾಯಿ
೨೫	೨೦ಎಫ್	ಪತ್ರಿಕೋದ್ಯಮಿಗಳು	ವರ್ಷಕ್ಕೆ ೨೫೦ ರೂಪಾಯಿ	ವರ್ಷಕ್ಕೆ ೫೦೦ ರೂಪಾಯಿ
೨೬	೨೧	ಮೇಲಿನ ಯಾವುದೇ ನಮೂದುಗಳಲ್ಲಿ ಹೇಳಿರುವ ವ್ಯಕ್ತಿಗಳಲ್ಲದ ಹಾಗೂ ರಾಜ್ಯ ಸರ್ಕಾರವು ಕಾಲದಿಂದ ಕಾಲಕ್ಕೆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸುವ ವೃತ್ತಿಗಳು, ವ್ಯಾಪಾರ, ಕಸುಬು ಅಥವಾ ನಿಯೋಜನೆಯಲ್ಲಿ ನಿರತರಾದ ವ್ಯಕ್ತಿಗಳು	ವರ್ಷಕ್ಕೆ ೨೫೦ ರೂಪಾಯಿ	ವರ್ಷಕ್ಕೆ ೫೦೦ ರೂಪಾಯಿ

ಅನುಬಂಧ—೬

ಜೂಜು ತೆರಿಗೆಯ ದರದ ಉದ್ದೇಶಿತ ಹೆಚ್ಚಳ

(ಪ್ಯಾರಾ ೭೩ ನೋಡಿ)

ಕ್ರಮ ಸಂಖ್ಯೆ	ತೆರಿಗೆಯ ಸ್ವರೂಪ	ಈಗಿನ ತೆರಿಗೆ ದರ	ಉದ್ದೇಶಿತ ತೆರಿಗೆ ದರ
೧.	ಜೂಜು ತೆರಿಗೆ :		
	(ಎ) ಆನ್‌ಕೋರ್ಸ್	ಶೇ. ೧೫	ಶೇ. ೨೦
	(ಬಿ) ಆಫ್ ಕೋರ್ಸ್	ಶೇ. ೧೦	ಶೇ. ೨೦
	(ಸಿ) ಜಿಂಖಾನ	ಶೇ. ೧೫	ಶೇ. ೨೦
೨.	ಟೋಟಲೈಸೇಟರ್ ತೆರಿಗೆ :		
	(ಎ) ಆನ್ ಕೋರ್ಸ್	ಶೇ. ೧೫	ಶೇ. ೨೦
	(ಬಿ) ಆಫ್ ಕೋರ್ಸ್	ಶೇ. ೧೦	ಶೇ. ೨೦
	(ಸಿ) ಜಿಂಖಾನ	ಶೇ. ೧೫	ಶೇ. ೨೦

ಅನುಬಂಧ—೭

(ಪ್ಯಾರಾ ೭೭)

ಲೈಸೆನ್ಸ್ ಶುಲ್ಕ ಪರಿಷ್ಕರಣೆ

	ಲೈಸೆನ್ಸ್ ಶುಲ್ಕದ ಬಗ್ಗೆ	ಈಗಿರುವ ತೆರಿಗೆ	ಪ್ರಸ್ತಾವಿತ ತೆರಿಗೆ
		(ರೂಪಾಯಿಗಳಲ್ಲಿ)	
ಎ)	ಕಾಕಂಬಿಯಿಂದ ಸ್ಪಿರಿಟ್ ತಯಾರಿಸುವ ಅಥವಾ ಕಾಕಂಬಿಯ ಸ್ಪಿರಿಟ್ ಅನ್ನು ಬಳಸುವ ಡಿಸ್ಟಿಲರಿಗಳಿಗೆ ಲೈಸೆನ್ಸ್ ಶುಲ್ಕ	೨,೦೦,೦೦೦	೫,೦೦,೦೦೦
ಬಿ)	ಕಾಕಂಬಿ ಆಧಾರಿತವಲ್ಲದ ಸ್ಪಿರಿಟ್ ಅನ್ನು ತಯಾರಿಸುವ ಡಿಸ್ಟಿಲರಿಗಳ ಲೈಸೆನ್ಸ್ ಶುಲ್ಕ	೫೦,೦೦೦	೧,೦೦,೦೦೦
ಸಿ)	ವೈನರಿ ಲೈಸೆನ್ಸ್ ಶುಲ್ಕ	೧,೦೦೦	೨೫,೦೦೦
ಡಿ)	ಬ್ರೀವರಿ ಲೈಸೆನ್ಸ್ ಶುಲ್ಕ	೧,೦೦,೦೦೦	೩,೦೦,೦೦೦
ಇ)	ಪ್ರತಿ ಪರ್ಮಿಟ್ಟಿಗೆ ಪರ್ಮಿಟ್ ಶುಲ್ಕ ಮತ್ತು ರೀವ್ಯಾಲಿಡೇಷನ್ ಶುಲ್ಕ	ಇಲ್ಲ	
ಎಫ್)	ಬಿಯರ್‌ನ ಚಿಲ್ಲರೆ ಮಾರಾಟಕ್ಕೆ ಲೈಸೆನ್ಸ್ ಶುಲ್ಕ	೧,೨೦೦	೧೦,೦೦೦
ಜಿ)	ಬಾರ್‌ನೊಂದಿಗೆ ನಡೆಸುತ್ತಿರುವ ಬಿಯರ್‌ನ ಚಿಲ್ಲರೆ ಮಾರಾಟದ ಲೈಸೆನ್ಸ್ ಶುಲ್ಕ	೧,೨೦೦	೫,೦೦೦
ಎಚ್)	ವೈನ್ ಅಂಗಡಿಯ ಲೈಸೆನ್ಸ್ ಫೀಜು	೫೦೦	೪,೦೦೦

ಅನುಬಂಧ—೮

(ಪ್ಯಾರಾ ೮೧ ನೋಡಿ)

I ಪರಿಷ್ಕರಿಸಲು ಉದ್ದೇಶಿಸಿರುವ ಸ್ಟಾಂಪ್ ಶುಲ್ಕ ವಿವರಣಾತ್ಮಕ ಪ್ರಕರಣಗಳು,

ಕ್ರಮ ಸಂಖ್ಯೆ	ಅನುಚ್ಛೇದ	ಲಿಖಿತಗಳ ಸಂಕ್ಷಿಪ್ತ ವಿವರ	ಈಗಿರುವ ಸ್ಟಾಂಪ್ ಶುಲ್ಕ	ಪ್ರಸ್ತಾವಿತ ಸ್ಟಾಂಪ್ ಶುಲ
೧	೨	೩	೪	೫
೧	೨(ಬಿ)	ಅಡ್ಮಿನಿಸ್ಟ್ರೇಷನ್ ಬಾಂಡ್	ರೂ. ೩೦	ರೂ. ೧೦೦
೨	೪	ಅಫಿಡವಿಟ್	ರೂ. ೫	ರೂ. ೧೦
೩	೧೪	ಲಿಖಿತಗಳ ರದ್ದಿಯಾತಿ	ರೂ. ೩೦	ರೂ. ೧೦೦
೪	೨೧	ಯಥಾನಕಲು ಅಥವಾ ಉದ್ಧೃತವೆಂದು ಪ್ರಮಾಣೀಕರಿಸಲಾದ		
	(೧) ೨೧(i)	ಉದ್ಧೃತ ಭಾಗದ ಪ್ರತಿ	ರೂ. ೩	ರೂ. ೫
	(೨) ೨೧(ii)		ರೂ. ೬	ರೂ. ೧೦
೫	೨೨(ಬಿ)	ಇದಿರು ಪ್ರತಿ ಅಥವಾ ದ್ವಿಪ್ರತಿ	ರೂ. ೬	ರೂ. ೩೦
೬	೨೩(ಬಿ)	ಕಸ್ಟಂಸ್ ಬಾಂಡ್	ರೂ. ೪೦	ರೂ. ೮೦
೭	೩೬	ನೋಟರಿಯಲ್ ಆಕ್ಟ್	ರೂ. ೫	ರೂ. ೧೦
೮	೪೧	ಪವರ್ ಆಫ್ ಅಟಾರ್ನಿ		
	(೧) ೪೧(ಎ)	ಒಂದೇ ವ್ಯವಹಾರಕ್ಕೆ ಸಂಬಂಧಿಸಿದಂತೆ ಒಂದು ಅಥವಾ ಹೆಚ್ಚು ದಸ್ತಾವೇಜುಗಳ ನೋಂದಣಿಯನ್ನು ಪಡೆಯುವ ಏಕಮಾತ್ರ ಉದ್ದೇಶಕ್ಕಾಗಿ ಅಥವಾ ಅಂತಹ ಒಂದು ಅಥವಾ ಹೆಚ್ಚು ದಸ್ತಾವೇಜುಗಳ ನಿರ್ವಹಣೆಯನ್ನು ಅಂಗೀಕರಿಸಲು ಬರೆದುಕೊಟ್ಟಿರುವಾಗ	ರೂ. ೧.೫೦	ರೂ. ೧೦
	(೨) ೪೧(ಬಿ)	ಮೇಲೆ ಖಂಡ(ಎ)ಯಲ್ಲಿ ಸೂಚಿಸಿರುವ ಪ್ರಕರಣವಲ್ಲದ ಒಂದು ಏಕಮಾತ್ರ ವ್ಯವಹರಣೆಯಲ್ಲಿ ಕಾರ್ಯ ನಿರ್ವಹಿಸಲು ಒಬ್ಬ ಅಥವಾ ಹೆಚ್ಚು ವ್ಯಕ್ತಿಗಳಿಗೆ ಅಧಿಕಾರ ನೀಡುವಾಗ	ರೂ. ೩	ರೂ. ೨೦

೧	೨	೩	೪	೫
	(೩) ೪೧(ಸಿ)	ಒಂದಕ್ಕಿಂತ ಹೆಚ್ಚು ವ್ಯವಹರಣೆಯಲ್ಲಿ ಅಥವಾ ಸಾಮಾನ್ಯವಾಗಿ ಸಂಯುಕ್ತವಾಗಿ ಹಾಗೂ ಪ್ರತ್ಯೇಕವಾಗಿ ಕಾರ್ಯನಿರ್ವಹಿಸಲು ಐದಕ್ಕಿಂತ ಹೆಚ್ಚಿಲ್ಲದ ವ್ಯಕ್ತಿಗಳಿಗೆ ಅಧಿಕಾರ ನೀಡುವಾಗ	ರೂ. ೨೨	ರೂ. ೧೦೦
	(೪) ೪೧(ಡಿ)	ಒಂದಕ್ಕಿಂತ ಹೆಚ್ಚು ವ್ಯವಹರಣೆಯಲ್ಲಿ ಅಥವಾ ಸಾಮಾನ್ಯವಾಗಿ ಸಂಯುಕ್ತವಾಗಿ ಹಾಗೂ ಪ್ರತ್ಯೇಕವಾಗಿ ಕಾರ್ಯನಿರ್ವಹಿಸಲು ಹತ್ತಕ್ಕಿಂತ ಹೆಚ್ಚಿಲ್ಲದ ವ್ಯಕ್ತಿಗಳಿಗೆ ಅಧಿಕಾರ ನೀಡುವಾಗ	ರೂ. ೪೧	ರೂ. ೨೦೦
	(೫) ೪೧(ಎಫ್)	ಇತರ ಯಾವುದೇ ಸಂದರ್ಭದಲ್ಲಿ	ರೂ. ೫	ರೂ. ೧೦೦
೯	೪೨	ಬಿಲ್ ಅಥವಾ ನೋಟ್‌ಗೆ ಪ್ರಸಾಕ್ಷ್ಯ	ರೂ. ೫	ರೂ. ೧೦
೧೦	೪೭(ಬಿ)	ಸೆಕ್ಯೂರಿಟಿ ಬಾಂಡು ಅಥವಾ ಅಡಮಾನ ಪತ್ರ	ರೂ. ೩೦	ರೂ. ೧೦೦
೧೧	೫೧(ಬಿ)	ಗುತ್ತಿಗೆಯನ್ನು ಬಿಟ್ಟುಕೊಡುವುದು	ರೂ. ೩೦	ರೂ. ೧೦೦
೧೨	೫೨	ವರ್ಗಾವಣೆ (ಪ್ರತಿಫಲ ಪಡೆದು ಅಥವಾ ಪ್ರತಿಫಲವಿಲ್ಲದೆ)		
	(೧) ೫೨(ಬಿ)	ಒಂದು ಬಾಂಡ್, ಅಡಮಾನ ಪತ್ರ ಅಥವಾ ವಿಮಾ ಪಾಲಿಸಿಯಿಂದ ಪಡೆದ ಯಾವುದೇ ಹಿತಾಸಕ್ತಿ ಬಗ್ಗೆ		
	(ii)	ಇತರ ಯಾವುದೇ ಸಂದರ್ಭದಲ್ಲಿ	ರೂ. ೩೦	ರೂ. ೧೦೦
	(೨) ೫೨(ಸಿ)	೧೯೬೩ರ ಅಡ್ಮಿನಿಸ್ಟ್ರೇಟರ್ ಜನರಲ್ ಅಧಿನಿಯಮದ ಪ್ರಕರಣ ೨೫ರ ಮೇರೆಗೆ ಒಂದು ಸ್ವತ್ತಿನ ಸಂಬಂಧದಲ್ಲಿ.	ರೂ. ೪೫	ರೂ. ೧೦೦
	(೩) ೫೨(ಡಿ)	ಯಾವುದೇ ಟ್ರಸ್ಟ್ ಆಸ್ತಿಯ ಸಂಬಂಧದಲ್ಲಿ ಒಬ್ಬ ಟ್ರಸ್ಟಿಯಿಂದ ಇನ್ನೊಬ್ಬ ಟ್ರಸ್ಟಿಗೆ ಅಥವಾ ಒಬ್ಬ ಟ್ರಸ್ಟಿಯಿಂದ ಒಬ್ಬ ಫಲಾನುಭವಿಗೆ	ರೂ. ೧೫	ರೂ. ೨೦೦
೧೩	(೧) ೫೪(ಎ)	ಟ್ರಸ್ಟ್—ಘೋಷಣೆ	ರೂ. ೯೦ (ಗರಿಷ್ಠ ಶುಲ್ಕ)	ರೂ. ೫೦೦ (ಗರಿಷ್ಠ ಶುಲ್ಕ)
	(೨) ೫೪(ಬಿ)	—ರದ್ದು	ರೂ. ೬೦ (ಗರಿಷ್ಠ ಶುಲ್ಕ)	ರೂ. ೨೦೦ (ಗರಿಷ್ಠ ಶುಲ್ಕ)

೧	೨	೩	೪	೫
II.	ಹಕ್ಕು ಪತ್ರಗಳ ಠೇವಣಾತಿ ಸಂಬಂಧಿಸಿದ ಒಪ್ಪಂದ (ಅನುಚ್ಛೇದ 6) :			
	ಅನುಚ್ಛೇದ ೬(೨) (ಎ) (i), (ii) ಮತ್ತು (iii)ರಲ್ಲಿನ ಸ್ಟಾಂಪ್ ಶುಲ್ಕದ ದರ ಈಗಿರುವ ಸ್ಲ್ಯಾಬ್ ಬದಲು ಸ್ಟಾಂಪ್ ಶುಲ್ಕದ ಈ ಮುಂದಿನ ಸ್ಲ್ಯಾಬ್ ಮತ್ತು ದರವನ್ನು ನಿಗದಿಪಡಿಸಲು ಪ್ರಸ್ತಾವಿಸಲಾಗಿದೆ :—			
	(ಎ) ಅಂತಹ ಸಾಲ ಅಥವಾ ಋಣವು ತಗಾದೆ ಮಾಡಿದಾಗ ಅಥವಾ ಒಪ್ಪಂದಕ್ಕೆ ಪುರಾವೆಯಾಗಿರುವ ಲಿಖಿತದ ದಿನಾಂಕದಿಂದ ಮೂರು ತಿಂಗಳ ತರುವಾಯ ಸಂದಾಯವಾಗಬೇಕಾಗಿದ್ದರೆ	ಒಂದನ್ನೇ ಬರೆಯಲಾಗಿದ್ದರೆ	ಎರಡರ ತಂಡದಲ್ಲಿ ಬರೆದಿದ್ದರೆ ತಂಡದ ಪ್ರತಿ ಭಾಗಕ್ಕೆ	ಮೂರರ ತಂಡದಲ್ಲಿ ಬರೆದಿದ್ದರೆ ತಂಡದ ಪ್ರತಿ ಭಾಗಕ್ಕೆ
		ರೂ. ಪೈ	ರೂ. ಪೈ.	ರೂ. ಪೈ.
	(i) ಸಾಲ ಅಥವಾ ಋಣದ ಮೊಬಲಗು ೫೦೦ ರೂಪಾಯಿಗಳನ್ನು ಮೀರಿಲ್ಲವಾದರೆ	೫.೦೦	೩.೦೦	೨.೦೦
	(ii) ಅದು ೫೦೦ ರೂಪಾಯಿಗಳನ್ನು ಮೀರಿದ್ದು ೧,೦೦೦ ರೂಪಾಯಿಗಳನ್ನು ಮೀರಿಲ್ಲವಾದರೆ	೧೦.೦೦	೫.೦೦	೩.೦೦
	(iii) ಅದು ೧೦೦೦ ರೂಪಾಯಿಗಳನ್ನು ಮೀರಿದ್ದು, ೫,೦೦೦ ರೂಪಾಯಿಗಳನ್ನು ಮೀರಿಲ್ಲವಾದರೆ	೫೦.೦೦	೨೫.೦೦	೨೦.೦೦
	(iv) ಅದು ೫೦೦೦ ರೂಪಾಯಿಗಳನ್ನು ಮೀರಿದ್ದು ೧೦,೦೦೦ ರೂಪಾಯಿಗಳನ್ನು ಮೀರಿಲ್ಲವಾದರೆ	೧೦೦.೦೦	೫೦.೦೦	೩೦.೦೦
	(v) ಅದು ೧೦,೦೦೦ ರೂಪಾಯಿಗಳನ್ನು ಮೀರಿದ್ದರೆ, ೧೦,೦೦೦ ರೂಪಾಯಿಗಳನ್ನು ಮೀರಿದ ಪ್ರತಿ ಹೆಚ್ಚುವರಿ ೫,೦೦೦ ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ	೫೦.೦೦	೨೫.೦೦	೨೦.೦೦
III.	ಬಾಂಡ್ ಮೇಲಿನ ಸ್ಟಾಂಪ್ ಶುಲ್ಕದ ದರ (ಅನುಚ್ಛೇದ ೧೨) :			
	ಅನುಚ್ಛೇದ ೧೨ರಲ್ಲಿ ಸ್ಟಾಂಪ್ ಶುಲ್ಕದ ಈಗಿರುವ ಸ್ಲ್ಯಾಬ್ ಹಾಗೂ ದರದ ಬದಲು ಈ ಮುಂದಿನ ಸ್ಟಾಂಪ್ ಶುಲ್ಕದ ಸ್ಲ್ಯಾಬ್ ಮತ್ತು ದರವನ್ನು ನಿಗದಿಪಡಿಸಲು ಪ್ರಸ್ತಾವಿಸಲಾಗಿದೆ :			

ಪ್ರಕರಣ (೨)(೧)(ಎ)ಯಲ್ಲಿ ಪರಿಭಾಷಿಸಲಾದ ಈ ಅಧಿನಿಯಮದಲ್ಲಿ ಅಥವಾ ೧೯೫೮ರ ಕರ್ನಾಟಕ ನ್ಯಾಯಾಲಯ ಶುಲ್ಕಗಳು ಮತ್ತು ವ್ಯಾಜ್ಯದ ಮೌಲ್ಯ ನಿರ್ಣಯ ಅಧಿನಿಯಮದಲ್ಲಿ ಬೇರೆ ರೀತಿಯಲ್ಲಿ ಉಪಬಂಧಿಸಿಲ್ಲದ ೧೨ ಬಾಂಡ್.

(ಎ) ಭದ್ರತೆ ಪಡೆದ ಮೊಬಲಗು ಅಥವಾ ಮೌಲ್ಯ ೧,೦೦೦ ರೂಪಾಯಿಗಳನ್ನು ಮೀರಿಲ್ಲವಾದರೆ	ಪ್ರತಿ ಒಂದು ನೂರು ರೂಪಾಯಿಗೆ ಅಥವಾ ಅದರ ಭಾಗಕ್ಕೆ ಐದು ರೂಪಾಯಿ.
(ಬಿ) ಅದು ೧,೦೦೦ ರೂ.ಗಳನ್ನು ಮೀರಿದ್ದರೆ	ಮೊದಲನೇ ೧,೦೦೦ ರೂಪಾಯಿಗೆ ಖಂಡ (ಎ)ಯಲ್ಲಿರುವಷ್ಟೇ ಶುಲ್ಕ ಮತ್ತು ೧,೦೦೦ ರೂಪಾಯಿಗಳನ್ನು ಮೀರಿದ ಪ್ರತಿ ೫೦೦ ರೂಪಾಯಿಗೆ ಅಥವಾ ಅದರ ಭಾಗಕ್ಕೆ ರೂ. ೨೫.

IV ಬಿಡುಗಡೆ ಪತ್ರ (ಅನುಚ್ಛೇದ 45) ;

ಈಗಿರುವ ಅನುಚ್ಛೇದ ೪೫ಕ್ಕೆ ಬದಲು ಈ ಮುಂದಿನ ಅನುಚ್ಛೇದವನ್ನು ಸೇರಿಸಲು ಪ್ರಸ್ತಾವಿಸಲಾಗಿದೆ :—

೪೫, ಬಿಡುಗಡೆ ಪತ್ರ ಎಂದರೆ, ಲಿಖಿತದ ಮೂಲಕ (ಪ್ರಕರಣ ೨೪ರ ಮೂಲಕ ಉಪಬಂಧಿಸಿರುವಂತಹ ಬಿಡುಗಡೆ ಪತ್ರವನ್ನು ಬಿಟ್ಟು) ಒಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಯ ಮೇಲಿನ ಅಥವಾ ಯಾವುದೇ ನಿರ್ದಿಷ್ಟ ಸ್ವತ್ತಿನ ಮೇಲಿನ ಒಂದು ಕ್ಲೇಮನ್ನು ಬಿಟ್ಟು ಕೊಡುತ್ತಾನೋ ಆ ಯಾವುದೇ ಲಿಖಿತ.

(ಎ) ಬಿಡುಗಡೆ ಪತ್ರದಲ್ಲಿ ಕೊಡಲಾದ ಕ್ಲೇಮಿನ ಮೊತ್ತದ ಅಥವಾ ಮೌಲ್ಯದ ಮೇಲೆ ಅಥವಾ ಅಕ್ಕಪಕ್ಕದಲ್ಲಿ ಆ ಕ್ಲೇಮಿಗಿರುವ ಸರಾಸರಿ ಮೌಲ್ಯ, ಇವುಗಳಲ್ಲಿ ಯಾವುದು ಅಧಿಕವೊ ಅದರ ಮೇಲೆ	ಬಿಡುಗಡೆ ಪತ್ರದಲ್ಲಿ ಕೊಡಲಾದ ಮೊತ್ತ ಅಥವಾ ಮೌಲ್ಯ ಅಥವಾ ಅಕ್ಕಪಕ್ಕದಲ್ಲಿ ಆ ಕ್ಲೇಮಿಗಿರುವ ಸರಾಸರಿ ಮೌಲ್ಯ —ಇವುಗಳಲ್ಲಿ ಯಾವುದು ಅಧಿಕವೊ ಅದಕ್ಕೆ ಒಂದು ಬಾಂಡ್‌ಗೆ (ನಂ. ೧೨) ಇರುವಷ್ಟೇ ಶುಲ್ಕ,
(ಬಿ) ಕ್ಲೇಮು ಪ್ರತಿಫಲಕ್ಕಾಗಿ ಮಾಡಿರುವುದಾದರೆ	ಪ್ರತಿಫಲದ ಮೊತ್ತಕ್ಕೆ ಸಮಾನವಾದ ಮಾರುಕಟ್ಟೆ ಮೌಲ್ಯಕ್ಕಾಗಿ ಹಸ್ತಾಂತರಣಕ್ಕೆ (ನಂ. ೨೦) ಇರುವಷ್ಟೇ ಶುಲ್ಕ

ಅನುಬಂಧ—9

ಮೋಟಾರು ವಾಹನ ತೆರಿಗೆಯನ್ನು ಈಗಿನ ದರಗಳನ್ನು ಮತ್ತು ಪರಿಷ್ಕರಿಸಲು ಉದ್ದೇಶಿಸಿರುವ ದರಗಳನ್ನು ತೋರಿಸುವ ಪಟ್ಟಿ
(ಪ್ಯಾರಾ ೮೬)

ಕ್ರಮ ಸಂಖ್ಯೆ		ವಾಹನಗಳ ವರ್ಗ	ಈಗಿರುವ ತೆರಿಗೆ ದರ (ರೂಪಾಯಿಗಳಲ್ಲಿ)	ಉದ್ದೇಶಿತ ತೆರಿಗೆ ದರ (ರೂಪಾಯಿಗಳಲ್ಲಿ)
೧		೨	೩	೪
ಭಾಗ ಎಎ ಅನುಸೂಚಿ :				
೧		೫೦ ಸಿಸಿ ಸಾಮರ್ಥ್ಯಕ್ಕೆ ಮೀರಿದ ಆದರೆ ೩೦೦ ಸಿಸಿಗೆ ಮೀರದ ಮೋಟಾರ್ ಸೈಕಲ್‌ಗಳು	೮೫೦ ಎಲ್‌ಟಿಟಿ	೧೫೦೦ ಎಲ್‌ಟಿಟಿ
೨		೩೦೦ ಸಿಸಿ ಸಾಮರ್ಥ್ಯಕ್ಕೆ ಮೀರಿದ, ಆದರೆ ಅಥವಾ ಸೈಡ್‌ಕಾರ್ ಅಥವಾ ಟ್ರೈಲರನ್ನು ಜೋಡಿಸಿದ ಮೋಟಾರ್ ಸೈಕಲ್‌ಗಳು	೧೧೦೦ ಎಲ್‌ಟಿಟಿ	೨೦೦೦ ಎಲ್‌ಟಿಟಿ
ಭಾಗ ಎ ಅನುಸೂಚಿ :				
೨	ಎ)	ಡ್ರೈವರ್‌ನನ್ನು ಹೊರತು ಪಡಿಸಿ ೫ ಪ್ರಯಾಣಿಕರಿಗೆ ಅವಕಾಶವಿರುವ ಮೋಟರ್ ಟ್ಯಾಕ್ಸಿ ಕ್ಯಾಬ್‌ಗಳು	೧೫೦ ಪ್ರತಿ ಮೂರು ತಿಂಗಳಿಗೆ	೬೦ ಪ್ರತಿ ಸೀಟಿಗೆ ಪ್ರತಿ ಮೂರು ತಿಂಗಳಿಗೆ
	ಬಿ)	ಡ್ರೈವರ್‌ನನ್ನು ಹೊರತುಪಡಿಸಿ ೫ ಪ್ರಯಾಣಿಕರಿಗೆ ಅವಕಾಶವಿರುವ ಮೋಟರ್ ಟ್ಯಾಕ್ಸಿ ಕ್ಯಾಬನ್ನು ಬಿಟ್ಟು ಇತರೆ (ಸುಖಾಸೀನ ವಾಹನಗಳು)	೧೫೦ ಪ್ರತಿ ಮೂರು ತಿಂಗಳಿಗೆ	೫೦ ಪ್ರತಿ ಸೀಟಿಗೆ ಪ್ರತಿ ಮೂರು ತಿಂಗಳಿಗೆ
	ಸಿ)	ಡ್ರೈವರ್‌ನನ್ನು ಹೊರತುಪಡಿಸಿ ೧೨ ಜನ ಪ್ರಯಾಣಿಕರಿಗೆ ಮೀರದಂತೆ ೬ ಜನರನ್ನು ಒಯ್ಯಲು ಅನುಮತಿ ಇರುವ ಟ್ಯಾಕ್ಸಿ ಕ್ಯಾಬ್‌ಗಳು	೧೫೦ ಪ್ರತಿ ಸೀಟಿಗೆ ಪ್ರತಿ ಮೂರು ತಿಂಗಳಿಗೆ	೧೬೦ ಪ್ರತಿ ಸೀಟಿಗೆ ಪ್ರತಿ ಮೂರು ತಿಂಗಳಿಗೆ
೩		೧೨ ಜನರಿಗೆ ಮೀರಿ ಹೆಚ್ಚಿನ ಜನರನ್ನು ಒಯ್ಯಲು ಅನುಮತಿ ಇರುವ ಮತ್ತು ಅವುಗಳ ಒಟ್ಟು ಮೈಲುದರವು ಪ್ರತಿ ದಿನಕ್ಕೆ ೧೦೦ ಕಿಲೋ ಮೀಟರು ಮೀರುವಂಥ ವಾಹನಗಳು (ಅಂತರರಾಜ್ಯ)	೨೫೦ ಪ್ರತಿ ಸೀಟಿಗೆ ಪ್ರತಿ ಮೂರು ತಿಂಗಳಿಗೆ	೨೭೫ ಪ್ರತಿ ಸೀಟಿಗೆ ಪ್ರತಿ ಮೂರು ತಿಂಗಳಿಗೆ
೪		ಬಹು ಅಚ್ಚು ಹೊಂದಿರುವ ವಾಹನಗಳು :		
	ಎ)	ಹೇರಿದ ತೂಕ ೧೨೦೦೦ ಕಿಲೋ ಗ್ರಾಂಗೆ ಮೀರುವ ಆದರೆ ೧೫೦೦೦ ಕಿಲೋಗ್ರಾಂಗೆ ಮೀರದ	೧೮೮೫ ಪ್ರತಿ ಮೂರು ತಿಂಗಳಿಗೆ	೧೭೮೫ ಪ್ರತಿ ಮೂರು ತಿಂಗಳಿಗೆ

ಬಿ) ಹೇರಿದ ತೂಕ ೧೫೦೦೦ ಕಿಲೋಗ್ರಾಂಗೆ ಮೀರಿದಲ್ಲಿ	೧೪೮೫ ,, + ೧೫೦೦೦ ಕಿಲೋಗ್ರಾಂಗೆ ಮೀರಿದ ಪ್ರತಿ ೨೫೦ ಕಿಲೋಗ್ರಾಂ ಅಥವಾ ಅದರ ಭಾಗಕ್ಕೆ ೬೫ ರೂಪಾಯಿಗಳು	೧೭೮೫ ,, + ೫೦೦೦ ಕಿಲೋಗ್ರಾಂಗೆ ಮೀರಿದ ಪ್ರತಿ ೨೫೦ ಕಿಲೋಗ್ರಾಂ ಅಥವಾ ಅದರ ಭಾಗಕ್ಕೆ ೫೦ ರೂಪಾಯಿಗಳು
೫ (ಎ) ಟ್ರಾಕ್ಟರುಗಳು (ವ್ಯವಸಾಯ)	೩೭–೫೦ ಪ್ರತಿ ಮೂರು ತಿಂಗಳಿಗೆ	೧೫೦೦ ಎಲ್.ಟಿ.ಟಿ.
(ಬಿ) ಟ್ರೈಲರುಗಳು (ವ್ಯವಸಾಯ)	...	೧೦೦೦ ಎಲ್.ಟಿ.ಟಿ.
(ಸಿ) ಪವರ್ ಟಿಲ್ಲರ್ ಟ್ರೈಲರುಗಳು (ವ್ಯವಸಾಯ)	೩೭–೫೦ ಪ್ರತಿ	೫೦೦ ಎಲ್.ಟಿ.ಟಿ.
೬ ರಿಗ್ ಮೌಂಟೆಡ್ ಸರಕು ವಾಹನಗಳು	೫೦೦ ಪ್ರತಿ ಮೂರು ತಿಂಗಳಿಗೆ	೧೦೦೦ ಪ್ರತಿ ಮೂರು ತಿಂಗಳಿಗೆ
೭ ಮೋಟಾರು ಕಾರುಗಳು :—		
ಕಂಪನಿಗಳ ಮಾಲೀಕತ್ವದಲ್ಲಿರುವ ತೂಕ ಹೇರಿರದ ಮೋಟಾರು ಕಾರುಗಳು :—		
(ಎ) ೧೫೦೦ ಕಿ. ಗ್ರಾಂ. ಗೆ ಹೆಚ್ಚಿರುವ	೨೭೦ ಪ್ರತಿ ಮೂರು ತಿಂಗಳಿಗೆ	೫೦೦ ಪ್ರತಿ ಮೂರು ತಿಂಗಳಿಗೆ
(ಬಿ) ೧೫೦೦ ಕಿ. ಗ್ರಾಂ. ಗೆ ಹೆಚ್ಚಿರುವ ಆದರೆ ೨೦೦೦ ಕಿ. ಗ್ರಾಂ. ಗೆ ಮೀರಿರದ	೩೭೦ ಪ್ರತಿ ಮೂರು ತಿಂಗಳಿಗೆ	೫೯೦ ಪ್ರತಿ ಮೂರು ತಿಂಗಳಿಗೆ
(ಸಿ) ೨೦೦೦ ಕಿ. ಗ್ರಾಂ.ಗೆ ಮೀರಿರುವ ಆದರೆ ೩೦೦೦ ಕಿ. ಗ್ರಾಂ.ಗೆ ಮೀರಿರದ	೬೦೦ ಪ್ರತಿ ಮೂರು ತಿಂಗಳಿಗೆ	೮೩೦ ಪ್ರತಿ ಮೂರು ತಿಂಗಳಿಗೆ
(ಡಿ) ೩೦೦೦ ಕಿ. ಗ್ರಾಂ.ಗೆ ಮೀರಿರುವ ಆದರೆ ೪೦೦೦ ಕಿ. ಗ್ರಾಂ.ಗೆ ಮೀರಿರದ	೯೦೦ ಪ್ರತಿ ಮೂರು ತಿಂಗಳಿಗೆ	೧೧೩೦ ಪ್ರತಿ ಮೂರು ತಿಂಗಳಿಗೆ
(ಇ) ೪೦೦೦ ಕಿ. ಗ್ರಾಂ. ಮೀರಿರುವ ಆದರೆ ೫೦೦೦ ಕಿ. ಗ್ರಾಂ.ಗೆ ಮೀರಿರದ	೧೨೦೦ ಪ್ರತಿ ಮೂರು ತಿಂಗಳಿಗೆ	೧೪೩೦ ಪ್ರತಿ ಮೂರು ತಿಂಗಳಿಗೆ
(ಎಫ್) ೫೦೦೦ ಕಿ. ಗ್ರಾಂ.ಗೆ ಮೀರಿರುವ	೧೫೦೦ ಪ್ರತಿ ಮೂರು ತಿಂಗಳಿಗೆ	೧೭೩೦ ಪ್ರತಿ ಮೂರು ತಿಂಗಳಿಗೆ
(ಜಿ) ಟ್ರೈಲರುಗಳನ್ನು ಎಳೆಯಲು ಬಳಸಲಾಗುವ ವಾಹನಗಳ ಸಂಬಂಧದಲ್ಲಿ ಸಂದಾಯ ಮಾಡತಕ್ಕ ಹೆಚ್ಚಿನ ತೆರಿಗೆ	೩೦ ಪ್ರತಿ ಮೂರು ತಿಂಗಳಿಗೆ	೫೦ ಪ್ರತಿ ಮೂರು ತಿಂಗಳಿಗೆ

೧	೨	೩	೪
೮	ಭಾರತದ ಹೊರಗೆ ತಯಾರಿಸಿದ ಅಥವಾ ಭಾಗಗಳನ್ನು ಜೋಡಿಸಿದ ೧೯೬೦ ಕ್ಕಿಂತ ಹಳೆಯ ಮಾದರಿಯ ಮತ್ತು ಕಂಪನಿಗಳನ್ನು ಹೊರತುಪಡಿಸಿ ವ್ಯಕ್ತಿಗಳು ಮಾಲಿಕತ್ವ ಹೊಂದಿರುವ ಆಮದು ಮಾಡಿಕೊಂಡ ತೂಕ ಹೇರಿರದ ಕಾರುಗಳು		
	(ಎ) ೧೫೦೦ ಕಿ.ಗ್ರಾಂ.ಗೆ ಮೀರಿರದ	೧೫೦ ಪ್ರತಿ ಮೂರು ತಿಂಗಳಿಗೆ	೩೦೦ ಪ್ರತಿ ಮೂರು ತಿಂಗಳಿಗೆ
	(ಬಿ) ೧೫೦೦ ಕಿ. ಗ್ರಾಂ.ಗೆ ಮೀರಿರುವ ಆದರೆ ೨೦೦೦ ಕಿ.ಗ್ರಾಂ.ಗೆ ಮೀರಿರದ	೨೪೦ ಪ್ರತಿ ಮೂರು ತಿಂಗಳಿಗೆ	೩೬೦ ಪ್ರತಿ ಮೂರು ತಿಂಗಳಿಗೆ
	(ಸಿ) ೨೦೦೦ ಕಿ. ಗ್ರಾಂ.ಗೆ ಮೀರಿರುವ ಆದರೆ ೩೦೦೦ ಕಿ. ಗ್ರಾಂ.ಗೆ ಮೀರಿರದ	೪೨೦ ಪ್ರತಿ ಮೂರು ತಿಂಗಳಿಗೆ	೫೨೦ ಪ್ರತಿ ಮೂರು ತಿಂಗಳಿಗೆ
	(ಡಿ) ೩೦೦೦ ಕಿ.ಗ್ರಾಂ.ಗೆ ಮೀರಿರುವ ಆದರೆ ೪೦೦೦ ಕಿ.ಗ್ರಾಂ.ಗೆ ಮೀರಿರದ	೬೦೦ ಪ್ರತಿ ಮೂರು ತಿಂಗಳಿಗೆ	೭೨೦ ಪ್ರತಿ ಮೂರು ತಿಂಗಳಿಗೆ
	(ಇ) ೪೦೦೦ ಕಿ.ಗ್ರಾಂ.ಗೆ ಮೀರಿರುವ ಆದರೆ ೫೦೦೦ ಕಿ.ಗ್ರಾಂ. ಮೀರಿರದ	೮೦೦ ಪ್ರತಿ ಮೂರು ತಿಂಗಳಿಗೆ	೯೨೦ ಪ್ರತಿ ಮೂರು ತಿಂಗಳಿಗೆ
	(ಎಫ್) ೫೦೦೦ ಕಿ.ಗ್ರಾಂ. ಮೀರಿರುವ	೧೦೦೦ ಪ್ರತಿ ಮೂರು ತಿಂಗಳಿಗೆ	೧೧೨೦ ಪ್ರತಿ ಮೂರು ತಿಂಗಳಿಗೆ
	(ಜಿ) ಟ್ರೈಲರುಗಳನ್ನು ಎಳೆಯಲು ಬಳಸುವಂತ ವಾಹನಗಳ ಸಂಬಂಧದಲ್ಲಿ ಸಂದಾಯ ಮಾಡತಕ್ಕ ಹೆಚ್ಚಿನ ತೆರಿಗೆ	೩೦ ಪ್ರತಿ ಮೂರು ತಿಂಗಳಿಗೆ	೫೦ ಪ್ರತಿ ಮೂರು ತಿಂಗಳಿಗೆ
೯	ಭಾರತದ ಹೊರಗೆ ತಯಾರಿಸಿದ ಅಥವಾ ಭಾಗಗಳನ್ನು ಜೋಡಿಸಿರುವ ೧೯೬೦ರ ನಂತರ ಮಾದರಿಯ ಮತ್ತು ಕಂಪನಿಗಳನ್ನು ಹೊರತುಪಡಿಸಿ ವ್ಯಕ್ತಿಗಳು ಮಾಲಿಕತ್ವ ಹೊಂದಿರುವ ಆಮದು ಮಾಡಿಕೊಂಡ ತೂಕ ಹೇರಿರದ ಕಾರುಗಳು		
	(ಎ) ೧೫೦೦ ಕಿ.ಗ್ರಾಂ.ಗೆ ಮೀರಿರದ	೧೮೦ ಪ್ರತಿ ಮೂರು ತಿಂಗಳಿಗೆ	೧೦೦೦ ಪ್ರತಿ ಮೂರು ತಿಂಗಳಿಗೆ
	(ಬಿ) ೧೫೦೦ ಕಿ.ಗ್ರಾಂ.ಗೆ ಮೀರಿರುವ ಆದರೆ ೨೦೦೦ ಕಿ.ಗ್ರಾಂ.ಗೆ ಮೀರಿರದ	೨೪೦ ಪ್ರತಿ ಮೂರು ತಿಂಗಳಿಗೆ	೧೦೬೦ ಪ್ರತಿ ಮೂರು ತಿಂಗಳಿಗೆ
	(ಸಿ) ೨೦೦೦ ಕಿ.ಗ್ರಾಂ.ಗೆ ಮೀರಿರುವ ಆದರೆ ೩೦೦೦ ಕಿ.ಗ್ರಾಂ.ಗೆ ಮೀರಿರದ	೪೦೦ ಪ್ರತಿ ಮೂರು ತಿಂಗಳಿಗೆ	೧೨೨೦ ಪ್ರತಿ ಮೂರು ತಿಂಗಳಿಗೆ
	(ಡಿ) ೩೦೦೦ ಕಿ.ಗ್ರಾಂ.ಗೆ ಮೀರಿರುವ ಆದರೆ ೪೦೦೦ ಕಿ.ಗ್ರಾಂ.ಗೆ ಮೀರಿರದ	೬೦೦ ಪ್ರತಿ ಮೂರು ತಿಂಗಳಿಗೆ	೧೪೨೦ ಪ್ರತಿ ಮೂರು ತಿಂಗಳಿಗೆ

(ಇ) ೪೦೦೦ ಕಿ.ಗ್ರಾಂ.ಗೆ ಮೀರಿರುವ ಆದರೆ ೫೦೦೦ ಕಿ.ಗ್ರಾಂ.ಗೆ ಮೀರಿರದ	೮೦೦ ಪ್ರತಿ ಮೂರು ತಿಂಗಳಿಗೆ	೧೬೨೦ ಪ್ರತಿ ಮೂರು ತಿಂಗಳಿಗೆ
(ಎಫ್) ೫೦೦೦ ಕಿ.ಗ್ರಾಂ.ಗೆ ಮೀರಿರುವ	೧೦೦೦ ಪ್ರತಿ ಮೂರು ತಿಂಗಳಿಗೆ	೧೮೨೦ ಪ್ರತಿ ಮೂರು ತಿಂಗಳಿಗೆ
(ಜಿ) ಟ್ರೈಲರುಗಳನ್ನು ಎಳೆಯಲು ಬಳಸುವಂಥ ವಾಹನಗಳ ಸಂಬಂಧದಲ್ಲಿ ಸಂದಾಯ ಮಾಡತಕ್ಕ ಹೆಚ್ಚಿನ ತೆರಿಗೆ	೩೦ ಪ್ರತಿ ಮೂರು ತಿಂಗಳಿಗೆ	೫೦ ಪ್ರತಿ ಮೂರು ತಿಂಗಳಿಗೆ
೧೦ ಈ ಅನುಸೂಚಿಯಲ್ಲಿ ಮೊದಲೇ ಹೇಳಿದ ಉಪಬಂಧಗಳ ಮೇರೆಗೆ ತೆರಿಗೆಗೆ ಬದ್ಧವಾಗಿರದ ತೂಕ ಹೇರಿರದ ಮೋಟಾರು ವಾಹನಗಳು :		
(ಎ) ೧೫೦೦ ಕಿ.ಗ್ರಾಂ.ಗೆ ಮೀರಿರದ	೯೦ ಪ್ರತಿ ಮೂರು ತಿಂಗಳಿಗೆ	೧೦೦ ಪ್ರತಿ ಮೂರು ತಿಂಗಳಿಗೆ
(ಬಿ) ೧೫೦೦ ಕಿ.ಗ್ರಾಂ.ಗೆ ಮೀರಿರುವ ಆದರೆ ೨೦೦೦ ಕಿ.ಗ್ರಾಂ.ಗೆ ಮೀರಿರದ	೧೨೦ ,,	೧೩೦ ,,
(ಸಿ) ೨೦೦೦ ಕಿ.ಗ್ರಾಂ.ಗೆ ಮೀರಿರುವ ಆದರೆ ೩೦೦೦ ಕಿ.ಗ್ರಾಂ.ಗೆ ಮೀರಿರದ	೨೦೦ ,,	೨೧೦ ,,
(ಡಿ) ೩೦೦೦ ಕಿ.ಗ್ರಾಂ.ಗೆ ಮೀರಿರುವ ಆದರೆ ೪೦೦೦ ಕಿ.ಗ್ರಾಂ.ಗೆ ಮೀರಿರದ	೩೦೦ ,,	೩೧೦ ,,
(ಇ) ೪೦೦೦ ಕಿ.ಗ್ರಾಂ.ಗೆ ಮೀರಿರುವ ಆದರೆ ೫೦೦೦ ಕಿ.ಗ್ರಾಂ.ಗೆ ಮೀರಿರದ	೪೦೦ ,,	೪೧೦ ,,
(ಎಫ್) ೫೦೦೦ ಕಿ.ಗ್ರಾಂ.ಗೆ ಮೀರಿರುವ	೫೦೦ ,,	೫೧೦ ,,
(ಜಿ) ಟ್ರೈಲರುಗಳನ್ನು ಎಳೆಯಲು ಬಳಸುವಂತ ವಾಹನಗಳ ಸಂಬಂಧದಲ್ಲಿ ಸಂದಾಯ ಮಾಡತಕ್ಕ ಹೆಚ್ಚಿನ ತೆರಿಗೆ		
(i) ೧೦೦೦ ಕಿ.ಗ್ರಾಂ.ಗೆ ಮೀರಿದ ಪ್ರತಿ ಟ್ರೈಲರ್‌ಗೆ	೨೦ ,,	೩೦ ,,
(ii) ೧೦೦೦ ಕಿ.ಗ್ರಾಂ.ಗೆ ಮೀರಿರುವ ಆದರೆ ಆದೇ ಟ್ರೈಲರಿಗಾಗಿ ಈ ಕಲಂ ಮೇರೆಗೆ ಎರಡು ಅಥವಾ ಹೆಚ್ಚು ವಾಹನಗಳಿಗೆ ತೆರಿಗೆ ವಿಧಿಸತಕ್ಕದ್ದಲ್ಲ.	೩೦ ,,	೪೦ ,,

ಅನುಬಂಧ—೧೦

(ಪ್ಯಾರಾ ೮೯)

೧೯೬೦–೬೧ನೇ ವರ್ಷಕ್ಕಾಗಿ ನಿವ್ವಳ ಹೆಚ್ಚುವರಿ ಸಂಪನ್ಮೂಲ ಸಂಗ್ರಹಣೆ

(ಲಕ್ಷ ರೂ. ಗಳಲ್ಲಿ)

			ಹೆಚ್ಚುವರಿ ಸಂಪನ್ಮೂಲ ಸಂಗ್ರಹಣೆ	ಪರಿಹಾರ
೧	ಮಾರಾಟ ತೆರಿಗೆ	...	೩೦೮೦	
೨	ವೃತ್ತಿ ತೆರಿಗೆ	...	೧೯೪೫	
೩	ಪ್ರವೇಶ ತೆರಿಗೆ	...	....	೨೦
೪	ಜೂಜು ತೆರಿಗೆ	...	೪೦೦	
೫	ರಾಜ್ಯ ಅಬಕಾರಿ	...	೬೧೧೦	
೬	ಸ್ಟ್ಯಾಂಪುಗಳು ಮತ್ತು ನೋಂದಣಿ	...	೨೦೦೦	
೭	ಮೋಟಾರು ವಾಹನ ತೆರಿಗೆ	...	೧೨೩೫	
			೧೪೭೭೦	೨೦
	ನಿವ್ವಳ ಹೆಚ್ಚುವರಿ ಸಂಪನ್ಮೂಲ ಸಂಗ್ರಹಣೆ		೧೪೭೫೦	

ಅಧ್ಯಕ್ಷರು.—ಆಯವ್ಯಯ ಪತ್ರವನ್ನು ಮಂಡಿಸಲಾಗಿದೆ. ಸದನವನ್ನು ಈಗ ಮುಕ್ತಾಯಗೊಂಡು ಸೋಮವಾರ ದಿನಾಂಕ ೧೯–೩–೧೯೬೦ ರಂದು ಬೆಳಿಗ್ಗೆ ೧೧ ಗಂಟೆಗೆ ಪುನಃ ಸೇರುವುದು.

(ಸದನವು ೩–೧೫ ಗಂಟೆಗೆ ಮುಕ್ತಾಯಗೊಂಡು ದಿನಾಂಕ : ೧೯–೩–೧೯೬೦ರ ಸೋಮವಾರದಂದು ಬೆಳಿಗ್ಗೆ ೧೧ ಗಂಟೆಗೆ ಸೇರಲು ನಿರ್ಧರಿಸಿತು)